ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಬೆಂಗಳೂರು
ಭಾನುವಾರ, 29 ಮಾರ್ಚ್ 2026
ಸಂಪುಟ 33, ಸಂಚಿಕೆ 147, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital



ಎಸ್-400 ಕ್ಷಿಪಣಿ ರಕ್ಷಣಾ ವ್ಯವಸ್ಥೆ ವಿಸ್ತರಣೆ

೧೨

ನಕ್ಸಲ್ ಪಿಡುಗು ನಿರ್ಮೂಲನೆ ಬಗ್ಗೆ ನಾಳೆ ಲೋಕ ಚರ್ಚೆ



೧೨

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಆಶ್ಲೇಷ

ದಿನದ ಮಾತು

ಕೃಷಿಕನಿಗೆ ದುರ್ಭಿಕ್ಷವಿಲ್ಲ, ಮೌನವಾಗಿರುವವನಿಗೆ ಕಲಹವಿಲ್ಲ, ಜಾಗೃತನಾಗಿರುವವನಿಗೆ ಭಯವಿಲ್ಲ.

▲ಸುಭಾಷಿತ

ರಂಗಭೂಮಿ; ಎಡವಟ್ಟಿನಲ್ಲಿಯೂ ರಸ!

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ಮೈಸೂರು: 12 ಕೋಟಿ ರೂ. ಮೌಲ್ಯದ ಡ್ರಗ್ಸ್ ಪತ್ತೆ

• ಮೈಸೂರು: ಜಿಲ್ಲೆಯ ಹುಣಸೂರು ತಾಲೂಕಿನಲ್ಲಿ ಪೊಲೀಸರು 12 ಕೋಟಿ ರೂಪಾಯಿ ಮೌಲ್ಯದ ಡ್ರಗ್ ದಾಸ್ತಾನು ಪತ್ತೆ ಮಾಡಿದ್ದಾರೆ. ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ದಾಸನಪುರ ಗ್ರಾಮದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಮೈಸೂರು ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ. ಮೈಸೂರು ಸಿದ್ದಿಖಿ ಮೊಹಲ್ಲಾ ನಿವಾಸಿ ಮೊಹಮ್ಮದ್ ಇರ್ಫಾನ್ ಮತ್ತು ಹುಣಸೂರಿನ ಮೊಹಮ್ಮದ್ ಇರ್ಫಾನ್ ಬಂಧಿತ ಆರೋಪಿಗಳು.

• ಪುಟ ೩

ಹುಸಿ ಬಾಂಬ್ ಬೆದರಿಕೆ: ಮೈಸೂರಲ್ಲಿ ಆರೋಪಿ ಸೆರೆ

• ಮೈಸೂರು: ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಸಂದೇಶಗಳನ್ನು ಕಳುಹಿಸಿ ರಾಜ್ಯದಲ್ಲಿ ಆತಂಕ ಸೃಷ್ಟಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ದೆಹಲಿ ಪೊಲೀಸರು ಮೈಸೂರಿನಲ್ಲಿ ಬಂಧಿಸಿದ್ದಾರೆ. ಮೈಸೂರಿನ ಬೃಂದಾವನ ಬಡಾವಣೆಯ 2ನೇ ಹಂತ, 6ನೇ ಕ್ರಾಸ್‌ನಲ್ಲಿರುವ ಮನೆಯೊಂದರಿಂದ ಕಾರ್ಯಾಚರಣೆ ನಡೆಸುತ್ತಿದ್ದ ಶ್ರೀನಿವಾಸ್ ಅಲಿಯಾಸ್ ಶ್ರೀನಿವಾಸ್ ಲೂಯಿಸ್ ಬಂಧಿತ ಆರೋಪಿ. ಈತ ದೇಶದ ನಾನಾ ಭಾಗಗಳಿಗೆ ಒಟ್ಟು 1,100ಕ್ಕೂ ಹೆಚ್ಚು ಬಾಂಬ್ ಬೆದರಿಕೆ ಇಮೇಲ್ ಮಾಡಿ ಆತಂಕ ಸೃಷ್ಟಿಸಿದ್ದ.

• ಪುಟ ೨

ಕಾಂಗ್ರೆಸ್ ತಲೆಯಲ್ಲಿ ಮಾತ್ರ ಮನುವಾದ: ಛಲವಾದಿ

• ಪುಟ ೩

ಖಾಸಗಿ ಆಸ್ಪತ್ರೆಗಳಲ್ಲಿ ಒಪಿಡಿ ಚಿಕಿತ್ಸೆಗೆ ಮಾತ್ರ ಅವಕಾಶ

• ಪುಟ ೩

ಎರಡೂ ಕಡೆ ಗೆಲುವು: ಸಿಎಂ ಸಿದ್ದರಾಮಯ್ಯ

• ಪುಟ ೩

ರಾಮನವಮಿ ಮೆರವಣಿಗೆ ಮೇಲೆ ಕಿಡಿಗೇಡಿಗಳ ಕಲ್ಲು

• ಪುಟ ೧೨

ಛತ್ತೀಸ್‌ಗಢ: ಮೂವರು ಮಾವೋಗಳ ಶರಣಾಗತಿ

• ಪುಟ ೧೨

ಭಯೋತ್ಪಾದಕರಿಗೆ ಆಶ್ರಯ ಮುಂದುವರಿಕೆ: ಅಮೆರಿಕ ಎಚ್ಚರಿಕೆ

ಪಾಕ್ ಉಗ್ರರ ತಾಣ

• ಹೊಸದಿಲ್ಲಿ: ಪ್ರಮುಖವಾಗಿ ಜಮ್ಮು-ಕಾಶ್ಮೀರ ಸೇರಿ ಭಾರತವನ್ನು ಗುರಿಯಾಗಿಸಿಕೊಂಡಿರುವ ಪಾಕಿಸ್ತಾನ, ಭಯೋತ್ಪಾದಕ ಸಂಘಟನೆಗಳ ನಿರಂತರ ಚಟುವಟಿಕೆಯ ಕೇಂದ್ರವಾಗಿ ಮುಂದುವರಿದಿದೆ ಎಂದು ಅಮೆರಿಕ ಕಾಂಗ್ರೆಸ್‌ನ ಸಂಶೋಧನಾ ಸೇವೆ(ಸಿಆರ್‌ಎಸ್) ವರದಿ ಎಚ್ಚರಿಕೆ ನೀಡಿದೆ.

ಪಾಕಿಸ್ತಾನದ ಮಣ್ಣಿನಿಂದ ಕಾರ್ಯನಿರ್ವಹಿಸುತ್ತಿರುವ 15 ಸಂಘಟನೆಗಳನ್ನು ಗುರುತಿಸಿರುವ ಈ ವರದಿ ಮಾ.25ರಂದು ಬಿಡುಗಡೆಯಾಗಿದ್ದು, ಇವುಗಳಲ್ಲಿ ಹೆಚ್ಚಿನವುಗಳನ್ನು ಅಮೆರಿಕ ವಿದೇಶಿ ಭಯೋತ್ಪಾದಕ ಸಂಘಟನೆಗಳು ಎಂದು ಘೋಷಿಸಿದೆ. ಇದರಲ್ಲಿ ಲಷ್ಕರ್-ಎ-ತೈಬಾ, ಜೈಶ್-ಎ-ಮೊಹಮ್ಮದ್, ಹರಕತ್-ಉಲ್ ಜಿಹಾದ್ ಇಸ್ಲಾಮಿ, ಹರಕತ್ ಉಲ್-ಮುಜಾಹಿದ್ದೀನ್ ಮತ್ತು ಹಿಜ್ಬುಲ್ ಮುಜಾಹಿದ್ದೀನ್ ನಂತಹ ಭಾರತ ಮತ್ತು ಕಾಶ್ಮೀರ ಕೇಂದ್ರಿತ ಗುಂಪುಗಳು ಸೇರಿವೆ. ಈ ಹಿಂದೆ ಹಲವು ಮಿಲಿಟರಿ ಕಾರ್ಯಾಚರಣೆಗಳು ಮತ್ತು 2014ರ ರಾಷ್ಟ್ರೀಯ ಕ್ರಿಯಾ ಯೋಜನೆ(ಎನ್‌ಎಪಿ) ನಡೆದಿದ್ದರೂ, ಈ ಗುಂಪುಗಳು ಯಾವುದೇ ಶಿಕ್ಷೆಯ ಭಯವಿಲ್ಲದೆ ಕಾರ್ಯನಿರ್ವಹಿಸುತ್ತಿವೆ ಎನ್ನಲಾಗಿದೆ.



ಲಷ್ಕರ್-ಎ-ತೈಬಾ ಚಟುವಟಿಕೆಗಳು: 1980ರ ದಶಕದ ಕೊನೆಯಲ್ಲಿ ರಚನೆಯಾದ ಮತ್ತು ಹಫೀಜ್ ಸಯೀದ್ ನೇತೃತ್ವದ ಲಷ್ಕರ್-ಎ-ತೈಬಾ, ಪಂಜಾಬ್ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ನೆಲೆಗಳನ್ನು ಹೊಂದಿದೆ.

166 ಜನರ ಸಾವಿಗೆ ಕಾರಣವಾದ 2008ರ ಮುಂಬೈ ದಾಳಿಯನ್ನು ಸಂಘಟಿಸಿದ್ದ ಈ ಗುಂಪು, ನಿರ್ಬಂಧಗಳಿಂದ ತಪ್ಪಿಸಿಕೊಳ್ಳಲು ತನ್ನ ಹೆಸರನ್ನು ಜಮಾತ್-ಉದ್-ದವಾ ಎಂದು ಬದಲಾಯಿಸಿಕೊಂಡಿದೆ. ಇದು ಪ್ರಸ್ತುತ ಸಾವಿರಾರು ಹೋರಾಟಗಾರರನ್ನು ಹೊಂದಿದ್ದು, 2001ರಿಂದ ವಿದೇಶಿ ಭಯೋತ್ಪಾದಕ ಸಂಘಟನೆ ಎಂದು ಗುರುತಿಸಲ್ಪಟ್ಟಿದೆ.

ಜೈಶ್-ಎ-ಮೊಹಮ್ಮದ್ ಕಾರ್ಯಾಚರಣೆ: 2000ರಲ್ಲಿ ಮಸೂದ್ ಅಜರ್‌ನಿಂದ ಸ್ಥಾಪಿಸಲ್ಪಟ್ಟ ಜೈಶ್-ಎ-ಮೊಹಮ್ಮದ್, ಭಾರತದ ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರಿಸುವ ಗುರಿ ಹೊಂದಿದೆ. ಈ ಗುಂಪು ಭಾರತ, ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನದಾದ್ಯಂತ ಸುಮಾರು 500 ಸಶಸ್ತ್ರ ಬೆಂಬಲಿಗರನ್ನು ಹೊಂದಿದೆ. ಇದು 2001ರ ಭಾರತೀಯ ಸಂಸತ್ತಿನ ಮೇಲಿನ ದಾಳಿಯಲ್ಲಿ ಭಾಗಿಯಾಗಿತ್ತು ಮತ್ತು ಅಮೆರಿಕದ ವಿರುದ್ಧ ಯುದ್ಧ ಘೋಷಿಸಿದೆ.



ಆಂತರಿಕ ಭದ್ರತೆಗೆ ಸವಾಲು

ದಕ್ಷಿಣ ಏಷ್ಯಾ ತಜ್ಞ ಕೆ. ಅಲನ್ ಕ್ರಾನ್‌ಸ್ಟಾಡ್ ಸಿದ್ಧಪಡಿಸಿದ ಈ ವರದಿ, ಪಾಕಿಸ್ತಾನದ ಗುಂಪುಗಳನ್ನು 5 ವಿಧಗಳಾಗಿ ವರ್ಗೀಕರಿಸಿದೆ. ಪಾಕಿಸ್ತಾನ, ಬಲೂಚಿಸ್ತಾನ ಮತ್ತು ಖೈಬರ್ ಪಖ್ತೂನ್ಖ್ವಾದಲ್ಲಿ ಆಂತರಿಕ ಹಿಂಸಾಚಾರವನ್ನು ಎದುರಿಸುತ್ತಿದ್ದರೂ, ಅಲ್ಲಿನ ಮದ್ರಸಾಗಳು ಉಗ್ರಗಾಮಿ ಸಿದ್ಧಾಂತವನ್ನು ಪೋಷಿಸುವ ಬೋಧನೆಗಳನ್ನು ಮುಂದುವರಿಸಿವೆ ಎಂದು ವರದಿ ತಿಳಿಸಿದೆ.

ಕಾಶ್ಮೀರ ಕೇಂದ್ರಿತ ಉಗ್ರಗಾಮಿತ್ವ



1989ರಲ್ಲಿ ಸ್ಥಾಪನೆಯಾದ ಮತ್ತು 2017ರಲ್ಲಿ ಅಮೆರಿಕದಿಂದ ಭಯೋತ್ಪಾದಕ ಗುಂಪು ಎಂದು ಘೋಷಿಸಲ್ಪಟ್ಟ ಹಿಜ್ಬುಲ್ ಮುಜಾಹಿದ್ದೀನ್, 1,500 ಸದಸ್ಯರ ಕೇಡರ್ ಹೊಂದಿದೆ. ಈ ಗುಂಪು ಕಾಶ್ಮೀರದ ಸ್ವಾತಂತ್ರ್ಯ ಅಥವಾ ಜಮ್ಮು ಮತ್ತು ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರ್ಪಡೆಗೊಳಿಸಲು ಪ್ರಯತ್ನಿಸುತ್ತಿದೆ. ಈ ಪ್ರಾದೇಶಿಕ ಗುಂಪುಗಳು ಅಲ್ ಖೈದಾದಂತಹ ಜಾಗತಿಕ ಸಂಘಟನೆಗಳ ಜತೆಗೂಡಿ ಕಾರ್ಯನಿರ್ವಹಿಸುತ್ತಿವೆ.

ಪ್ರಾದೇಶಿಕ ಭದ್ರತೆಯ ಮೇಲೆ ಪರಿಣಾಮ

ಭಯೋತ್ಪಾದಕ ಚಟುವಟಿಕೆಗಳನ್ನು ತಡೆಗಟ್ಟಲು ಪಾಕಿಸ್ತಾನ 2023ರಲ್ಲಿ ಕೆಲವು ಕ್ರಮಗಳನ್ನು ತೆಗೆದುಕೊಂಡಿದೆ ಎಂದು ಅಮೆರಿಕದ ವಿದೇಶಾಂಗ ಇಲಾಖೆ ಹೇಳಿದೆ. ಆದರೂ ಭಯೋತ್ಪಾದಕ ಮೂಲಸೌಕರ್ಯಗಳು ಇನ್ನೂ ಅಸ್ತಿತ್ವದಲ್ಲಿವೆ. ಪ್ರಾದೇಶಿಕ ಶಾಂತಿಗಾಗಿ ಈ ಗಡಿಯಾಚೆಗಿನ ಭಯೋತ್ಪಾದನೆಯನ್ನು ಹತ್ತಿಕ್ಕುವುದು ಅತ್ಯಗತ್ಯ ಎಂದು ಭಾರತ ಪ್ರತಿಪಾದಿಸಿದೆ. ಪಾಕಿಸ್ತಾನ ಈ ಜಾಲಗಳನ್ನು ನಿಯಂತ್ರಿಸಲು ವಿಫಲವಾಗಿರುವುದು, ನೆರೆಹೊರೆಯ ರಾಷ್ಟ್ರಗಳೊಂದಿಗೆ ಉದ್ವಿಗ್ನತೆ ಹೆಚ್ಚಿಸುತ್ತಿದೆ ಎಂದು ವರದಿಯಲ್ಲಿ ತೀರ್ಮಾನಕ್ಕೆ ಬರಲಾಗಿದೆ.

ಮಸ್ಕ್ ಇದ್ದರೆಂಬ ವರದಿ ತಳ್ಳಿಹಾಕಿದ ಜೈಸ್ವಾಲ್

ಮೋದಿ-ಟ್ರಂಪ್ ಮಧ್ಯೆ ಮಾತ್ರ ಮಾತು: ಎಂಇಎ

• ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ದೂರವಾಣಿ ಕರೆಯಲ್ಲಿ ಬಿಲಿಯನೇರ್ ಉದ್ಯಮಿ ಎಲಾನ್ ಮಸ್ಕ್ ಇದ್ದರೆಂಬ ನ್ಯೂಯಾರ್ಕ್ ಟೈಮ್ಸ್ ವರದಿಯನ್ನು ಶನಿವಾರ ತಳ್ಳಿಹಾಕಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ), ದೂರವಾಣಿ ಕರೆಯಲ್ಲಿ ಇಬ್ಬರು ನಾಯಕರಷ್ಟೇ ಮಾತುಕತೆ ನಡೆಸಿದ್ದಾರೆಂದು ಸ್ಪಷ್ಟಪಡಿಸಿದೆ.



ಮಂಗಳವಾರದ ದೂರವಾಣಿ ಕರೆಯಲ್ಲಿ ಇಬ್ಬರು ನಾಯಕರ ನಡುವೆಯಷ್ಟೇ ಮಾತುಕತೆ ನಡೆದಿದೆ ಎಂದು ಎಂಇಎ ವಕ್ತಾರ ರಣಧೀರ್ ಜೈಸ್ವಾಲ್ ಶನಿವಾರ ಸ್ಪಷ್ಟಪಡಿಸಿದ್ದಾರೆ.

ಟ್ರಂಪ್ ಜತೆಗಷ್ಟೇ ಮಾತುಕತೆ: ನಾವು (ನ್ಯೂಯಾರ್ಕ್ ಟೈಮ್ಸ್) ವರದಿಯನ್ನು ನೋಡಿದ್ದೇವೆ. ಮಾ.24ರ ದೂರವಾಣಿ ಸಂಭಾಷಣೆಯಲ್ಲಿ ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಟ್ರಂಪ್ ಅವರ ನಡುವೆಯಷ್ಟೇ ನಡೆದಿದೆ. ಈ ಹಿಂದೆಯೇ ಹೇಳಿದಂತೆ ಮಧ್ಯಪ್ರಾಚ್ಯದ ಪರಿಸ್ಥಿತಿಯ ಕುರಿತು ಉಭಯ ನಾಯಕರು ಪರಸ್ಪರ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದೇವೆ ಎಂದು ಜೈಸ್ವಾಲ್ ತಿಳಿಸಿದ್ದಾರೆ.

ವಾಷಿಂಗ್ಟನ್ ಸ್ಪಷ್ಟನೆ ನೀಡಲಿ: ನಮ್ಮ ಪ್ರಧಾನಿ ಟ್ರಂಪ್ ಅವರೊಂದಿಗಷ್ಟೇ ಮಾತನಾಡಿದ್ದಾರೆ. ಪ್ರಧಾನಿ ಜತೆ ಇನ್ಯಾರೂ ಮಾತುಕತೆ ನಡೆಸಿಲ್ಲ. ಕೊನೆಯಲ್ಲಿ ಇನ್ಯಾರಾದರೂ ಇದ್ದರೇ ಅಥವಾ ಸಂಭಾಷಣೆಯನ್ನು ಕೇಳಿಸಿಕೊಳ್ಳುತ್ತಿದ್ದರೇ ಎಂಬ ಕುರಿತು ವಾಷಿಂಗ್ಟನ್ ಸ್ಪಷ್ಟನೆ ನೀಡಬೇಕಿದೆ ಎಂದು ಜೈಸ್ವಾಲ್ ಹೇಳಿದ್ದಾರೆ.

➡ ಪುಟ ೨



ಮೋದಿ, ಟ್ರಂಪ್ ಮಾತುಕತೆ ಫಲಪ್ರದ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೊಂದಿಗೆ ಮಂಗಳವಾರ ಫಲಪ್ರದ ಮಾತುಕತೆ ನಡೆಸಿದ್ದಾರೆ ಎಂದು ಅಮೆರಿಕದ ಶ್ವೇತಭವನ ಶುಕ್ರವಾರ ತಡರಾತ್ರಿ ತಿಳಿಸಿದೆ. ಪ್ರಧಾನಿ ಮೋದಿ ಅವರೊಂದಿಗೆ ಅಧ್ಯಕ್ಷ ಟ್ರಂಪ್ ಅತ್ಯುತ್ತಮ ಬಾಂಧವ್ಯ ಹೊಂದಿದ್ದಾರೆ. ಇದು ಫಲಪ್ರದ ಮಾತುಕತೆ ಆಗಿತ್ತು ಎಂದು ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಕ್ಯಾರೋಲಿನ್ ಲೆವಿಟ್ ಹೇಳಿದ್ದಾರೆ. ಫೆ.28ರಂದು ಇಸ್ರೇಲ್ ಮತ್ತು ಅಮೆರಿಕ ಸೇನೆಗಳು ಇರಾನ್ ಮೇಲೆ ಜಂಟಿ ಬಾಂಬ್ ದಾಳಿ ಆರಂಭಿಸಿದ ಬಳಿಕ ಉಭಯ ನಾಯಕರು ಮೊದಲ ಬಾರಿಗೆ ಮಾತುಕತೆ ನಡೆಸಿದ್ದಾರೆ.

ಯುಎಇಯಲ್ಲಿ ಐವರು ಭಾರತೀಯರಿಗೆ ಗಾಯ

ಸಮರಕ್ಕೆ ಹೌತಿ ಬಂಡುಕೋರರ ಸೇರ್ಪಡೆ

• ಪುಟ ೧೨

ಸೌದಿ ರಾಜಕುಮಾರನ ಜತೆ ಮೋದಿ ಚರ್ಚೆ

ಪ್ರಧಾನಿ ಮೋದಿಯವರು ಶನಿವಾರ ಸೌದಿ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ ರೊಂದಿಗೆ ದೂರವಾಣಿ ಮಾತುಕತೆ ನಡೆಸಿದ್ದು, ಪ್ರಾದೇಶಿಕ ಇಂಧನ ಮೂಲಸೌಕರ್ಯಗಳ ಮೇಲಿನ ದಾಳಿ ಖಂಡಿಸಿದ್ದಾರೆ.

➡ ಪುಟ ೨

ಸಭಾಭವನ ಉದ್ಘಾಟನೆ, ತುಲಾಭಾರದಲ್ಲಿ ಡಾ.ಭಾಗ್ವತ್ ಹೇಳಿಕೆ

ಭಾರತದಿಂದ ವಿಶ್ವ ಗೆಲ್ಲುವ ಕಾರ್ಯ

• ಚಿಕ್ಕೋಡಿ: ಸಮಾಜ ಕೇವಲ ಕಾನೂನಿನ ಆಧಾರದ ಮೇಲೆ ನಡೆಯುವುದಿಲ್ಲ, ಪರಸ್ಪರ ನಂಬಿಕೆ, ಸಹಾನುಭೂತಿ ಮತ್ತು ಆಪ್ತಭಾವದ ಮೇಲೆ ನಿಂತಿದೆ. ಇಂತಹ ನಂಬಿಕೆಯಿಂದ ಭಾರತ ವಿಶ್ವವನ್ನು ಗೆಲ್ಲುವ ಕೆಲಸ ಮಾಡುತ್ತಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಹೇಳಿದರು.

ತಾಲೂಕಿನ ಯಡೂರ ಗ್ರಾಮದ ವೀರಭದ್ರೇಶ್ವರ ದೇವಸ್ಥಾನ ಹಾಗೂ ಕಾಡದೇವರ ಮಠದ ವತಿಯಿಂದ ನಿರ್ಮಿಸಿದ ಗುರುಕುಲದ ಸಭಾಭವನ ಕಟ್ಟಡವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, ಭಾರತ ಜಗತ್ತಿಗೆ ಆಪ್ತಭಾವದ ಮಾರ್ಗ ತೋರಿಸಿದಾಗ ಮಾತ್ರ ನಿಜವಾದ 'ವಿಶ್ವಗುರು'ವಾಗಲು ಸಾಧ್ಯವಿದೆ. ಭಾರತೀಯ ಪರಂಪರೆಯ ಬ್ರಹ್ಮ ಮತ್ತು ಈಶ್ವರ ಪರಿಕಲ್ಪನೆ ಹಾಗೂ ಯೂನಿವರ್ಸಲ್ ಕಾನ್ಷಿಯಸ್‌ನೆಸ್ ನಡುವೆ ಸಾಮ್ಯತೆ ಇದೆ.

➡ ಪುಟ ೨



ಟಿಎಂಸಿ ಸರ್ಕಾರದ ವಿರುದ್ಧ ಆರೋಪ ಪಟ್ಟಿ ಬಿಡುಗಡೆ ಮಾಡಿದ ಶಾ

ಭದ್ರತೆಗೆ ಸಂಬಂಧಿತ ಚುನಾವಣೆ

• ಕೋಲ್ಕತ್ತಾ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ಬಂಗಾಳಕ್ಕೆ ಸೀಮಿತ ಹೋರಾಟವಲ್ಲ, ಬದಲಾಗಿ ದೇಶದ ಭದ್ರತೆಗಾಗಿ ನಡೆಯುವ ಹೋರಾಟವೆಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಟಿಎಂಸಿ ಸರಕಾರದ ವಿರುದ್ಧ ಆರೋಪ ಪಟ್ಟಿ ಬಿಡುಗಡೆ ಮಾಡುವ ಮೂಲಕ ಬಂಗಾಳದಲ್ಲಿ ಬಿಜೆಪಿ ಪರ ಚುನಾವಣಾ ಪ್ರಚಾರಕ್ಕೆ ಸಚಿವ ಶಾ ರಂಗು ನೀಡಿದ್ದಾರೆ.

ಟಿಎಂಸಿಯ ತುಷ್ಟೀಕರಣ ರಾಜನೀತಿ, ಭ್ರಷ್ಟಾಚಾರ ಮತ್ತು ರಾಜಕೀಯ ಹಿಂಸಾಚಾರಗಳಿಂದಾಗಿ ಕಳೆದ 15 ವರ್ಷಗಳಲ್ಲಿ ಪಶ್ಚಿಮ ಬಂಗಾಳವು ಅಕ್ರಮ ನುಸುಳುವಿಕೆಗೆ ದೇಶದ ಪ್ರಧಾನ ಕಾರಿಡಾರ್ ಆಗಿ ಪರಿವರ್ತಿತವಾಗಿದೆ ಎಂದು ಆರೋಪಿಸುವ ಮೂಲಕ, ತಾನು ಪ.ಬಂಗಾಳದ ಜನಸಾಮಾನ್ಯರ ಪರ ಹೋರಾಟಗಾರ್ತಿ ಎಂದು ಬಿಂಬಿಸಿಕೊಂಡು ಬಂದಿರುವ ಮಮತಾ ಬ್ಯಾನರ್ಜಿ ಇಮೇಜ್‌ಗೆ ಬಂಗಾಳದಲ್ಲೇ ಸಚಿವರು ಹೊಡೆತ ನೀಡಿದ್ದಾರೆ.

➡ ಪುಟ ೨



ಗಡಿಗೆ ಬೇಲಿ ಹಾಕಲು ಬಿಡದ ಮಮತಾ

ಟಿಎಂಸಿ ಸರ್ಕಾರ ಅಕ್ರಮ ನುಸುಳುಕೋರರ ಮತ ಬ್ಯಾಂಕ್ ಸೃಷ್ಟಿಸುವ ದುರುದ್ದೇಶ ಹೊಂದಿದೆ. ಹಾಗಾಗಿಯೇ ಕೇಂದ್ರದ ಸತತ ಮನವಿ ಹೊರತೂ ಬಾಂಗ್ಲಾದೇಶ ಗಡಿಯುದ್ದಕ್ಕೂ ಭಾರತದ ಗಡಿಗೆ ತಂತಿಬೇಲಿ ಬಿಗಿಯಲು ಅಗತ್ಯವಿರುವ ಜಮೀನನ್ನು ಕೇಂದ್ರಕ್ಕೆ ನೀಡಿಲ್ಲ.

➡ ಪುಟ ೨

ವೈರಮುಡಿ ಉತ್ಸವ ಅದ್ದೂರಿ

• ಮೇಲುಕೋಟೆ: ಶ್ರೀ ಚೆಲುವನಾರಾಯಣ ಸ್ವಾಮಿಯವರ ವಿಶ್ವವಿಖ್ಯಾತ ವೈರಮುಡಿ ಕಿರೀಟಧಾರಣ ಮಹೋತ್ಸವ ಮಹಾವಿಷ್ಣುವಿನ ಅನುಗ್ರಹಕ್ಕೆ ಪ್ರಮುಖ ದಿನವಾದ ಶನಿವಾರ ರಾತ್ರಿ ಲಕ್ಷಾಂತರ ಭಕ್ತರ ಜಯಘೋಷದೊಂದಿಗೆ ಅದ್ದೂರಿಯಾಗಿ ನೆರವೇರಿತು. ಪರಾಭವನಾಮ ಸಂವತ್ಸರದ ಮೀನ-ಚೈತ್ರಮಾಸದ ಪುಷ್ಯ ನಕ್ಷತ್ರದ ಶುಭದಿನಕೂಡಿದ ಬ್ರಹ್ಮೋತ್ಸವದ ನಾಲ್ಕನೇ ತಿರುನಾಳ್ ದಿನದಂದು ಸಾಕ್ಷಾತ್ ಭಗವಂತನದ್ದೆಂದೇ ಪ್ರತೀತಿಯಿರುವ ವೈರಮುಡಿ ಕಿರೀಟವನ್ನು ಶ್ರೀದೇವಿ ಭೂದೇವಿಯರೊಂದಿಗೆ ಗರುಡಾರೂಢನಾದ ಚೆಲುವನಾರಾಯಣಸ್ವಾಮಿಗೆ ರಾತ್ರಿ 8 ಗಂಟೆಗೆ ತೊಡಿಸಲಾಯಿತು. ಇದಕ್ಕೂ ಮುನ್ನ ಗರುಡದೇವನ ಉತ್ಸವ ನಡೆದ ನಂತರ ಜಿಲ್ಲಾ ಉಸ್ತುವಾರಿ ಸಚಿವ ಚೆಲುವರಾಯಸ್ವಾಮಿ ಸಮಕ್ಷಮದಲ್ಲಿ, ಮಹಾಮಂಗಳಾರತಿ ನೆರವೇರಿಸಿ, ಭಕ್ತರ ಗೋವಿಂದ ನಾಮ ಘೋಷಣೆಯೊಂದಿಗೆ ವೈರಮುಡಿ ಉತ್ಸವಕ್ಕೆ ಚಾಲನೆ ದೊರೆಯಿತು.

• ವಿವರ ಪುಟ ೩



ಮಧ್ಯಪ್ರಾಚ್ಯ ಯುದ್ಧ ಹಿನ್ನೆಲೆ ಪ್ರಧಾನಿ ಮೋದಿ ಕರೆ

ಏಕತೆಯಿಂದ ಬಿಕ್ಕಟ್ಟು ಎದುರಿಸಿ

• ನೋಯ್ಡಾ: ಜಾಗತಿಕ ಸವಾಲುಗಳನ್ನು ಎದುರಿಸಿಕೊಂಡು ವಿಕಸಿತ ಭಾರತ ಸಾಕಾರಗೊಳಿಸಲು 140 ಕೋಟಿ ಭಾರತೀಯರೊಳಗೆ ಏಕತೆ ಮತ್ತು ಸಾಮೂಹಿಕ ಪ್ರಯತ್ನಗಳ ಅಗತ್ಯವಿದೆ. ಸವಾಲುಗಳ ನಿಭಾಯಿಸಲು ಸಮರ್ಪಣಾ ಭಾವ ಮತ್ತು ಏಕತೆಯಿಂದ ದುಡಿಯುವಂತೆ ದೇಶವಾಸಿಗಳಿಗೆ ಕರೆ ನೀಡಿರುವ ಪ್ರಧಾನಿ ನರೇಂದ್ರ ಮೋದಿ, ಇದೇ ನಮ್ಮ ಬಲವೆಂದು ಹೇಳಿದ್ದಾರೆ.

ಪ.ಏಷ್ಯಾ ಬಿಕ್ಕಟ್ಟನ್ನು ಉಲ್ಲೇಖಿಸಿ, ಸರಕಾರ ಭಾರತದ ಹಿತಾಸಕ್ತಿ ಮತ್ತು ದೇಶದ ಕುಟುಂಬಗಳು ಹಾಗೂ ರೈತರ ಹಿತ ಕಾಯಲು ಪ್ರಾಧಾನ್ಯತೆ ನೀಡಿದೆ ಎಂದು ನುಡಿದರು.

ಸಮಯದ ಉಳಿತಾಯ ಮತ್ತು ವೆಚ್ಚ ಕಡಿತಗಳಿಂದ ಜನರ ಬದುಕನ್ನು ಸುಗಮಗೊಳಿಸಲು ಸರಕಾರ ಆದ್ಯತೆ ನೀಡಿದೆ. ಪ.ಏಷ್ಯಾ ಸಂಘರ್ಷ ಜಾಗತಿಕ ಬಿಕ್ಕಟ್ಟು, ಆದರೆ ನಾವು ಭಾರತದ ಹಿತಾಸಕ್ತಿಗಳ ರಕ್ಷಣೆಗೆ ಪ್ರಾಧಾನ್ಯತೆ ಕೊಡಬೇಕು. ಜಾಗತಿಕ ಬಿಕ್ಕಟ್ಟನ್ನು ಅದನ್ನು ಮೌನವಾಗಿ, ಸಹನೆ ಮತ್ತು ಏಕತೆಯಿಂದ ಎದುರಿಸಬೇಕೆಂಬುದು ಜನರಲ್ಲಿ ನನ್ನ ಪುನರಪಿ ಮನವಿಯಾಗಿದೆ ಎಂದರು.

➡ ಪುಟ ೨



ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಉದ್ಘಾಟಿಸಿದ ಪ್ರಧಾನಿ ಮೋದಿ.

ಜನರ ಸುರಕ್ಷೆಗೆ ಅಗತ್ಯ ಕ್ರಮ

ಪ.ಏಷ್ಯಾದಲ್ಲಿ ಸುಮಾರು ಒಂದು ತಿಂಗಳಿಂದ ಸಮರ ನಡೆಯುತ್ತಿದೆ. ಸಂಘರ್ಷದಿಂದ ಉದ್ಭವಿಸಿರುವ ಸವಾಲುಗಳನ್ನು ಭಾರತವು ಸಂಪೂರ್ಣ ಶಕ್ತಿಯುತವಾಗಿ ಎದುರಿಸುತ್ತಿದೆ. ದೇಶದ ಜನರ ಸುರಕ್ಷೆಗಾಗಿ ಸರಕಾರ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ.

➡ ಪುಟ ೨

ನೇಪಾಳ ಮಾಜಿ ಪ್ರಧಾನಿ ಶರ್ಮಾ ಒಲಿ ಬಂಧನ

• ಕಠ್ಮಂಡು: ತನಿಖಾ ಆಯೋಗದ ವರದಿಯನ್ನು ಜಾರಿಗೆ ತರುವ ಸರ್ಕಾರದ ನಿರ್ಧಾರದ ಬೆನ್ನಲ್ಲೇ ನೇಪಾಳದ ಪೊಲೀಸರು ಶನಿವಾರ ಮಾಜಿ ಪ್ರಧಾನಿ ಕೆ.ಪಿ. ಶರ್ಮಾ ಒಲಿ ಮತ್ತು ಮಾಜಿ ಗೃಹ ಸಚಿವ ರಮೇಶ್ ಲೇಖಕ್ ಅವರನ್ನು ಬಂಧಿಸಿದ್ದಾರೆ. ಕಳೆದ ವರ್ಷ ಸೆ.8 ಮತ್ತು 9ರಂದು ನಡೆದ ಜೆನ್ ಝಿ ಚಳವಳಿಯನ್ನು ಹತ್ತಿಕ್ಕಿದ ಕ್ರಿಮಿನಲ್ ಆರೋಪಗಳನ್ನು ಒಲಿ ಮತ್ತು ಲೇಖಕ್ ಎದುರಿಸುತ್ತಿದ್ದಾರೆ. ಈ ಘಟನೆಯಲ್ಲಿ 76 ಜನರು ಮೃತಪಟ್ಟಿದ್ದರು. ಆರೋಪಿಗಳಿಗೆ ಮೂರರಿಂದ ಹತ್ತು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸುವಂತೆ ಆಯೋಗ ಶಿಫಾರಸು ಮಾಡಿದೆ.



➡ ಪುಟ ೨

ರಾಜ್ಯದ ಆರ್ಥಿಕ ವ್ಯವಸ್ಥೆ ಹದಗೆಟ್ಟಿದೆ: ಬೊಮ್ಮಾಯಿ

• **ಬಾಗಲಕೋಟೆ:** ರಾಜ್ಯದ ಜನರು ಸರ್ಕಾರದ ಮೇಲೆ ಇಟ್ಟ ಭರವಸೆ ಹುಸಿಯಾಗಿದೆ. ರಾಜ್ಯದ ಆರ್ಥಿಕ ವ್ಯವಸ್ಥೆ ಹದಗೆಟ್ಟಿದೆ. ಕೋವಿಡ್ ಸಂದರ್ಭದಲ್ಲಿ ಕೂಡ ಬಿಜೆಪಿ ಸರ್ಕಾರ ಆರ್ಥಿಕ ವ್ಯವಸ್ಥೆಯನ್ನು ಸುಸ್ಥಿತಿಯಾಗಿಟ್ಟುಕೊಂಡಿತ್ತು. ಆದರೆ, ಕಾಂಗ್ರೆಸ್ ಸರ್ಕಾರದ ಅವಧಿ ಮುಗಿಯುತ್ತಿದ್ದಂತೆ 6ರಿಂದ 7 ಲಕ್ಷ ಕೋಟಿ ರೂ.ಸಾಲವನ್ನು ರಾಜ್ಯದ ಜನರ ಮೇಲೆ ಹೊರೆಸಲಿದ್ದಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ನವನಗರದ ಬಿಜೆಪಿ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಮಾತನಾಡಿ, ಕೇಂದ್ರ ಸರ್ಕಾರ ರಾಜ್ಯಕ್ಕೆ ಅನುದಾನ ನೀಡುತ್ತಿಲ್ಲ ಎನ್ನುವ ಸಿದ್ದರಾಮಯ್ಯನವರು ಯುಪಿಎ ಸರ್ಕಾರವಿದ್ದಾಗ 700 ಕೋಟಿ ರೂ. ರೈಲ್ವೆ ಇಲಾಖೆಗೆ ನೀಡುತ್ತಿತ್ತು. ಈಗಿನ ನರೇಂದ್ರ ಮೋದಿ ಸರ್ಕಾರ ರಾಜ್ಯಕ್ಕೆ 7 ಸಾವಿರ ಕೋಟಿ ರೂ. ಅನುದಾನ ರೈಲ್ವೆ ಯೋಜನೆಗೆ ನೀಡುತ್ತಿದೆ ಎಂದು ಹೇಳಿದರು. ದೇಶಕ್ಕೆ ದೊಡ್ಡ ಸಮಸ್ಯೆ ಎದುರಾದಾಗ ಪ್ರಧಾನಿ ನರೇಂದ್ರ ಮೋದಿಯವರು ರಾಜ್ಯದ ಎಲ್ಲ ಮುಖ್ಯಮಂತ್ರಿಗಳ ಸಭೆ ನಡೆಸಿದರೆ ರಾಜ್ಯದ ಸಿಎಂ ಮಾತ್ರ ಗೈರು ಉಳಿಯುತ್ತಾರೆ. ನೀತಿ ಆಯೋಗದ ಸಭೆಗೂ ಹೋಗುವುದಿಲ್ಲ, ಕರ್ತವ್ಯ ಲೋಪವನ್ನು ರಾಜ್ಯದ ಸಿಎಂ ಎಸಗುವ ಮೂಲಕ ಉದ್ಧಟತನ ಪ್ರದರ್ಶನ ಮಾಡುತ್ತಾರೆ ಎಂದರು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪ್ರತಿವರ್ಷ 18 ಸಾವಿರ ಕೋಟಿ ರೂ.ಯುಕೆಪಿ ಯೋಜನೆಗೆ ಮೀಸಲಿಟ್ಟು ಯೋಜನೆಯನ್ನು ಮುಗಿಸುತ್ತೇವೆ ಎಂದು ಭರವಸೆ ನೀಡಿದವರು ಇತ್ತೀಚಿಗೆ ಬಜೆಟ್ ಮಂಡಿಸಿದಾಗ ಕೇವಲ 3 ಸಾವಿರ ಕೋಟಿ ಮೀಸಲಿಟ್ಟಿದ್ದಾರೆ. ಜನರ ಕಣ್ಣಿಗೆ ಮಣ್ಣು ಎರಚುವ ಕೆಲಸವನ್ನು ಕಾಂಗ್ರೆಸ್ ಮಾಡಿದೆ. ಕ್ಷಮೆಗೆ ಅರ್ಹವಿಲ್ಲದ ಅಪರಾಧವನ್ನು ಈ ಸರ್ಕಾರ ಮಾಡಿದೆ ಎಂದು ದೂರಿದರು.

ಬಸವೇಶ್ವರ ಜಾತ್ರೆ



ಕಲಬುರಗಿ ಜಿಲ್ಲೆಯ ಯಡ್ರಾಮಿಯ ಬಸವೇಶ್ವರ ಜಾತ್ರಾ ಮಹೋತ್ಸವ ಸಂಭ್ರಮದಿಂದ ಶನಿವಾರ ನೆರವೇರಿತು.

ಕೈ ಅಭ್ಯರ್ಥಿ ಪರ ಮತಯಾಚನೆ

• **ಬಾಗಲಕೋಟೆ:** ದಿ.ಎಚ್.ವೈ.ಮೇಟಿ ಅವರ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಲು ಉಮೇಶ ಮೇಟಿ ಅವರನ್ನು ಬೆಂಬಲಿಸಿ ಕಾಂಗ್ರೆಸ್ ಗೆಲ್ಲಿಸಬೇಕು ಎಂದು ಮಾಜಿ ಸಚಿವ ಅಜಯಕುಮಾರ ಸರನಾಯಕ ಹೇಳಿದರು.



ತಾಲೂಕಿನ ಬೇವೂರಗ್ರಾಮದಲ್ಲಿ ಶನಿವಾರ ನಡೆದ ಕಾಂಗ್ರೆಸ್ ಪಕ್ಷದ ಚುನಾವಣೆ ಸಭೆಯಲ್ಲಿ ಅವರು ಮಾತನಾಡಿದರು. ಗ್ರಾಮೀಣ ಭಾಗದ ಬಡಜನತೆಯ ಅನುಕೂಲಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರಕಾರ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಹಳ್ಳಿ ಹಳ್ಳಿಗಳಲ್ಲಿ ಈ ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಮೇಟಿ ಅವರ ಜನಪರ ಕಾರ್ಯಗಳನ್ನು ಗಮನಿಸಿ ಗ್ರಾಮೀಣ ಜನತೆ ಮತ್ತೊಮ್ಮೆ ಕಾಂಗ್ರೆಸ್ ಅಭ್ಯರ್ಥಿಗೆ ಆಶೀರ್ವದಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕರ್ನಾಟಕ ಪ್ರದೇಶ ಯುವಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಹುಲ್ ಜಾರಕಿಹೊಳಿ ಮಾತನಾಡಿ, ಎಚ್.ವೈ.ಮೇಟಿ ಅವರು ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ ತಮ್ಮ ಅವಧಿಯಲ್ಲಿ ಈ ಭಾಗದಲ್ಲಿ ನಿರಂತರ ಅಭಿವೃದ್ಧಿ ಕಾರ್ಯ ಕೈಗೊಂಡಿದ್ದಾರೆ. ಅವರ ಪುತ್ರ ಉಮೇಶ ಅವರನ್ನು ಎಲ್ಲರೂ ಬೆಂಬಲಿಸಬೇಕು ಎಂದು ಕೋರಿದರು. ಅಭ್ಯರ್ಥಿ ಉಮೇಶ ಮೇಟಿ, ಸಂಯುಕ್ತಾ ಪಾಟೀಲ ಮಾತನಾಡಿದರು. ಸರಳ ಸ್ವಭಾವ, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕಳಕಳಿಯಿಂದ ಎಚ್.ವೈ. ಮೇಟಿ ಅವರು ಅಪಾರ ಜನರ ಪ್ರೀತಿ ಗಳಿಸಿದ್ದಾರೆ. ನಗರದಲ್ಲಿ ವೈದ್ಯಕೀಯ ಮಹಾವಿದ್ಯಾಲಯ ಆಗಬೇಕೆಂಬ ಅವರ ಕನಸು ಕೂಡ ನನಸಾಗಲಿದೆ ಎಂದು ಹೇಳಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೇರಿ

◈ ಪ್ರತಿಪಕ್ಷದವರು ಅಯ್ಯವ್ವಯ್ಯವನ್ನು ಎಷ್ಟೇ ಟೀಕಿಸಿದರೂ ಮಾವಿನ ಹಣ್ಣು ಬೇವಿನ ಹಣ್ಣು ಆಗಲು ಸಾಧ್ಯವಿಲ್ಲ. - ಸಿದ್ದರಾಮಯ್ಯ

- ಆಳುವ ಪಕ್ಷದವರು ಎಷ್ಟೇ ಹೊಗಳಿದರೂ ಬೇವಿನ ಹಣ್ಣು ಮಾವಿನ ಹಣ್ಣು ಆಗಲು ಸಾಧ್ಯವಿಲ್ಲ ಅಂತಲೂ ವಾದಮಾಡಬಹುದು!

ದಿನ ಭವಿಷ್ಯ

ಮೇಷ
ಕುಟುಂಬ ಸದಸ್ಯರ ಮಿಶ್ರಣ ಈ ದಿನ. ಹೆಚ್ಚಿನ ಖರ್ಚು ಚಿಂತೆಗೆ ಕಾರಣವಾಗಲಿದೆ. ಆತ್ಮೀಯರ ಜತೆಗಿನ ಭೇಟಿಯಿಂದ ಸಂತೋಷ.

ವೃಷಭ
ಪ್ರಗತಿಗೆ ಬೇಕಾದ ಹಾದಿ ನಿಮ್ಮ ಮುಂದಿದೆ. ಸರಿಯಾದ ರೀತಿಯಲ್ಲಿ ಅದರ ಬಳಕೆ ಮಾಡಿಕೊಳ್ಳಿ. ಅನವಶ್ಯ ದ್ವೇಷ ಭಾವನೆ ಮುಂದುವರಿಸಬೇಡಿ.

ಮಿಥುನ
ಆದಾಯ- ವೆಚ್ಚದ ಮಧ್ಯೆ ಸಮತೋಲನ ಇರಲಿ. ಖರ್ಚು ಹೆಚ್ಚಾಗಿ ಸಾಪತ್ರಯ ಪಡುವಿರಿ. ಮಾನಸಿಕ ಶಾಂತಿಗೆ ಹಾತೊರೆಯುವಿರಿ.

ಕಟಕ
ಉದ್ಯೋಗ ಅವಕಾಶ ಹೆಚ್ಚಲಿದೆ. ಕೆರಿಯರ್ ಉನ್ನತಿಗೆ ಆದ್ಯತೆ ಕೊಡಿ. ನಿಮ್ಮನ್ನು ದುರ್ಬಳಕೆ ಮಾಡಿಕೊಳ್ಳಲು ಅವಕಾಶ ಕೊಡಬೇಡಿ.

ಸಿಂಹ
ಕೆಲಸದ ಮೇಲೆ ಉತ್ಸಾಹ ಕಳಕೊಳ್ಳುವಿರಿ. ಕೆಲವರ ಮೇಲೆ ಅಸಹನೆ ಹೆಚ್ಚಲಿದೆ. ಶಾಂತ ಮನಸ್ಥಿತಿಯಿಂದ ಯೋಚಿಸಿ ಕಾರ್ಯವೆಸಗಿ.

ಕನ್ಯಾ
ಅಶಾಂತ ಮನಸ್ಥಿತಿ. ಆಪ್ತರ ಜತೆಗೆ ಭಿನ್ನಮತ ಉಂಟಾದೀತು. ನಿಮಗೆ ಸಂಬಂಧಿಸದ ವಿಚಾರದಲ್ಲಿ ತಲೆಕೆಡಿಸಿಕೊಳ್ಳದಿರಿ. ವೆಚ್ಚ ಹೆಚ್ಚಲಿದೆ.

ತುಲಾ
ನೆಗೆಟಿವ್ ಚಿಂತನೆಯ ವ್ಯಕ್ತಿಗಳನ್ನು ದೂರವಿಡಿ. ಅವರ ಪ್ರಭಾವಕ್ಕೆ ಸಿಲುಕದಿರಿ. ಹಳೆಯ ಸ್ನೇಹಿತರ ಭೇಟಿ. ಕೌಟುಂಬಿಕ ಸಮಾಧಾನ.

ವೃಶ್ಚಿಕ
ಕುಟುಂಬ ಸದಸ್ಯರ ಜತೆ ಆತ್ಮೀಯ ಕಾಲಕ್ಷೇಪ. ಸಣ್ಣಪುಟ್ಟ ವಿಷಯಗಳು ಮನಸ್ಸು ಕೆಡಿಸಲು ಅವಕಾಶ ಕಲ್ಪಿಸಬೇಡಿ. ಸಹನೆಯಿಂದ ವರ್ತಿಸಿ.

ಧನು
ಪ್ರಮುಖ ಕೆಲಸಕ್ಕೆ ನೆರವು ಪಡೆಕೊಳ್ಳಿ. ಏಕಾಂಗಿ ಪ್ರಯತ್ನ ಫಲ ನೀಡದು. ಹೊಟ್ಟೆ ಸಮಸ್ಯೆ ಕಾಡಬಹುದು. ಆಪ್ತರ ಸಂಗದಲ್ಲಿ ಆನಂದ.

ಮಕರ
ನಿಮ್ಮ ವ್ಯವಹಾರ ಉನ್ನತಿಗೆ ಹೊಸ ಚಿಂತನೆ ಅಳವಡಿಸಿ. ಹಳೆಯ ದಾರಿ ಫಲ ನೀಡದು. ಎಲ್ಲರನ್ನು ನಂಬಿ ಕೆಡಬೇಡಿ. ಕೌಟುಂಬಿಕ ಸಹಕಾರ.

ಕುಂಭ
ಹಣಕ್ಕೆ ಸಂಬಂಧಿಸಿದ ಬಿಕ್ಕಟ್ಟು ಪರಿಹಾರ. ಸೂಕ್ತ ನೆರವು ಲಭ್ಯ. ಸಂಬಂಧದಲ್ಲಿ ಅನುಮಾನಕ್ಕೆ ಆಸ್ಪದ ನೀಡಬೇಡಿ. ವಸ್ತು ಖರೀದಿ, ಧನವ್ಯಯ.

ಮೀನ
ಬಿಡುವಿಲ್ಲದ ದಿನ. ಕೆಲವು ಹೊಣೆಗಾರಿಕೆ ಪೂರೈಸಬೇಕಾದ ಒತ್ತಡ. ಆಪ್ತರ ಜತೆ ಪ್ರವಾಸ ಸಂಭವ. ಭಾವನಾತ್ಮಕ ಏರುಪೇರು.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ 9,0,2,6

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಕಿಡಿ

ತೆರಿಗೆ ಲೂಟಿ ನಿಲ್ಲಿಸಿ: ಅಶೋಕ್

• **ಬೆಂಗಳೂರು:** ಮೊದಲು ನಿಮ್ಮ ಸರ್ಕಾರದ ತೆರಿಗೆ ಲೂಟಿಯನ್ನು ನಿಲ್ಲಿಸಿ, ನಂತರ ಬೇರೆಯವರಿಗೆ ಬುದ್ಧಿ ಹೇಳಿ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ವಿಪಕ್ಷ ನಾಯಕ ಆರ್.ಅಶೋಕ್ ತಿರುಗೇಟು ನೀಡಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಬಗ್ಗೆ ಶಿವಕುಮಾರ್ ಅವರು ನೀಡಿರುವ ಹೇಳಿಕೆಗಳು ಅತ್ಯಂತ ಹಾಸ್ಯಾಸ್ಪದ ಮತ್ತು ವಿಪರ್ಯಾಸದಿಂದ ಕೂಡಿವೆ ಎಂದು ಟೀಕಿಸಿದ್ದಾರೆ. ಕೇಂದ್ರ ಸರ್ಕಾರದತ್ತ ಬೆರಳು ತೋರಿಸುವ ಮುನ್ನ ತಮ್ಮದೇ ಕಾಂಗ್ರೆಸ್ ಸರ್ಕಾರ ಕನ್ನಡಿಗರ ಜೇಬಿಗೆ ಹೇಗೆ ಕತ್ತರಿ ಹಾಕುತ್ತಿದೆ ಎಂಬುದಕ್ಕೆ ಅವರು ಮೊದಲು ಉತ್ತರಿಸಬೇಕು. ಮೇ 2023ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಸಿಎಂ, ಡಿಸಿಎಂ ಜೋಡಿ ಜನ ಸಾಮಾನ್ಯರ ಹೊಟ್ಟೆಯ ಮೇಲೆ ಹೊಡೆದು ತಮ್ಮ ಗ್ಯಾರಂಟಿಗಳ ವೈಫಲ್ಯವನ್ನು ಮುಚ್ಚಿ ಹಾಕಲು ಪೆಟ್ರೋಲ್ ಮತ್ತು ಡೀಸೆಲ್ ಅನ್ನು ತಮ್ಮ ಪಾಲಿನ ಎಟಿಎಂ ಮಾಡಿಕೊಂಡಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಜನರಿಗೆ ದೊಡ್ಡ ಮಟ್ಟದ ನೆರವು

ಕೇಂದ್ರ ಸರ್ಕಾರ ಕೇಂದ್ರ ತೆರಿಗೆಯನ್ನು 10 ರೂ. ನಷ್ಟು ಕಡಿತಗೊಳಿಸಿ ಜನರಿಗೆ ದೊಡ್ಡ ಮಟ್ಟದ ನೆರವು ನೀಡಿದೆ. ಆದರೆ ನೀವು ಕೇವಲ 10 ಪೈಸೆಯನ್ನೂ ಕಡಿಮೆ ಮಾಡುವ ಮನಸ್ಸು ಮಾಡಿಲ್ಲ, ನಿಮಗೆ ನಿಜವಾಗಿಯೂ ಬಡವರ ಬಗ್ಗೆ ಕಾಳಜಿ ಇದ್ದರೆ, ಮೊದಲು ನೀವು ಏರಿಸಿರುವ ಈ 5.5 ರೂ. ದರವನ್ನು ವಾಪಸ್ ಪಡೆಯಿರಿ. ಕೇವಲ ಪತ್ರಿಕಾಗೋಷ್ಠಿ ನಡೆಸಿ ಸುಳ್ಳು ಹೇಳುವುದು ನಾಯಕತ್ವವಲ್ಲ, ಕರ್ನಾಟಕದ ಜನತೆಗೆ ನಿಮ್ಮ ಹಿಟ್ ಅಂಡ್ ರನ್ ರಾಜಕೀಯ ಚೆನ್ನಾಗಿ ಅರ್ಥವಾಗಿದೆ ಎಂದು ಟೀಕಾ ಪ್ರಹಾರ ನಡೆಸಿದ್ದಾರೆ.

ನಿಮ್ಮ ಕಾಂಗ್ರೆಸ್ ಸರ್ಕಾರದ ತೆರಿಗೆ ಲೂಟಿಯ ವರದಿ ಸ್ಪಷ್ಟವಾಗಿದೆ ಎಂದಿರುವ ಅವರು, 2024 ರ ಜೂನ್‌ನಲ್ಲಿ ಪೆಟ್ರೋಲ್ ಬೆಲೆಯನ್ನು ಸುಮಾರು 3 ರೂ. ಮತ್ತು ಡೀಸೆಲ್ ಬೆಲೆಯನ್ನು 3.5 ರೂ.ಗೆ ಹೆಚ್ಚಿಸಿದ ಕಾಂಗ್ರೆಸ್ ಸರ್ಕಾರ, ಏಪ್ರಿಲ್ 2025 ರಲ್ಲಿ ಮತ್ತೆ ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ 2 ರೂ.ನಷ್ಟು ಹೆಚ್ಚಿಸಿದೆ. ಇದರ ಒಟ್ಟು ಪರಿಣಾಮವೆಂದರೆ, ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಕರ್ನಾಟಕದಲ್ಲಿ ಡೀಸೆಲ್ ಬೆಲೆ ಬರೋಬ್ಬರಿ 5.5 ರೂ.ಗಳಷ್ಟು ಹೆಚ್ಚಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಇದು ಅಂತರಾಷ್ಟ್ರೀಯ ಮಾರುಕಟ್ಟೆಯ ಏರಿಳಿತವಲ್ಲ, ಬದಲಿಗೆ ಕೇವಲ ರಾಜ್ಯ ಸರ್ಕಾರದ ತೆರಿಗೆ ದಾಹದಿಂದ ಆಗಿರುವ ಬೆಲೆ ಏರಿಕೆ. ಕೇಂದ್ರ ಸರ್ಕಾರದತ್ತ ಬೆರಳು ತೋರಿಸುವ ಶಿವಕುಮಾರ್ ಅವರೇ, ರಾಜ್ಯದ ರೈತರು, ವಾಹನ ಸವಾರರು ಮತ್ತು ಜನಸಾಮಾನ್ಯರಿಗೆ ನಿಮ್ಮ ಸರ್ಕಾರ ನೀಡುತ್ತಿರುವ ಈ ಶಿಕ್ಷೆಗೆ ನಿಮ್ಮ ಬಳಿ ಉತ್ತರವಿದೆಯೇ? ಎಂದು ಪ್ರಶ್ನಿಸಿದ್ದಾರೆ.

ಕೇಂದ್ರ ಸರ್ಕಾರವು 2025 ರ ಏಪ್ರಿಲ್ ನಲ್ಲಿ ಅಬಕಾರಿ ಸುಂಕವನ್ನು ಮಾರ್ಪಾಡು ಮಾಡಿದಾಗ, ಅದರ ಹೊರೆ ಜನಸಾಮಾನ್ಯರ ಮೇಲೆ ಬೀಳದಂತೆ ತೈಲ ಕಂಪನಿಗಳೇ ಭರಿಸುವಂತೆ ನೋಡಿಕೊಂಡಿತು. ಆದರೆ ಕರ್ನಾಟಕದ ಕಾಂಗ್ರೆಸ್ ಸರ್ಕಾರ ತೆರಿಗೆ ಏರಿಸಿದಾಗಲೆಲ್ಲಾ ಅದರ ನೇರ ಹೊರೆ ಬಡವರ ಮೇಲೆ ಬೀಳುತ್ತಿದೆ ಎಂದು ಟೀಕಿಸಿದ್ದಾರೆ.

ಹಿಂದುಳಿದ ತಾಲೂಕುಗಳ ಅಭಿವೃದ್ಧಿಗೆ ಬದ್ಧ: ಎಂಬಿಪಾ

• **ಬೆಂಗಳೂರು:** ಉತ್ತರ ಕರ್ನಾಟಕದಲ್ಲಿ ಕೈಗಾರಿಕೆಗಳ ಬೆಳವಣಿಗೆ, ನೀರಾವರಿ ಸೌಲಭ್ಯ, ಉತ್ಕೃಷ್ಟ ಸಂಸ್ಥೆಗಳ ಸ್ಥಾಪನೆ ವಿಚಾರದಲ್ಲಿ ಕೇಂದ್ರ ಸರ್ಕಾರ ತಾರತಮ್ಯ ಮಾಡುತ್ತಿದೆ. ರಾಜ್ಯಕ್ಕೆ ಬರುತ್ತಿರುವ ಸೆಮಿ ಕಂಡಕ್ಟರ್ ಯೋಜನಾ ಪ್ರಸ್ತಾವನೆಗಳಿಗೆ ಅದು ಆದ್ಯತೆಯ ಮೇರೆಗೆ ಒಪ್ಪಿಗೆ ಕೊಡುತ್ತಿಲ್ಲ, ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಕಳಕಳಿ ವ್ಯಕ್ತಪಡಿಸಿರುವ ಬಿಜೆಪಿ ನಾಯಕ ಅರವಿಂದ ಬೆಲ್ಲದ ಅವರು ಈ ಸಂಬಂಧ ಗಮನ ಹರಿಸಿದರೆ ಅದಕ್ಕೆ ನಮ್ಮ ಸಹಕಾರವೂ ಇರಲಿದೆ ಎಂದು ಬೃಹತ್, ಮಧ್ಯಮ ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.



ಈ ಸಂಬಂಧ ವಿರೋಧ ಪಕ್ಷದ ಉಪ ನಾಯಕ ಬೆಲ್ಲದ ಅವರು ಮಾಡಿರುವ ಎಕ್ಸ್ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಸಚಿವ ಪಾಟೀಲ, ರಾಜ್ಯದಲ್ಲಿ 59 ಅತೀ ಹಿಂದುಳಿದ ತಾಲ್ಲೂಕುಗಳಿದ್ದು, ಇಷ್ಟೂ ತಾಲ್ಲೂಕುಗಳು ಕಲ್ಯಾಣ ಮತ್ತು ಕಿತ್ತೂರು ಕರ್ನಾಟಕದಲ್ಲೇ ಇರುವುದು ವಾಸ್ತವವಾಗಿದೆ. ಇಲ್ಲೆಲ್ಲ ನೀರಾವರಿ ಸೌಲಭ್ಯ ಒದಗಿಸಲು ಎಲ್ಲ ಸರಕಾರಗಳೂ ಪ್ರಯತ್ನಿಸಿವೆ. ಹಾಗೆಯೇ ಉತ್ತರ ಕರ್ನಾಟಕದಲ್ಲಿ ಕೂಡ ಅತ್ಯುತ್ತಮ ಶಿಕ್ಷಣ ಸಂಸ್ಥೆಗಳಿದ್ದು, ಇನ್ನೂ ಹೆಚ್ಚಿನ ಸಂಸ್ಥೆಗಳಿಗೆ ಅವಕಾಶವಿದೆ ಎಂದರು.

ಕರ್ನಾಟಕ ಬಿಟ್ಟು ಬೇರೆಬೇರೆ ರಾಜ್ಯಗಳ ಪ್ರಸ್ತಾವನೆಗಳಿಗೆ ಒಪ್ಪಿಗೆ ನೀಡುತ್ತಿರುವ ಕೇಂದ್ರ ಸರಕಾರವು ಕರ್ನಾಟಕದ ಕಡೆಗೂ ಗಮನ ನೀಡಬೇಕು. ಇಡೀ ದೇಶದಲ್ಲೇ ಅತ್ಯುತ್ತಮ ತಂತ್ರಜ್ಞಾನ ಹೊಂದಿರುವ ನಮ್ಮ ರಾಜ್ಯಕ್ಕೆ ಇದರಿಂದ ತೀವ್ರ ಅನ್ಯಾಯವಾಗುತ್ತಿದೆ. ಬೆಲ್ಲದ ಅವರು ಇದರ ಬಗ್ಗೆಯೂ ದನಿ ಎತ್ತಬೇಕು ಎಂದು ಅವರು ಆಗ್ರಹಿಸಿದ್ದಾರೆ. ಈ ಸಂಬಂಧವಾಗಿ ಬೆಲ್ಲದ ಅವರು ತಮ್ಮ ಪಕ್ಷದ ಸಂಸದರ ಮತ್ತು ಹಿರಿಯ ನಾಯಕರ ನಿಯೋಗವನ್ನು ದೆಹಲಿಗೆ ಕೊಂಡೊಯ್ದು ಸೆಮಿಕಂಡಕ್ಟರ್ ಉದ್ಯಮ ಬರಲು ಸಹಕರಿಸಬೇಕು ಎಂದರು.

ಮೋದಿ-ಟ್ರಂಪ್ ಮಧ್ಯೆ ಮಾತ್ರ ಮಾತು:ಎಂಇಎ

ಪುಟ ೧➡ **ಜಾಗತಿಕ ಶಾಂತಿ ಪುನರುಚ್ಚರಿಸಿದ್ದ ಮೋದಿ:** ಸಂಭಾಷಣೆಯಲ್ಲಿ, ಜಾಗತಿಕ ಶಾಂತಿ, ಸ್ಥಿರತೆ ಮತ್ತು ಆರ್ಥಿಕ ಸಮೃದ್ಧಿ ನೆಲೆಗೊಳಿಸಲು ಹಾರ್ಮುಜ್ ಜಲಸಂಧಿಯನ್ನು ತೆರೆಯುವುದು ಮತ್ತು ಅದರ ಸುರಕ್ಷತೆ ಖಚಿತಪಡಿಸುವುದು ಮುಖ್ಯ ಎಂಬುದನ್ನು ಮೋದಿ ಪುನರುಚ್ಚರಿಸಿದ್ದಾರೆ.

ಮಸ್ಕ್ ಪಾತ್ರದ ಬಗ್ಗೆ ನ್ಯೂಯಾರ್ಕ್ ಟೈಮ್ಸ್ ವರದಿ: ಮೋದಿ ಮತ್ತು ಟ್ರಂಪ್ ನಡುವಿನ ಮಂಗಳವಾರದ ದೂರವಾಣಿ ಕರೆಯಲ್ಲಿ ಎಲಾನ್ ಸೇರಿಕೊಂಡಿದ್ದರೆಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿತ್ತು. ಯುದ್ಧ ಸಂಕಷ್ಟದ ಸಮಯದಲ್ಲಿ ಎರಡು ರಾಷ್ಟ್ರಾಧ್ಯಕ್ಷರ ನಡುವಿನ ಸಂಭಾಷಣೆಯಲ್ಲಿ ಖಾಸಗಿ ವ್ಯಕ್ತಿಯೊಬ್ಬರು ಭಾಗವಹಿಸಿದ್ದು ಬಹಳ ಅಪರೂಪದ ಸಂಗತಿ. ಯುದ್ಧ ಸಂದರ್ಭದಲ್ಲಿ ಇಬ್ಬರು ನಾಯಕರ ದೂರವಾಣಿ ಕರೆಯಲ್ಲಿ ಒಬ್ಬ ಖಾಸಗಿ ವ್ಯಕ್ತಿಯೊಬ್ಬ ಭಾಗವಹಿಸಿದ್ದು ಅನಿರೀಕ್ಷಿತ ಬೆಳವಣಿಗೆಯೆಂದು ಹೆಸರು ಹೇಳಲು ಇಚ್ಛಿಸದ ಅಮೆರಿಕ ಅಧಿಕಾರಿಗಳು ಮಾಹಿತಿ ನೀಡಿರುವುದಾಗಿ ನ್ಯೂಯಾರ್ಕ್ ಟೈಮ್ಸ್ ಉಲ್ಲೇಖಿಸಿದೆ. ಮೋದಿ-ಟ್ರಂಪ್ ದೂರವಾಣಿ ಕರೆಯಲ್ಲಿ ಮಸ್ಕ್ ಭಾಗವಹಿಸಿದ್ದು, ಟ್ರಂಪ್ ಮತ್ತು ಮಸ್ಕ್ ನಡುವಿನ ಸಂಬಂಧ ಸುಧಾರಣೆಯ ಸೂಚಕವೆಂದೂ ವರದಿ ಮಾಡಿತ್ತು. ಕಳೆದ ವರ್ಷ ಟ್ರಂಪ್ ಟಾಸ್ಕ್‌ಫೋರ್ಸ್‌ನಿಂದ ಮಸ್ಕ್ ಹೊರನಡೆದಿದ್ದು, ಅವರಿಬ್ಬರ ನಡುವಿನ ಆತ್ಮೀಯತೆ ಹಳಸಿತ್ತು.

ಸೌದಿ ರಾಜಕುಮಾರನ ಜತೆ ಮೋದಿ ಚರ್ಚೆ

ಪುಟ ೧➡ ಮಧ್ಯಪ್ರಾಚ್ಯ ಯುದ್ಧ ಪರಿಸ್ಥಿತಿಯ ಕುರಿತು ಇಬ್ಬರು ನಾಯಕರು ಮಾತುಕತೆ ನಡೆಸಿದ್ದು, ಹಡಗುಗಳ ಮುಕ್ತ ಸಂಚಾರ ಖಚಿತಪಡಿಸಲು ಉಭಯ ನಾಯಕರು ಒಪ್ಪಿಕೊಂಡಿದ್ದಾರೆ. ಸೌದಿ ಅರೇಬಿಯಾ ರಾಜಕುಮಾರ ಮತ್ತು ಪ್ರಧಾನಿ ಮೊಹಮ್ಮದ್ ಬಿನ್ ಸಲ್ಮಾನ್ ಅವರೊಂದಿಗೆ ಮಾತನಾಡಿದ್ದೇನೆ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಬಿಕ್ಕಟ್ಟಿನ ಕುರಿತಾಗಿ ಚರ್ಚಿಸಿದ್ದೇವೆ ಎಂದು ಮೋದಿ ಎಕ್ಸ್‌ನಲ್ಲಿ ತಿಳಿಸಿದ್ದಾರೆ. ಸೌದಿಯಲ್ಲಿ ಭಾರತೀಯ ಸಮುದಾಯದ ಅಭಿವೃದ್ಧಿಗೆ ನಿರಂತರ ಬೆಂಬಲ ನೀಡುತ್ತಿರುವ ಸಲ್ಮಾನ್ ಅವರಿಗೆ ಮೋದಿ ಕೃತಜ್ಞತೆ ಸಲ್ಲಿಸಿದ್ದಾರೆ. ಫೆ.28ರ ಬಳಿಕ ಇದು ಎರಡನೇ ಬಾರಿ ಉಭಯ ನಾಯಕರು ದೂರವಾಣಿ ಸಂಭಾಷಣೆ ನಡೆಸಿದ್ದಾರೆ.

ಭಾರತದಿಂದ ವಿಶ್ವ ಗೆಲ್ಲುವ ಕಾರ್ಯ

ಪುಟ ೧➡ ಪ್ರಾಚೀನ ಭಾರತೀಯ ಪರಂಪರೆಯು ಆರೋಗ್ಯವಾಗಿದೆ ಎಂಬುದಕ್ಕೆ ಇದುವೇ ನಿದರ್ಶನವಾಗಿದೆ ಎಂದರು.

ಸಂಘ ರಾಜಕೀಯ ಪಕ್ಷವಲ್ಲ, ಅದು ಸಮಾಜದ ಸಂಘಟನೆ. ಇದು ಯಾವುದೇ ಪ್ರತಿಕ್ರಿಯೆಯಿಂದ ಹುಟ್ಟಿದುದಲ್ಲ, ಸಮಾಜದ ಅವಶ್ಯಕತೆಯನ್ನು ಪೂರೈಸಲು ಸಂಘ ಸ್ಥಾಪಿತವಾಗಿದೆ.

ಸಂಘ ಎಂದರೆ ಸಂಘಟಿತ ಹಿಂದು ಸಮಾಜವಾಗಿದೆ. ಜಗತ್ತಿನ ಅತ್ಯಂತ ವಿಶಿಷ್ಟ ಸಂಘಟನೆಯಾಗಿದೆ. ಅನೇಕ ದೇಶಗಳಲ್ಲಿ ಸಂಘ ಸಾಮಾಜಿಕ ಸೇವೆಯನ್ನು ನೆರವೇರಿಸುತ್ತಿರುವುದನ್ನು ಸ್ಮರಿಸಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶ್ರೀಶೈಲ-ಯಡೂರ ಪೀಠದ ಡಾ.ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಇತರರ ಸುಖ-ದುಃಖಗಳಲ್ಲಿ ಪಾಲ್ಗೊಳ್ಳುವುದು ನಿಜವಾದ ಮಾನವ ಧರ್ಮವಾಗಿದೆ. ವಿದ್ಯಾರ್ಥಿ ಜೀವನದಲ್ಲಿಯೇ ಮಕ್ಕಳು ಸಮಾಜಸೇವೆಯ ವ್ರತವನ್ನು ಕೈಗೊಳ್ಳಬೇಕು ಎಂದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ ಭಾಗವತ್ ಅವರು ಮಠದಿಂದ ನಿರ್ಮಿಸಿದ ಗುರುಕುಲದ ಸಭಾಭವನ ಉದ್ಘಾಟನೆ, ಗೋಶಾಲೆಯ ಗೋ-ಆಹಾರ ತುಲಾಭಾರ ಹಾಗೂ ವಟು ವಿದ್ಯಾರ್ಥಿಗಳ ಸಂವಾದ ಹಾಗೂ ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಂವಾದದಲ್ಲಿ ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಡಾ.ಮೋಹನ ಭಾಗವತ್ ಅವರು ಸವಿವರವಾಗಿ ಉತ್ತರಿಸಿದರು.

ಕಾರ್ಯಕ್ರಮದಲ್ಲಿ ಅಖಿಲ ಭಾರತ ಶಿವಾಚಾರ್ಯ ಸಂಸ್ಥೆಗಳ ರಾಷ್ಟ್ರೀಯ ಉಪಾಧ್ಯಕ್ಷ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ನೊಳಂಬ ಸುರಗೀಶ್ವರ ಮಠದ ಗುರುಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ, ಶ್ರೀಕಾಂತ ಉಮರಾಣಿ, ಶಿವಲಿಂಗಯ್ಯ ಅಲ್ಲಾಪುರವರ, ಶಿವಾನಂದ ಹಜಾರೆ ಸೇರಿದಂತೆ ಸಂಘದ ಪದಾಧಿಕಾರಿಗಳು, ಸ್ಥಳೀಯ ಮುಖಂಡರು ಭಾಗವಹಿಸಿದ್ದರು.

3 ಇಂಜಿನಿಯರಿಂಗ್ ವಿದ್ಯಾರ್ಥಿಗಳ ಸಾವು

• **ಮಾಗಡಿ:** ರಸ್ತೆ ಅಪಘಾತದಲ್ಲಿ ಮೂವರು ವಿದ್ಯಾರ್ಥಿಗಳು ಮೃತಪಟ್ಟಿರುವ ಘಟನೆ ತಾಲೂಕಿನ ಕುದೂರು ಪೊಲೀಸ್ ಠಾಣಾ ವ್ಯಾಪ್ತಿಯ ಮರೂರು ಹ್ಯಾಂಡ್ ಪೋಸ್ಟ್ ಬಳಿ ಶನಿವಾರ ಮುಂಜಾನೆ ಸಂಭವಿಸಿದೆ. ಬೆಂಗಳೂರಿನ ಪ್ರತಿಷ್ಠಿತ ಕಾಲೇಜುಗಳ ವಿದ್ಯಾರ್ಥಿಗಳಾಗಿದ್ದು ಮನೋಜ್ (21) ಅಭಿಲಾಷ್ (21) ನವೀನ್ (21) ಮೃತಪಟ್ಟ ದುರ್ದೈವಿಗಳು. ಅಪಘಾತದ ತೀವ್ರತೆಗೆ ಮನೋಜ್ ಮತ್ತು ಅಭಿಲಾಷ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ತೀವ್ರವಾಗಿ ಗಾಯಗೊಂಡಿದ್ದ ನವೀನ್ ಅವರನ್ನು ನೆಲಮಂಗಲದ ಸರ್ಕಾರಿ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಅವರು ಕೊನೆಯುಸಿರೆಳೆದಿದ್ದಾರೆ ಎಂದು ತಿಳಿದು ಬಂದಿದ್ದು, ಈ ಘಟನೆಗೆ ಸಂಬಂಧಿಸಿದಂತೆ ಕುದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ನೇಪಾಳ ಮಾಜಿ ಪ್ರಧಾನಿ ಶರ್ಮಾ ಒಲಿ ಬಂಧನ

ಪುಟ ೧➡ ಭಕ್ತಪುರದಲ್ಲಿ ಒಲಿ ಅವರನ್ನು ವಶಕ್ಕೆ ಪಡೆದ ಪೊಲೀಸರು, ನಂತರ ಹೃದಯ ಮತ್ತು ಮೂತ್ರಪಿಂಡದ ಸಮಸ್ಯೆಗಳ ಕಾರಣ ತ್ರಿಭುವನ್ ವಿಶ್ವವಿದ್ಯಾಲಯದ ಬೋಧನಾ ಆಸ್ಪತ್ರೆಗೆ ದಾಖಲಿಸಿದರು. ಲೇಖಕ್ ಅವರನ್ನು ಸೂರ್ಯವಿನಾಯಕದ ಅವರ ನಿವಾಸದಲ್ಲಿ ಬಂಧಿಸಲಾಯಿತು. ಇಬ್ಬರೂ ಪ್ರಸ್ತುತ ಕಠ್ಮಂಡು ಜಿಲ್ಲಾ ಪೊಲೀಸರ ವಶದಲ್ಲಿದ್ದಾರೆ. ಸಿಪಿಎನ್-ಯುಎಂಎಲ್ ಪಕ್ಷ ಒಲಿ ಬಿಡುಗಡೆಗೆ ಆಗ್ರಹಿಸಿ ದೇಶಾದ್ಯಂತ ಪ್ರತಿಭಟನೆ ನಡೆಸುವುದಾಗಿ ಘೋಷಿಸಿದೆ. ತನಿಖೆ ಆರಂಭಿಸಲು ಭಾನುವಾರ ಇಬ್ಬರನ್ನೂ ಕಠ್ಮಂಡು ಜಿಲ್ಲಾ ನ್ಯಾಯಾಲಯಕ್ಕೆ ಹಾಜರುಪಡಿಸಲು ಅಧಿಕಾರಿಗಳು ನಿರ್ಧರಿಸಿದ್ದಾರೆ.

ಜೋಡೆತ್ತಿನ ಗಾಡಿ ಓಟದ ಸ್ಪರ್ಧೆ

• **ಚಿಕ್ಕಮಗಳೂರು:** ಕೋಲ್ಹಾಪುರದಮ್ಮನ ಜಾತ್ರಾ ಮಹೋತ್ಸವ ಪ್ರಯುಕ್ತ ನಗರದ ಕೋಟೆ ಸಮೀಪದ ಏರ್‌ಪೋರ್ಟ್ ಮೈದಾನದಲ್ಲಿ ಏಪ್ರಿಲ್ 3ರಂದು ಅಂತಾರಾಜ್ಯ ಮಟ್ಟದ ಜೋಡೆತ್ತಿನ ಗಾಡಿ ಓಟದ ಸ್ಪರ್ಧೆಯಲ್ಲಿ ಆಯೋಜಿಸಲಾಗಿದೆ. ವಿಜೇತ ತಂಡಕ್ಕೆ ಪ್ರಥಮ 2 ಲಕ್ಷ ರೂ., ದ್ವಿತೀಯ 1.50 ಲಕ್ಷ, ತೃತೀಯ 1 ಲಕ್ಷ ರೂ. ಹಾಗೂ ಚತುರ್ಥ ಸ್ಥಾನಕ್ಕೆ 50 ಸಾವಿರ ನಗದು ಬಹುಮಾನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್: 8217454263, 9632455504, 6363760026, 9591611297 ಸಂಪರ್ಕಿಸಬಹುದು.

ಹುಸಿ ಬಾಂಬ್ ಬೆದರಿಕೆ: ಆರೋಪಿ ಬಂಧನ

• **ಮೈಸೂರು:** ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಸಂದೇಶಗಳನ್ನು ಕಳುಹಿಸಿ ರಾಜ್ಯದಲ್ಲಿ ಆತಂಕ ಸೃಷ್ಟಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ದೆಹಲಿ ಪೊಲೀಸರು ಮೈಸೂರಿನಲ್ಲಿ ಬಂಧಿಸಿದ್ದಾರೆ.

ಮೈಸೂರಿನ ಬೃಂದಾವನ ಬಡಾವಣೆಯ 2ನೇ ಹಂತ, 6ನೇ ಕ್ರಾಸ್‌ನಲ್ಲಿರುವ ಮನೆಯೊಂದರಿಂದ ಕಾರ್ಯಾಚರಣೆ ನಡೆಸುತ್ತಿದ್ದ ಶ್ರೀನಿವಾಸ್ ಅಲಿಯಾಸ್ ಶ್ರೀನಿವಾಸ್ ಲೂಯಿಸ್ ಬಂಧಿತ ಆರೋಪಿ. ಈತ ದೇಶದ ನಾನಾ ಭಾಗಗಳಿಗೆ ಒಟ್ಟು 1,100ಕ್ಕೂ ಹೆಚ್ಚು ಬಾಂಬ್ ಬೆದರಿಕೆ ಇಮೇಲ್ ಮಾಡಿ, ವಿಧ್ವಂಸಕ ಕೃತ್ಯ ನಡೆಸುವ ಆತಂಕ ಸೃಷ್ಟಿಸಿದ್ದ. ನ್ಯಾಯಾಲಯಗಳು, ವಿವಿಧ ನಗರಗಳ ಪ್ರತಿಷ್ಠಿತ ಶಾಲೆ-ಕಾಲೇಜುಗಳು, ಸರ್ಕಾರಿ ಕಚೇರಿಗಳು ಸೇರಿದಂತೆ ರೈಲು ನಿಲ್ದಾಣ, ವಿಮಾನ ನಿಲ್ದಾಣಕ್ಕೂ ಕೂಡ ಬಾಂಬ್ ಇಟ್ಟಿರುವ ಬಗ್ಗೆ ಕರೆ ಮಾಡುವುದು, ಇಮೇಲ್ ಮಾಡುವುದನ್ನು ಮಾಡಿದ್ದ.

ಬೆದರಿಕೆ ಸಂದೇಶಗಳನ್ನು ಕಳುಹಿಸಿ ಸಾರ್ವಜನಿಕರಲ್ಲಿ ಭಯದ ವಾತಾವರಣ ಸೃಷ್ಟಿಸುತ್ತಿದ್ದ. ಒಂದೇ ತಿಂಗಳಲ್ಲಿ ಹಲವು ಬಾರಿ ಇಂತಹ ಸಂದೇಶಗಳನ್ನು ರವಾನಿಸಿದ್ದ ಆರೋಪಿ ಈ ಕೃತ್ಯವನ್ನು ನಿಗೂಢವಾಗಿ ಮುಂದುವರಿಸುತ್ತಿದ್ದ. ಬಾಂಬ್ ಬೆದರಿಕೆಯ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆಯನ್ನು ತೀವ್ರಗೊಳಿಸಲಾಗಿತ್ತು. ಖಚಿತ ಮಾಹಿತಿ ಮೇಲೆ ದೆಹಲಿ ಪೊಲೀಸ್ ತಂಡವು ಮೈಸೂರಿನ ವಿ.ವಿ ಪುರಂ ಪೊಲೀಸ್ ಠಾಣೆಯ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದೆ.

ಭದ್ರತೆಗೆ ಸಂಬಂಧಿತ ಚುನಾವಣೆ

ಪುಟ ೧➡ ಮಮತಾ ಬ್ಯಾನರ್ಜಿ ಇದುವರೆಗೂ ಬಲಿಪಶು ಕಾರ್ಡ್ ರಾಜಕೀಯ ಮಾಡಿಕೊಂಡು ಬಂದವರು. ಕೆಲವೊಮ್ಮೆ ಅವರ ತಪ್ಪ ಗಾಯದ ಬಗ್ಗೆ ಮಾತನಾಡಿದರೆ, ಹಲವಾರು ಬಾರಿ ಚುನಾವಣಾ ಆಯೋಗವನ್ನು ನಿಂದಿಸುತ್ತಿದ್ದರು ಮತ್ತು ಹಲವು ಬಾರಿ ಇದೇ ರೀತಿಯ ಇನ್ನಿತರ ನೆಪ ಮುಂದಿಟ್ಟು ಸಾಂವಿಧಾನಿಕ ಸಂಸ್ಥೆಗಳನ್ನು ನಿಂದಿಸುತ್ತಿದ್ದರು. ಆದರೆ ಬಂಗಾಳದ ಜನರಿಗೀಗ ಮಮತಾ ದೀದಿಯ ಸಂತ್ರಸ್ತ-ಕಾರ್ಡ್ ರಾಜನೀತಿಯ ಮರ್ಮ ಚೆನ್ನಾಗಿ ಅರಿವಾಗಿದೆ ಎಂದರು.

ಮತಕ್ಕಾಗಿ ಎಸ್ಐಆರ್‌ಗೆ ವಿರೋಧ: ಚುನಾವಣಾ ಆಯೋಗದಿಂದ ಇತರ ರಾಜ್ಯಗಳಲ್ಲೂ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್ಐಆರ್) ನಡೆದಿದೆ. ಆದರೆ ಎಲ್ಲೂ ಪಶ್ಚಿಮ ಬಂಗಾಳದ ಸಿಎಂ ಮಮತಾ ಬ್ಯಾನರ್ಜಿಯಂತೆ ಅನಗತ್ಯ ವಿರೋಧ ವ್ಯಕ್ತಪಡಿಸಿದವರಿಲ್ಲ. ಮಮತಾ ಬ್ಯಾನರ್ಜಿ ಟಿಎಂಸಿಯ ಅಲ್ಪಸಂಖ್ಯಾತರ ವೋಟ್ ಬ್ಯಾಂಕ್ ಕಾಪಾಡುವ ಏಕೈಕ ಉದ್ದೇಶದಿಂದ ಎಸ್ಐಆರ್‌ಗೆ ವಿರೋಧಗಳನ್ನು ಸೃಷ್ಟಿಸಿದ್ದಾರೆ. ಮೇಲಾಗಿ ಚುನಾವಣಾ ಆಯೋಗದಂತಹ ಸಾಂವಿಧಾನಿಕ ಸಂಸ್ಥೆಗಳನ್ನು ನಿಂದಿಸುವುದು ಬಂಗಾಳಿ ಸಂಸ್ಕೃತಿಯಲ್ಲ ಎಂದು ಸಚಿವ ಶಾ ಗುಡುಗಿದರು.

ಅಕ್ರಮ ನುಸುಳುಕೋರರು ದೇಶಕ್ಕೆ ಅಪಾಯಕಾರಿ: ಅಸ್ಸಾಂ ಗಡಿ ಮುಖೇನ ದೇಶಕ್ಕೆ ಅಕ್ರಮವಾಗಿ ನುಸುಳುವ ನುಸುಳುಕೋರರ ಪಿಡುಗು ಬಿಜೆಪಿ ಅಧಿಕಾರಕ್ಕೆ ಬಂದ ನಂತರ ನಿಂತಿದೆ. ಅಕ್ರಮ ನುಸುಳುಕೋರರಿಗೆ ಇದೀಗ ಉಳಿದಿರುವ ಅಂತಿಮ ದಾರಿ ಪಶ್ಚಿಮ ಬಂಗಾಳ ಮಾತ್ರ. ಇಲ್ಲಿಂದಲೇ ಗಡಿ ನುಸುಳುವ ಅಕ್ರಮ ನುಸುಳುಕೋರರು ದೇಶಾದ್ಯಂತ ವಿವಿಧ ರಾಜ್ಯಗಳಲ್ಲಿ ಚದುರಿಬಿಡುತ್ತಾರೆ. ಹಾಗಾಗೀ ಬಂಗಾಳದ ಚುನಾವಣೆ ಬಂಗಾಳದ ಪಾಲಿಗೆ ಮಾತ್ರವಲ್ಲ ಇಡೀ ದೇಶದ ಪಾಲಿಗೆ ಮಹತ್ವದ ಚುನಾವಣೆಯಾಗಿದೆ. ಇಡೀ ದೇಶದ ಭದ್ರತೆಯು ಬಂಗಾಳದ ಚುನಾವಣೆ ಜತೆ ಲಿಂಕ್ ಹೊಂದಿದೆ. ಪಶ್ಚಿಮ ಬಂಗಾಳ ಗಡಿಗಳ ಮೂಲಕ ನಡೆಯುತ್ತಿರುವ ಅಕ್ರಮ ನುಸುಳುವಿಕೆಯು ರಾಷ್ಟ್ರೀಯ ಭದ್ರತೆಗೆ ಆತಂಕಕಾರಿಯಾಗಿದೆ. ಈಶಾನ್ಯ ವಲಯವನ್ನು ಭಾರತದ ಇತರ ಪ್ರದೇಶಗಳೊಂದಿಗೆ ಜೋಡಿಸುವ ನಿರ್ಣಾಯಕ ಸಿಲಿಗುರಿ ಕಾರಿಡಾರ್‌ನ ಭದ್ರತೆ ಕೂಡ ಟಿಎಂಸಿ ಸರಕಾರದ ತುಷ್ಟೀಕರಣ-ವೋಟ್‌ಬ್ಯಾಂಕ್ ರಾಜನೀತಿಯಿಂದಾಗಿ ಇಂದು ಗಂಡಾಂತರದಲ್ಲಿದೆ ಎಂದು ಸಚಿವ ಶಾ ಕಟು ಟೀಕಾಪ್ರಹಾರ ಮಾಡಿದರು.

ಗಡಿಗೆ ಬೇಲಿ ಹಾಕಲೂ ಬಿಡದ ಮಮತಾ

ಪುಟ ೧➡ ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ಬರೀ 45ದಿನಗಳೊಳಗೆ ಅಗತ್ಯ ಜಮೀನನ್ನು ಕೇಂದ್ರ ಸರಕಾರಕ್ಕೆ ಹಸ್ತಾಂತರಿಸಲಿದೆ ಎಂದು ಸಚಿವ ಶಾ ಭರವಸೆ ನೀಡಿದರು.



2026ರ ಚುನಾವಣೆಯು ಭಯ ಮತ್ತು ವಿಶ್ವಾಸ ನಡುವಣ ಆಯ್ಕೆಯಾಗಿದೆ. ಬಂಗಾಳದ ಜನತೆ ಇವರೆಡರಲ್ಲಿ ಒಂದನ್ನು ಆಯ್ಕೆ ಮಾಡಬೇಕು. ಕಳೆದ 15 ವರ್ಷಗಳಿಂದ ರಾಜ್ಯದಲ್ಲಿ ಭಯ, ಭ್ರಷ್ಟಾಚಾರ, ತುಷ್ಟೀಕರಣ ರಾಜನೀತಿಗಳೇ ಮೇಲ್ಗೈ ಸಾಧಿಸಿವೆ. ಮಮತಾ ಬ್ಯಾನರ್ಜಿ ಸುಳ್ಳು ಮತ್ತು ಹಿಂಸಾಚಾರ ಆಧಾರಿತ ಹೊಸ ರೀತಿಯ ರಾಜನೀತಿಯನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ಟಿಎಂಸಿ ಅಧಿಕಾರ ಹಿಡಿದದ್ದೂ ಸುಳ್ಳು, ಭಯ ಹುಟ್ಟಿಸುವಿಕೆ ಮತ್ತು ಹಿಂಸಾಚಾರಗಳ ಬಲದಿಂದಲೇ. 2011ರಿಂದ ಬಿಜೆಪಿ ಇದರ ವಿರುದ್ಧ ಹೋರಾಡುತ್ತಲೇ ಬಂದಿದೆ ಎಂದು ಅಮಿತ್ ಶಾ ವಿವರಿಸಿದರು.

ಏಕತೆಯಿಂದ ಬಿಕ್ಕಟ್ಟು ಎದುರಿಸಿ

ಪುಟ ೧➡ ಜೇವರ್‌ನಲ್ಲಿ, ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಉದ್ಘಾಟಿಸಿ ಪ್ರಧಾನಿ ಮೋದಿ ಮಾತನಾಡಿದರು. ಇಂದಿನ ಕಾರ್ಯಕ್ರಮವು ವಿಕಸಿತ ಉತ್ತರಪ್ರದೇಶ ಮತ್ತು ವಿಕಸಿತ ಭಾರತದತ್ತ ಯಾನದಲ್ಲಿ ಹೊಸ ಅಧ್ಯಾಯವೊಂದರ ಆರಂಭವನ್ನು ಸಾಂಕೇತಿಸಿದೆ ಎಂದು ಸಮೃದ್ಧಿ ವ್ಯಕ್ತಪಡಿಸಿದರು.

ಧನಾತ್ಮಕ-ವ್ಯಾಪಕ ಚರ್ಚೆ: ಪಶ್ಚಿಮ ಏಷ್ಯಾ ಸನ್ನಿವೇಶ ಬಗ್ಗೆ ತಾನು ಸಂಸತ್ತಿನಲ್ಲಿ ವಿವರವಾಗಿ ಚರ್ಚಿಸಿದ್ದೇನೆ ಮತ್ತು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ತೀರಾ ಧನಾತ್ಮಕ ಮತ್ತು ವ್ಯಾಪಕ ಚರ್ಚೆ ನಡೆಸಿದ್ದೇನೆ. ಇಂತಹ ಸನ್ನಿವೇಶದಲ್ಲಿ ರಾಜಕೀಯ ಪಕ್ಷಗಳು ಮುಖ್ಯವಾಗಿ ಉತ್ತರಪ್ರದೇಶದ ರಾಜಕೀಯ ಪಕ್ಷಗಳು ತೀರಾ ಬೇಜವಾಬ್ದಾರಿಯ ಹೇಳಿಕೆಗಳನ್ನು ನೀಡುವುದರಿಂದ ಹಿಂದೆ ಸರಿಯಬೇಕು ಎಂದು ಮನವಿ ಮಾಡಿದರು.

ದೇಶಕ್ಕೆ ಹಾನಿ ಮಾಡುವಂತಹ ಆರೋಪ ಮಾಡುವುದರಿಂದ ಸವಾಲ ವ್ಯಕ್ತಿಗಳಿಗೆ ರಾಜಕೀಯ ಚರ್ಚೆಗಳಲ್ಲಿ ಕೆಲವು ಅಂಕಗಳು ಲಭಿಸಬಹುದು. ಆದರೆ ಇವರನ್ನು ದೇಶವಾಸಿ ಜನತೆ ಎಂದಿಗೂ ಕ್ಷಮಿಸುವುದಿಲ್ಲ ಎಂದು ಎಚ್ಚರಿಸಿದರು. ಕೋವಿಡ್ ಪಿಡುಗಿನ ಸಂದರ್ಭ ಪ್ರಚಾರ ಮಾಡಲಾಗಿದ್ದ ತಪ್ಪು ಮಾಹಿತಿಗಳನ್ನು ಮತದಾರರು ಒಗ್ಗಟ್ಟಿನಿಂದ ತಿರಸ್ಕರಿಸಿದ್ದಾರೆಂದು ಪ್ರಧಾನಿ ನೆನಪಿಸಿದರು.

ಜನಸಾಮಾನ್ಯರಿಗೂ ಪೂರಕ ವಾಯುಯಾನ ನೀತಿ: ಸರಕಾರದ ವಿಮಾನಯಾನ ನೀತಿಯತ್ತ ಗಮನ ಸೆಳೆದ ಪ್ರಧಾನಿ, ಬಿಜೆಪಿ ನೇತೃತ್ವದ ಸರಕಾರ ಜನರಿಗೆ ಸುಗಮ ವಿಮಾನ ಪಯಣಕ್ಕೆ ಪೂರಕ ಅವಕಾಶ ಕಲ್ಪಿಸಿದೆ ಮತ್ತು ವಿಮಾನ ನಿಲ್ದಾಣಗಳ ಮೂಲಸೌಕರ್ಯ ವಿಸ್ತರಣೆಗೆ ಆದ್ಯತೆ ನೀಡಿದೆ.

ವಿಮಾನ ಪಯಣವು ದೇಶದ ಜನಸಾಮಾನ್ಯ ಕುಟುಂಬಗಳಿಗೂ ಸುಗಮವಾಗಬೇಕೆಂಬ ಆಶಯದಿಂದಲೇ ಉಡಾನ್ ಸ್ಕೀಮ್‌ನ್ನು ಸರಕಾರ ಆರಂಭಿಸಿತ್ತು. ತತ್ಪರಿಣಾಮ ಕಳೆದ ಕೆಲವು ವರ್ಷಗಳಲ್ಲಿ ಈ ಸ್ಕೀಮ್‌ನಡಿ 1.6ಕೋಟಿ ಜನರು ಕೈಗೆಟುಕುವ ದರದಲ್ಲಿ ವಿಮಾನ ಯಾನ ಕೈಗೊಂಡಿದ್ದಾರೆ. ಮುಂಬರುವ ವರ್ಷಗಳಲ್ಲಿ ದೇಶದ ಸಣ್ಣ ಪುಟ್ಟ ನಗರಗಳಲ್ಲಿ ಹೊಸ ವಿಮಾನ ನಿಲ್ದಾಣಗಳ ನಿರ್ಮಾಣ, 200 ಹೆಲಿಪ್ಯಾಡ್‌ಗಳ ನಿರ್ಮಾಣದ ಯೋಜನೆಗಳು ಸರಕಾರದ ಚಿಂತನೆಯಲ್ಲಿದ್ದು, ಸುಮಾರು 29ಸಾವಿರ ಕೋಟಿ ರೂ.ಅಂಗೀಕೃತ ಅಂದಾಜು ವೆಚ್ಚದಲ್ಲಿ ಈ ಸ್ಕೀಮ್‌ನ್ನು ಸರಕಾರ ವಿಸ್ತರಿಸಿದೆ ಎಂದು ಮಾಹಿತಿ ನೀಡಿದರು. ಉತ್ತರಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥ್ ಯೋಗಿ, ನಾಗರಿಕ ವಿಮಾನಯಾನ ಸಚಿವ ಕಿಂಜರಪು ರಾಮ್ ಮೋಹನ್ ನಾಯ್ಡು ಮತ್ತಿತರ ಗಣ್ಯರು ಪ್ರಧಾನಿ ಜತೆಗಿದ್ದರು.

ಆರ್ಥಿಕ ಚಟುವಟಿಕೆಗೆ ವೇಗ

ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ವಲಯದ ಆರ್ಥಿಕ ಚಟುವಟಿಕೆಗೆ ವೇಗ ನೀಡಲಿದೆ ಮತ್ತು ಪಶ್ಚಿಮ ಉತ್ತರಪ್ರದೇಶದ ರೈತರು, ಸಣ್ಣ ವ್ಯಾಪಾರಿಗಳು ಹಾಗೂ ಯುವಶಕ್ತಿಗೆ ಹೊಸ ಅವಕಾಶಗಳನ್ನೂ ಸೃಜಿಸಲಿದೆ ಎಂದು ಭರವಸೆ ವ್ಯಕ್ತಪಡಿಸಿದರು. ರಾಜ್ಯದ ಪ್ರಮುಖ ವಿಪಕ್ಷ ಸಮಾಜವಾದಿ ಪಕ್ಷವನ್ನು ತರಾಟೆಗೆತ್ತಿಕೊಂಡು, ನೋಯ್ಡಾವು ವಿಪಕ್ಷಕ್ಕೆ ಸುಲಿಗೆಗಾಗಿ ಎಟಿಎಂ ಆಗಿತ್ತು. ಆದರೆ ಬಿಜೆಪಿ ಆಡಳಿತದಲ್ಲೀಗ ನೋಯ್ಡಾವು ಅಭಿವೃದ್ಧಿಯ ಶಕ್ತಿಶಾಲಿ ಇಂಜಿನ್ ಆಗಿ ಹೊರಹೊಮ್ಮುತ್ತಿದೆ. ಹಿಂದಿನ ಸರಕಾರಗಳಿಂದ ನಿರ್ಲಕ್ಷ್ಯಕ್ಕೀಡಾಗಿದ್ದ ನೋಯ್ಡಾ ಇಂದು ಜಗತ್ತನ್ನೇ ಎದುರುಗೊಳ್ಳಲು ಸಜ್ಜಾಗಿದೆ, ತನ್ಮೂಲಕ ಸ್ವಾವಲಂಬೀ ಭಾರತದ ಸ್ಫೂರ್ತಿಯನ್ನು ಪ್ರತಿಫಲಿಸಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.

ಜನರ ಸುರಕ್ಷೆಗೆ ಅಗತ್ಯ ಕ್ರಮ

ಪುಟ ೧➡ ಕಚ್ಚಾತೈಲ ಮತ್ತು ಅನಿಲಗಳಿಗೆ ಭಾರತವು ಸಂಘರ್ಷ ಸಂತ್ರಸ್ತ ವಲಯಗಳನ್ನು ಅವಲಂಬಿಸಿದೆ. ಈ ವಿಚಾರದಲ್ಲಿ ದೇಶದ ಕುಟುಂಬಗಳು ಮತ್ತು ರೈತರಿಗೆ ಹೊರೆಯಾಗಕೂಡದೆಂದು ಸರಕಾರ ಅಗತ್ಯ ಕ್ರಮಗಳನ್ನು ಕೈಗೊಂಡಿದೆ.

ವೈರಮುಡಿ ಕಿರೀಟಧಾರಣ ಮಹೋತ್ಸವ

• **ಮೇಲುಕೋಟೆ:** ಶ್ರೀ ಚೆಲುವನಾರಾಯಣಸ್ವಾಮಿಯವರ ವಿಶ್ವ ವಿಖ್ಯಾತ ವೈರಮುಡಿ ಕಿರೀಟಧಾರಣ ಮಹೋತ್ಸವ ಮಹಾವಿಷ್ಣುವಿನ ಅನುಗ್ರಹಕ್ಕೆ ಪ್ರಮುಖ ದಿನವಾದ ಶನಿವಾರ ರಾತ್ರಿ ಲಕ್ಷಾಂತರಭಕ್ತರ ಜಯಘೋಷದೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ಪರಾಭವನಾಮ ಸಂವತ್ಸರದ ಮೀನ-ಚೈತ್ರಮಾಸದ ಪುಷ್ಯ ನಕ್ಷತ್ರದ ಶುಭದಿನಕೂಡಿದ ಬ್ರಹ್ಮೋತ್ಸವದ ನಾಲ್ಕನೇತಿರುನಾಳ್ ದಿನದಂದು ಸಾಕ್ಷಾತ್ ಭಗವಂತನದ್ದೆಂದೇ ಪ್ರತೀತಿಯಿರುವ ವೈರಮುಡಿ ಕಿರೀಟವನ್ನು ಶ್ರೀದೇವಿ ಭೂದೇವಿಯರೊಂದಿಗೆ ಗರುಡಾರೂಢನಾದ ಚೆಲುವನಾರಾಯಣ ಸ್ವಾಮಿಗೆ ರಾತ್ರಿ 8.40 ಗಂಟೆಗೆ ತೊಡಿಸಲಾಯಿತು.

ಇದಕ್ಕೂ ಮುನ್ನಗರುಡದೇವನ ಉತ್ಸವ ನಡೆದನಂತರ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸಮಕ್ಷಮದಲ್ಲಿ, ಮಹಾಮಂಗಳಾರತಿ ನೆರವೇರಿಸಿ, ಭಕ್ತರ ಗೋವಿಂದನಾಮ ಘೋಷಣೆಯೊಂದಿಗೆ ವೈರಮುಡಿ ಉತ್ಸವಕ್ಕೆ ಚಾಲನೆ ದೊರೆಯಿತು ವೈರಮುಡಿಧರಿಸಿ ಭವ್ಯತೋಮಾಲೆಗಳು ದಿವ್ಯಾಭರಣಗಳೊಂದಿಗೆ ಗಂಡಬೇರುಂಡರೂಪಿ ಪ್ರಭಾವಳಿಯೊಂದಿಗೆ ಅಲಂಕೃತನಾದ ಚೆಲುವನಾರಾಯಣಸ್ವಾಮಿಯು ವೈರಮುಡಿ ಉತ್ಸವ ಗಂಡಬೇರುಂಡ ಸ್ವರೂಪಿಯಾದ ರಾಜಗೋಪುರದಬಳಿ ಬರುತ್ತಿದ್ದಂತೆ ಭಕ್ತರ ಹರ್ಷೋದ್ಗಾರ ಮುಗಿಲುಮುಟ್ಟಿತ್ತು.

ಸುಶ್ರಾವ್ಯ ಮಂಗಳವಾದ್ಯ ದೊಂದಿಗೆ ಸಾಗಿದ ಸ್ವಾಮಿಯ ಉತ್ಸವವನ್ನು ಮೈಸೂರು ಮಹಾರಾಜರು ವೈರಮುಡಿ ಉತ್ಸವ ವೀಕ್ಷಿಸುತ್ತಿದ್ದ ಪುಷ್ಪಮಂಟಪದಲ್ಲಿ ಪ್ರತಿಷ್ಠಾಪಿಸಲಾಯಿತು. ಮಹಾರಾಜರು ದರ್ಶನ ಮಾಡಿದ್ದಾರೆಂದು ಪರಿಭಾವಿಸಿ ಮತ್ತೆ ಉತ್ಸವಕ್ಕೆ ಚಾಲನೆ ನೀಡಲಾಯಿತು.

ರಾಜಮುಡಿ ಕಿರೀಟ ಹಸ್ತಾಂತರ

ಮೇಲುಕೋಟೆಗೆ ಬಂದ ವೈರಮುಡಿ-ರಾಜಮುಡಿ ತಿರುವಾಭರಣ ಪೆಟ್ಟಿಗೆಗಳನ್ನು ಚಿನ್ನದ ಪಲ್ಲಕ್ಕಿಯಲ್ಲಿ ಭವ್ಯ ಮೆರವಣಿಗೆಯಲ್ಲಿ ತರಲಾಯಿತು. ರಾತ್ರಿ 7 ಗಂಟೆಯ ವೇಳೆಗೆ ಚೆಲುವನಾರಾಯಣಸ್ವಾಮಿ ಸನ್ನಿಧಿಯ ಮುಂಭಾಗ ನವರಂಗದ ಮಧ್ಯಭಾಗದಲ್ಲಿ ರಾಜಮುಡಿ ತಿರುವಾಭರಣ ಪೆಟ್ಟಿಗೆಯನ್ನು ತೆರೆದು ರಾಜಮುಡಿ ಕಿರೀಟ, ಗಂಡ ಬೇರುಂಡ ಪದಕ ಪದ್ಮಪಾದ ಶಂಖ,ಚಕ್ರ ಗದಾಂಗಿ ಸೇರಿದಂತೆ 16 ವಿಧದ ವಜ್ರಾಭರಣಗಳನ್ನು ಜಿಲ್ಲಾಧಿಕಾರಿ ಕುಮಾರ ಸಮಕ್ಷಮ ಪರಿಶೀಲಿಸಿ ಸ್ಥಾನಿಕರು ಅರ್ಚಕರು ಪರಿಚಾರಕರಿಗೆ ಹಸ್ತಾಂತರ ಮಾಡಲಾಯಿತು. ವೈರಮುಡಿ ತಿರುವಾಭರಣ ಪೆಟ್ಟಿಗೆಯನ್ನು ನೇರವಾಗಿ ದೇವರ ಅಲಂಕಾರಕ್ಕೆ ನೀಡಲಾಯಿತು. ರಾಜಮುಡಿಕಿರೀಟ ಮತ್ತು ತಿರುವಾಭರಣಗಳು ಏ.2ರವರೆಗೆ ಬ್ರಹ್ಮೋತ್ಸವದಲ್ಲಿ ಚೆಲುವನಾರಾಯಣಸ್ವಾಮಿಯನ್ನು ಅಲಂಕರಿಸಲಿವೆ.



ವೈರಮುಡಿ ತಿರುವಾಭರಣ ಪೆಟ್ಟಿಗೆಗೆ ವಿಶೇಷ ಪೂಜೆ

ಮೇಲುಕೋಟೆಯ ಯತಿರಾಜದಾಸರ್ ಗುರುಪೀಠದಲ್ಲಿ ಕೊನೆಯ ಸಾಂಪ್ರದಾಯಿಕ ಪೂಜೆ ನೆರವೇರಿದ ನಂತರ ವೈರಮುಡಿ-ರಾಜಮುಡಿ ತಿರುವಾಭರಣಪೆಟ್ಟಿಗೆಗಳಿದ್ದ ಬಂಗಾರದ ಪಲ್ಲಕ್ಕಿ ದೇವಾಲಯ ಪ್ರವೇಶಿಸಿದರು. ಇದಕ್ಕೂ ಮೊದಲು ಪೇಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಮೇಲುಕೋಟೆ ಒಕ್ಕಲಿಗ ಮುಖಂಡರು. ಆದಿಚುಂಚನಗಿರಿ ಶಾಖಾಮಠದ ಮುಂದೆ ಚುಂಚನಗಿರಿ ಶ್ರೀಗಳು ಪೂಜೆ ಸಲ್ಲಿಸಿದರು. ಪ್ರಥಮಪೂಜೆ ಮಂಡ್ಯದ ಲಕ್ಷ್ಮೀಜನಾರ್ಧನ ದೇಗುಲದಲ್ಲಿ ನಡೆದರೆ ಕೊನೆಯ ಪೂಜೆ ಯತಿರಾಜದಾಸರ್ ಗುರುಪೀಠದಿಂದ ಸಾಂಪ್ರದಾಯಿಕ ಪದ್ಧತಿಯಂತೆ ನೆರವೇರಿತು.



ಗಮನ ಸೆಳೆದ ಮಹಾರಾಜರ ದರ್ಶನ ಮಂಟಪ

ಈ ವರ್ಷ ಮಹಾರಾಜರು ವೈರಮುಡಿ ದರ್ಶನಮಾಡುತ್ತಿದ್ದ ಮಂಟಪವನ್ನು ವಿವಿಧ ಪುಷ್ಪ ಹಾಗೂ ತಳಿರುತೋರಣದಿಂದ ನಿರ್ಮಿಸಿದ್ದು ಅರ್ಥಪೂರ್ಣವಾಗಿತ್ತು. ಕೇವಲ ನಡಹಪ್ಪರದಿಂದ ಮಾಡುತ್ತಿದ್ದ ಈ ವ್ಯವಸ್ಥೆ ಬಗ್ಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಕಳೆದ ವರ್ಷ ಆಕರ್ಷಕ ಮಂಟಪ ನಿರ್ಮಿಸಿ ಬದಲಾವಣೆ ತಂದಿದ್ದು ಈ ವರ್ಷ ಮತ್ತಷ್ಟು ಆಕರ್ಷಕವಾಗಿ ಮಂಟಪ ನಿರ್ಮಿಸಲಾಗಿತ್ತು. ಅದೇ ಪ್ರಥಮವಾಗಿ ನರಸಿಂಹಸ್ವಾಮಿ ಬೆಟ್ಟ ದೇವಾಲಯದ ರಾಜಗೋಪುರ ಭುವನೇಶ್ವರಿ ಮಂಟಪ, ರಾಯಗೋಪುರ ಮಾದರಿಯಲ್ಲಿ ಸ್ವಾಗತಕಮಾನುಗಳನ್ನು ನಿರ್ಮಿಸಿದ್ದು ಭಕ್ತರ ಆಕರ್ಷಣೆಗೆ ಕಾರಣವಾಗಿತ್ತು.

ಭಕ್ತರ ಪ್ರಶಂಸೆಗೆ ಪಾತ್ರವಾದ ವ್ಯವಸ್ಥೆಗಳು

ದೇವಾಲಯದ ಪ್ರಾಂಗಣದಲ್ಲಿ ಸಾಮಾನ್ಯ ಭಕ್ತರು ವಿಶ್ರಾಂತಿಗಾಗಿ ಹಾಕಿದ್ದ ರೆಡ್ ಕಾರ್ಪೆಟ್ ಕುಡಿಯುವ ನೀರಿನ ವ್ಯವಸ್ಥೆ, ನಿರಂತರ ಸ್ವಚ್ಛತೆ, ಪೊಲೀಸ್ ಸಹಾಯಕೇಂದ್ರಗಳು, ವೈದ್ಯಕೀಯ ಸೇವೆ, ರಾಜ್ಯ ರಸ್ತೆಸಾರಿಗೆ ಸಂಸ್ಥೆಯ ಬಸ್ ಸೌಕರ್ಯ, ದೇವಾಲಯದ ಒಳಭಾಗದ ಧಾರ್ಮಿಕ ಕೈಂಕರ್ಯಗಳನ್ನು ಬಿತ್ತರಿಸಲು ಹಾಕಿದ್ದ ಎಲ್.ಇ.ಡಿ ಪರದೆಗಳು ಉತ್ಸವದ ಬೀದಿಗಳಲ್ಲಿದ್ದ ತೆರೆದ ಚರಂಡಿಗಳಲ್ಲಿ ಭಕ್ತರು ಬೀಳುವುದನ್ನು ತಪ್ಪಿಸಲು ಚರಂಡಿಮೇಲೆ ಹಲಗೆಗಳನ್ನು ಹಾಕಿದ ಸೇರಿದಂತೆ ಮಾಡಿದ ವ್ಯವಸ್ಥೆಗಳು ಭಕ್ತಸ್ನೇಹಿಯಾಗಿತ್ತು.



ಕಿರುಸುದ್ದಿ

ಅಸ್ಸಾಂ ರಾಜ್ಯದಲ್ಲಿ ಭ್ರಷ್ಟಾಚಾರ ಹೆಚ್ಚು: ಡಿಕೆಶಿ



• **ಬೆಂಗಳೂರು:** ಅಸ್ಸಾಂ ರಾಜ್ಯದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದ್ದು, ಜನರು ನರಳುತ್ತಿದ್ದಾರೆ. ಕಳೆದ ಚುನಾವಣೆಯಲ್ಲಿ ಅವರು ಕೊಟ್ಟ ಭರವಸೆಗಳು ಈಡೇರಿಲ್ಲ. ಹೀಗಾಗಿ ಅಸ್ಸಾಂನಲ್ಲಿ ಭಾರಿ ಬದಲಾವಣೆ ಆಗಲಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಬಳಿ ಮಾಧ್ಯಮಗಳಿಗೆ ಶನಿವಾರ ಪ್ರತಿಕ್ರಿಯೆ ನೀಡಿದರು. ನಾನು ಅಸ್ಸಾಂ ಚುನಾವಣಾ ಪ್ರಚಾರಕ್ಕೆ ತೆರಳುತ್ತಿದ್ದು, ಕೇರಳಕ್ಕೂ ಹೋಗಬೇಕು ಹಾಗೂ ಕರ್ನಾಟಕದ ಉಪಚುನಾವಣೆಗಳನ್ನು ನೋಡಿಕೊಳ್ಳಬೇಕು. ಅಸ್ಸಾಂನಲ್ಲಿ ಆಡಳಿತ ಕುಸಿದಿದೆ. ಈ ಕಾರಣಕ್ಕೆ ಅಲ್ಲಿನ ಜನ ಬದಲಾವಣೆ ಬಯಸಿದ್ದಾರೆ. ಕಳೆದ ಹತ್ತು ವರ್ಷಗಳಲ್ಲಿ ಜನರ ಪ್ರಗತಿ ಆಗಿಲ್ಲ ಎಂದರು. ಅಸ್ಸಾಂನಲ್ಲಿ ಸಚಿವ ಸಂಪುಟ ಪುನಾರಚನೆ ಬಳಿಕ ಅಸ್ಸಾಂ ಬಿಜೆಪಿಯಲ್ಲಿ ಆಂತರಿಕ ಕಲಹ ಹೆಚ್ಚಿದೆ. ಅವರ ಪಕ್ಷದಲ್ಲಿ ಯಾರೂ ಸಂತೋಷವಾಗಿಲ್ಲ. ಬಿಜೆಪಿಗರು ತಮ್ಮ ಪಕ್ಷದಲ್ಲಿ ಅವಕಾಶವಿಲ್ಲ ಎಂದು ಬೇಸರಗೊಂಡಿದ್ದಾರೆ ಎಂದರು.

ಖಾಸಗಿ ಆಸ್ಪತ್ರೆಗಳಲ್ಲಿ ಒಪಿಡಿ ಚಿಕಿತ್ಸೆಗೆ ಮಾತ್ರ ಅವಕಾಶ

• **ಬೆಂಗಳೂರು:** ಸರ್ಕಾರಿ ಆಸ್ಪತ್ರೆಗಳ ವೈದ್ಯರು ತಮ್ಮ ಕರ್ತವ್ಯದ ಅವಧಿ ಬಳಿಕ ಖಾಸಗಿ ಆಸ್ಪತ್ರೆಗಳಲ್ಲಿ ಒಳ ರೋಗಿಗಳಿಗೆ ಚಿಕಿತ್ಸೆ ನೀಡುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದ್ದು, ಕೇವಲ ಹೊರ ರೋಗಿಗಳಿಗೆ ಮಾತ್ರ ಚಿಕಿತ್ಸೆ ನೀಡಬಹುದಾಗಿದೆ ಎಂದು ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ. ಸರ್ಕಾರಿ ವೈದ್ಯರು ಮತ್ತು ಸರ್ಕಾರಿ ಅರೆ ವೈದ್ಯಕೀಯ ಸಿಬ್ಬಂದಿ ಖಾಸಗಿ ವೈದ್ಯಕೀಯ ವೃತ್ತಿ ಮಾಡುತ್ತಿರುವ ಬಗ್ಗೆ ಆಯಾ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಹಾಗೂ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರಿಗೆ ಮಾಹಿತಿಯನ್ನು ಕಡ್ಡಾಯವಾಗಿ ಸಲ್ಲಿಸುವ ಮುಖಾಂತರ ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಿದ ಕುರಿತು ಖಾತರಿಪಡಿಸಬೇಕಾಗಿರುತ್ತದೆ. ಖಾಸಗಿ ವೈದ್ಯಕೀಯ ಸಂಸ್ಥೆಗಳಲ್ಲಿ ಕೇವಲ ಹೊರರೋಗಿಗಳಿಗೆ ಚಿಕಿತ್ಸೆ (ಒಪಿಡಿ) ನೀಡುತ್ತಿರುವ ಕುರಿತು ದೃಢಪಡಿಸಬೇಕಿದೆ.

ಕಾರು ಡಿಕ್ಕಿ: ಅಂಬುಲೆನ್ಸ್ ಪಲ್ಟಿ

• **ಬಾಗಲಕೋಟೆ:** ನವನಗರದ ಬಸ್ ನಿಲ್ದಾಣ ಹತ್ತಿರ ಸಾಯಿಸ್ತು ಹೋಗುತ್ತಿದ್ದ ಅಂಬುಲೆನ್ಸ್‌ಗೆ ಇನೋವಾ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಅಂಬುಲೆನ್ಸ್ ಪಲ್ಟಿಯಾದ ಘಟನೆ ಶುಕ್ರವಾರ ಸಾಯಂಕಾಲ ನಡೆದಿದೆ. ನವನಗರದ ನಗರದ ಬಸ್ ನಿಲ್ದಾಣದ ಸರ್ಕಲ್ ಬಳಿಯ ಪೆಟ್ರೋಲ್ ಬಂಕ್ ಬಳಿ ರಭಸವಾಗಿ ಬಂದ ಇನ್ನೋವಾ ಕಾರು ಬಾಗಲಕೋಟೆಯ ಎಪಿಎಂಸಿ ಮಾರ್ಗದಿಂದ ನವನಗರದ ಜಿಲ್ಲಾ ಆಸ್ಪತ್ರೆ ಕಡೆಗೆ ಹೋಗುತ್ತಿದ್ದ ಅಂಬುಲೆನ್ಸ್‌ಗೆ ಡಿಕ್ಕಿಯಿಂದ ತಕ್ಷಣವೇ ಪಲ್ಟಿಯಾಗಿದೆ. ಜಿಲ್ಲಾಸ್ಪತ್ರೆ ಕಡೆಗೆ ಸಾಗುತ್ತಿದ್ದ ಅಂಬುಲೆನ್ಸ್ ಹಾಗೂ ಕಾಳಿದಾಸ ವೃತ್ತದ ದಿಕ್ಕಿಗೆ ತೆರಳುತ್ತಿದ್ದ ಕಾರಿನ ನಡುವೆ ಈ ಅಪಘಾತ ಸಂಭವಿಸಿದೆ. ಡಿಕ್ಕಿಯ ಪರಿಣಾಮ ಅಂಬುಲೆನ್ಸ್ ನಿಯಂತ್ರಣ ತಪ್ಪಿ ಉರುಳಿ ಬಿದ್ದಿದೆ. ಘಟನೆಯ ವೇಳೆ ಅಂಬುಲೆನ್ಸ್‌ನಲ್ಲಿದ್ದ ಕೆಲ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ತಕ್ಷಣವೇ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಅಪಘಾತದ ಬಳಿಕ ಸ್ಥಳದಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿದ ಬಾಗಲಕೋಟೆ ಸಂಚಾರಿ ಪೊಲೀಸರು ಪರಿಶೀಲನೆ ನಡೆಸಿ, ವಾಹನಗಳನ್ನು ತೆರವುಗೊಳಿಸಿ ಸಂಚಾರವನ್ನು ಸುಗಮಗೊಳಿಸಿದರು.

ತಮಿಳುನಾಡು ಚುನಾವಣಾ ಪ್ರಚಾರಕ್ಕೆ ಹೋಗಲ್ಲ: ಸಿದ್ದರಾಮಯ್ಯ

ಎರಡೂ ಕಡೆ ಗೆಲುವು: ಸಿಎಂ

• **ಮೈಸೂರು:** ವಿಧಾನಸಭೆಯ ಎರಡು ಕ್ಷೇತ್ರಗಳಿಗೆ ನಡೆಯುತ್ತಿರುವ ಉಪಚುನಾವಣೆಯಲ್ಲಿ ಎರಡು ಕ್ಷೇತ್ರಗಳನ್ನೂ ನಾವು ಗೆಲ್ಲುತ್ತೇವೆ. ಅಲ್ಲದೇ ಎಲ್ಲಾ ಚುನಾವಣೆಗಳಲ್ಲೂ ಕಠಿಣ ಸ್ಪರ್ಧೆ ಇರಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶನಿವಾರ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಕ್ಷೇತ್ರದ ಉಪಚುನಾವಣೆ ನಡೆಯುತ್ತಿದೆ.

ಎರಡು ಕ್ಷೇತ್ರಗಳಲ್ಲಿ ನಾವೇ ಗೆಲ್ಲುತ್ತೇವೆ. ದಾವಣಗೆರೆ ಕ್ಷೇತ್ರದಲ್ಲಿ ಯಾವ ಗೊಂದಲವೂ ಇಲ್ಲ. ಕಳೆದ ಮೂರು ಉಪ ಚುನಾವಣೆಯಲ್ಲಿ ಮೂರು ಕ್ಷೇತ್ರಗಳಲ್ಲಿ ನಾವೇ ಗೆದ್ದಿದ್ದೇವೆ. ಏ. 5ರಂದು ಕೇರಳಕ್ಕೆ ಪ್ರಚಾರಕ್ಕೆ ಹೋಗುತ್ತೇನೆ. ತಮಿಳುನಾಡು ಚುನಾವಣಾಪ್ರಚಾರಕ್ಕೆಹೋಗುವುದಿಲ್ಲ, ಕೇರಳದಿಂದ ಬಂದ ಮೇಲೆ ಬಾಗಲಕೋಟೆ,ದಾವಣಗೆರೆ ಕ್ಷೇತ್ರದಲ್ಲಿ ಪ್ರಚಾರ ಮಾಡುವೆ ಎಂದರು.

ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಕ್ಷೇತ್ರದ ಉಪ ಚುನಾವಣೆಯ ಫಲಿತಾಂಶಕ್ಕೂ,ಸಿಎಂ ಕುರ್ಚಿಯ ವಿಚಾರಕ್ಕೂ ಸಂಬಂಧವೇ ಇಲ್ಲ. ನಮ್ಮದು ಹೈಕಮಾಂಡ್ ಪಕ್ಷ. ಹೈಕಮಾಂಡ್ ಹೇಳಿದರೆ ಉಳಿದ ಎರಡು ಬಜೆಟ್ ಮಂಡಿಸುತ್ತೇನೆ ಎಂದು ಅಧಿವೇಶನದಲ್ಲಿ ಹೇಳಿರುವೆ. ಈಗಲೂ ಅದನ್ನೇ ಹೇಳುತ್ತೇನೆ. ಫಲಿತಾಂಶಕ್ಕೂ, ಸಿಎಂ ಸ್ಥಾನದ ವಿಷಯಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ಸ್ಪಷ್ಟಪಡಿಸಿದರು.



ಡ್ರಗ್ಸ್ ಮುಕ್ತ ಕರ್ನಾಟಕ

ಮೈಸೂರಿನಲ್ಲೂ ಡ್ರಗ್ಸ್ ತಯಾರಿಕೆ ಪತ್ತೆಯಾಗಿರುವುದಕ್ಕೆ ಪ್ರತಿಕ್ರಿಯಿಸಿದ ಸಿಎಂ, ಈಗಷ್ಟೇ ಪೊಲೀಸ್ ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದೇನೆ. ಡ್ರಗ್ಸ್ ಜಾಲ ಪತ್ತೆ ಮಾಡಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಕರ್ನಾಟಕವನ್ನು ಡ್ರಗ್ಸ್ ಮುಕ್ತ ರಾಜ್ಯವನ್ನಾಗಿ ಮಾಡಲು ನಾವು ಹೋರಾಡುತ್ತಿದ್ದೇವೆ. ಡ್ರಗ್ಸ್‌ನ ಲಿಂಕ್ ಯಾವುದೇ ಆಗಿರಲಿ, ಏನೇ ಆಗಿದ್ದರೂ ಕೂಡ ನಾವು ಅದನ್ನು ತಡೆಯುತ್ತೇವೆ ಎಂದರು.

ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಶಾಸಕ ಕೆ. ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯರಾದ ಡಾ. ಡಿ.ತಿಮ್ಮಯ್ಯ, ಕೆ.ಶಿವಕುಮಾರ್, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕರ್ನಾಟಕ ರಾಜ್ಯ ಗಾಣಿಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಅನಂತು, ಕಾಡಾ ಅಧ್ಯಕ್ಷ ಎಚ್.ಡಿ.ಗಣೇಶ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ ಮತ್ತಿತರರು ಹಾಜರಿದ್ದರು.

ಹಿಂದಿ ಕಡ್ಡಾಯ ಹೇರಿಕೆಯಿಲ್ಲ

ಶಿಕ್ಷಣದಲ್ಲಿ ದ್ವಿಭಾಷಾ ಸೂತ್ರ ಜಾರಿಯ ವಿಚಾರದಲ್ಲಿ ರಾಜ್ಯ ಸರ್ಕಾರ ಮಾಡಿರುವ ನಿರ್ಧಾರದಲ್ಲಿ ಅಚಲವಾಗಿದ್ದು, ಎಲ್ಲರೂ ಸರ್ಕಾರದ ತೀರ್ಮಾನವನ್ನು ಒಪ್ಪಿಕೊಳ್ಳಬೇಕು ಎಂದು ಹೇಳಿದರು. ಶಿಕ್ಷಣದಲ್ಲಿ ತ್ರಿಭಾಷಾ ನೀತಿಯ ಬದಲಿಗೆ ದ್ವಿಭಾಷಾ ನೀತಿಯನ್ನು ಜಾರಿಗೆ ತರಲು ಸರ್ಕಾರ ತೀರ್ಮಾನಿಸಿದೆ. ಯಾರೋ ಕೆಲವರು ವಿರೋಧ ಮಾಡಿದರು ಎನ್ನುವ ಕಾರಣಕ್ಕಾಗಿ ನಾವು ಹಿಂದೆ ಸರಿಯುವುದಿಲ್ಲ. ಎಲ್ಲಾ ದೃಷ್ಟಿಕೋನದಿಂದಲೂ ಪರಾಮರ್ಶಿಸಿ, ಸರ್ಕಾರ ನಿರ್ಧಾರ ಮಾಡಿದೆ ಎಂದು ಸಮರ್ಥಿಸಿಕೊಂಡರು. ಸರ್ಕಾರದ ನಿರ್ಧಾರವನ್ನು ಒಪ್ಪಿಕೊಳ್ಳಬೇಕಾಗಿದೆ ಎಂದರು.

ಕಾಂಗ್ರೆಸ್ ತಲೆಯಲ್ಲಿ ಮಾತ್ರ ಮನುವಾದ: ಛಲವಾದಿ



• **ಬೆಂಗಳೂರು:** ಸರ್ವರಿಗೂ ಸಮಪಾಲು, ಸಮಬಾಳು ಕೊಡುವುದು ಬಿಜೆಪಿಯ ಕರ್ತವ್ಯ. ಮನುವಾದ ಬದುಕಿ ರುವುದು ಕಾಂಗ್ರೆಸ್ಸಿನ ತಲೆಯಲ್ಲಿ ಮಾತ್ರ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಶನಿವಾರ ಮಾಧ್ಯಮಗಳ ಜತೆ ಮಾತನಾಡಿ, ಮುಸಲ್ಮಾನ ಬಂಧುಗಳೆಲ್ಲ ನಮಗೆ ಮತ ಹಾಕುತ್ತಾರೆಂದು ನಾನು ಹೇಳಲಾರೆ. ಯಾಕೆಂದರೆ ಕಾಂಗ್ರೆಸ್ಸಿನವರು ಅವರ ತಲೆಗೆ ಬಿಟ್ಟ ಹುಳಗಳು ಸತ್ತಿಲ್ಲ, ಅವು ಬದುಕಿವೆ ಎಂದರು.

ಮುಸಲ್ಮಾನರು ಭಾರತದಲ್ಲಿ ಸುಭದ್ರವಾಗಿ ಬದುಕುತ್ತಿದ್ದಾರೆ. ಅವರನ್ನು ದಾರಿ ತಪ್ಪಿಸಿ ನಿಮ್ಮ ಮತಬ್ಯಾಂಕ್ ಮಾಡಿದ್ದೀರಿ. ಅವರೆಲ್ಲ ವಿರೋಧ ಮಾಡಿದರೂ ದೇಶ ಆಳುತ್ತಿದ್ದೇವೆ. ಅಂಬೇಡ್ಕರರ ಸಂವಿಧಾನ ಎಲ್ಲ ರೀತಿಯ ರಕ್ಷಣೆಯನ್ನು ಅವರಿಗೂ ಕೊಟ್ಟಿದೆ. ಆದ್ದರಿಂದ ಅವರು ಸುಭದ್ರತೆಯಿಂದ ಬದುಕುತ್ತಿದ್ದಾರೆ ಎಂದರು.

ಕಾಂಗ್ರೆಸ್ಸಿಗರೇ, ಬಿಜೆಪಿ ಗುಮ್ಮ ತೋರಿಸಿ ಎಷ್ಟು ದಿನ ನೀವು ಮುಸಲ್ಮಾನರನ್ನು ಇಟ್ಟುಕೊಳ್ಳಲು ಸಾಧ್ಯ. ಅವರಲ್ಲೂ ಯುವಕರು, ತಿಳಿದವರು ಇದ್ದು ಯೋಚನೆ ಮಾಡುತ್ತಾರೆ. ಕಾಂಗ್ರೆಸ್ ನಮಗೇನು ಮಾಡಿದೆ, ಮೋದಿಯವರು ನಮಗೇನಾದರೂ ಅನ್ಯಾಯ, ವಂಚನೆ ಮಾಡಿದ್ದಾರಾ ಎಂದು ಯೋಚಿಸುತ್ತಾರೆ. ಆ ಜನಾಂಗಗಳು ಯೋಚನೆಮಾಡಿಸ್ವಾಭಿಮಾನವನ್ನು ಉಳಿಸಿಕೊಳ್ಳಲಿ ಎಂದು ಹೇಳಿದರು.

ಖೋತಾ ಬಜೆಟ್

ರಾಜ್ಯದಲ್ಲಿ ಈ ಬಾರಿಯೂ ಖೋತಾ ಬಜೆಟ್ ಇದೆ. ಮುಖ್ಯಮಂತ್ರಿಗಳು 1 ಲಕ್ಷದ 32 ಸಾವಿರ 190 ಕೋಟಿ ಸಾಲ ಮಾಡಿದ್ದಾರೆ. ಇದಕ್ಕಾಗಿಯೇ ಅವರಿಗೆ ಸಾಲರಾಮಯ್ಯ ಎಂಬ ಬಿರುದು ಸಿಕ್ಕಿದೆ. ಸಾಲ ಮಾಡಿದ್ದನ್ನು ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಈ ಬಾರಿಯ ರಾಜ್ಯ ಬಜೆಟ್ ಅಧಿವೇಶನವು 20 ದಿನಗಳ ಕಾಲ ನಡೆದರೂ ಉತ್ತರ ಸಿಕ್ಕಿದ್ದು ಮಾತ್ರ ಬಹಳ ಕಡಿಮೆ ಎಂದರು.ಮಹದೇವಪ್ಪ ಅವರು ಸಮಾಜ ಕಲ್ಯಾಣ ಸಚಿವರಾದ ಬಳಿಕ ದಲಿತರನ್ನು ಸರ್ವನಾಶ ಮಾಡಿದ್ದಾರೆ. ಟೆಂಡರ್ ಇಲ್ಲದೇ ಗುತ್ತಿಗೆ ನೀಡುತ್ತಾರೆ. ಎಸ್‌ಸಿಪಿ, ಟಿಎಸ್‌ಪಿ ಹಣದಲ್ಲಿ ಯಾರಿಂದಲೋ ಒಂದು ಪತ್ರ ಪಡೆದು 5 ಕೋಟಿ, 10 ಕೋಟಿ ಎಂದು ಬರೆದುಕೊಡುತ್ತಾರೆ ಎಂದು ಟೀಕಿಸಿದರು.

ಟಿಕೆಟ್ ನಿರಾಕರಿಸಿದ ಶಾಸಕ ಸುರೇಶ್ ಕುಮಾರ್



• **ಬೆಂಗಳೂರು:** ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಕ್ರಿಕೆಟ್ ಪಂದ್ಯ ವೀಕ್ಷಣೆಯ ಟಿಕೆಟ್ ಅನ್ನು ಶಾಸಕ ಸುರೇಶ್ ಕುಮಾರ್ ನಿರಾಕರಿಸಿದ್ದು, ಮುಂಬರುವ ಐಪಿಎಲ್ ಪಂದ್ಯಗಳಿಗೆ ಸಂಬಂಧಿಸಿದಂತೆ ನನ್ನ ಹೆಸರಿನಲ್ಲಿ ಯಾವುದೇ ಟಿಕೆಟ್ ಅಥವಾ ಪಾಸ್‌ಗಳನ್ನು ವಿತರಿಸಬಾರದೆಂದು ಸಭಾಧ್ಯಕ್ಷ ಯು.ಟಿ ಖಾದರ್‌ಗೆ ಪತ್ರ ಬರೆದಿದ್ದಾರೆ.

ಐಪಿಎಲ್ ವ್ಯಾಪ್ತಿಯಲ್ಲಿ ಜನಸಾಮಾನ್ಯರು ಅನುಭವಿಸುತ್ತಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಸದನದಲ್ಲಿ ಚರ್ಚೆ ನಡೆಯುತ್ತಿದ್ದಾಗ, ದಿಢೀರನೆ ಚಿನ್ನಸ್ವಾಮಿ ಸ್ಟೇಡಿಯಂನ ಐಪಿಎಲ್ ಪಂದ್ಯ, ಶಾಸಕರಿಗೆ ಟಿಕೆಟ್ ಹಂಚಿಕೆ ಹಾಗೂ ಶಾಸಕರ ಮರ್ಯಾದೆಯ ಕುರಿತು ಚರ್ಚೆಗಳು ಪ್ರಾರಂಭವಾದದ್ದು ತಮಗೆ ತಿಳಿದೇ ಇದೆ. ಜನರ ಪರವಾಗಿ ಧ್ವನಿ ಎತ್ತಬೇಕಾದ ಸದನದಲ್ಲಿ ಜನಸೇವಕರಾದ ನಮಗೆ ವಿವಿಐಪಿ ಮರ್ಯಾದೆ ಸಿಗಬೇಕೆಂಬ ಆಗ್ರಹ ವ್ಯಕ್ತವಾಗುತ್ತಿರುವುದು ನಿಜಕ್ಕೂ ದುರಂತ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಜನಸಾಮಾನ್ಯರ ಅದೆಷ್ಟೋ ಗಂಭೀರ ಪ್ರಶ್ನೆಗಳಿಗೆ, ಸಮಸ್ಯೆಗಳಿಗೆ ವರ್ಷಗಟ್ಟಲೆ ಪರಿಹಾರ ಸಿಗುವುದಿಲ್ಲ. ಆದರೆ ಶಾಸಕರ ಸೌಲಭ್ಯ, ಟಿಕೆಟ್ ವಿಚಾರ ಬಂದಾಗ 24 ಗಂಟೆಯೊಳಗೆ ಸ್ಪಂದಿಸುವ ಉತ್ಸುಕತೆಯನ್ನು ಸರ್ಕಾರ ತೋರಿರುವುದು ಜನಸಾಮಾನ್ಯರಲ್ಲಿ ಆಶ್ಚರ್ಯ ಹಾಗೂ ಜನಪ್ರತಿನಿಧಿಗಳ ಬಗ್ಗೆ ತಿರಸ್ಕಾರ ಮೂಡುವಂತೆ ಮಾಡಿದೆ ಬೇಸರ ವ್ಯಕ್ತಪಡಿಸಿದ್ದಾರೆ.

ಮಾಧ್ಯಮಗಳ ವರದಿ ಪ್ರಕಾರ ಶಾಸಕರಿಗೆ ತಲಾ 2 ಹಾಗೂ ಮುಂದಿನ ದಿನಗಳಲ್ಲಿ 5 ಟಿಕೆಟ್, ಪಾಸ್ ನೀಡಲು ನಿರ್ಧರಿಸಲಾಗಿದೆ ಎಂದು ತಿಳಿದುಬಂದಿದೆ. ಸಮಾಜವಾದಿ ಎಂದು ಹೇಳಿಕೊಳ್ಳುವ ಸರ್ಕಾರದ ಆಡಳಿತದಲ್ಲಿ ಈ ವಿವಿಐಪಿ ಸಂಸ್ಕೃತಿಗೆ ಪುರಸ್ಕಾರ ಸಿಗುತ್ತಿರುವುದು ಆಘಾತಕಾರಿ ಎಂದಿದ್ದಾರೆ.

ಕಳೆದ ವರ್ಷ ಇದೇ ಐಪಿಎಲ್ ಪಂದ್ಯದ ಸಂದರ್ಭದಲ್ಲಿ ನಡೆದ ದುರಂತದಲ್ಲಿ 11 ಜನ ಅಮಾಯಕರು ಪ್ರಾಣ ಕಳೆದುಕೊಂಡ ಘಟನೆಯ ಆಕ್ರಂದನ ಇಂದಿಗೂ ನನ್ನ ಕಿವಿಯಲ್ಲಿ ಮಾರ್ದನಿಸುತ್ತಿದೆ. ಆ ನೋವಿನ ನಡುವೆ ನಾವು ಐಪಿಎಲ್ ಟಿಕೆಟ್‌ಗಾಗಿ ಸದನದಲ್ಲಿ ಪಟ್ಟು ಹಿಡಿಯುವುದು ನಮ್ಮನ್ನು ಜನರ ದೃಷ್ಟಿಯಲ್ಲಿ ಇನ್ನಷ್ಟು ಕನಿಷ್ಠರನ್ನಾಗಿಸುತ್ತದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಹಾಗೂ ನನ್ನ ಆತ್ಮಸಾಕ್ಷಿಗೆ ಅನುಗುಣವಾಗಿ, ಸರ್ಕಾರ ಅಥವಾ ಕೆಎಸ್‌ಸಿಎ ವತಿಯಿಂದ ಶಾಸಕರಿಗೆ ನೀಡಲಾಗುವ ಐಪಿಎಲ್ ಪಂದ್ಯದ ಯಾವುದೇ ಪಾಸ್ ಅಥವಾ ಟಿಕೆಟ್‌ಗಳನ್ನು ನಾನು ಸವಿನಯವಾಗಿ ನಿರಾಕರಿಸುತ್ತಿದ್ದೇನೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ನಾಳೆ ವಾಣಿಜ್ಯ ತೆರಿಗೆ ಕಚೇರಿಗಳ ಕಾರ್ಯಾಚರಣೆ

• **ಬೆಂಗಳೂರು:** ಮಾ.30 ರ ಸೋಮವಾರ ಮಹಾವೀರ ಜಯಂತಿ ಪ್ರಯುಕ್ತ ಸಾರ್ವತ್ರಿಕ ರಜೆ ಇದ್ದರೂ ಸಹ ವಾಣಿಜ್ಯ ತೆರಿಗೆ ಇಲಾಖೆಯ ಎಲ್ಲಾ ಕಚೇರಿಗಳು ಅಂದು ಕಾರ್ಯನಿರ್ವಹಿಸಲಿವೆ. ಈ ಕುರಿತು ವಾಣಿಜ್ಯ ತೆರಿಗೆಗಳ ಆಯುಕ್ತರು ಆದೇಶ ಹೊರಡಿಸಿದ್ದಾರೆ. 2025-26ರ ಆರ್ಥಿಕ ವರ್ಷದ ಮುಕ್ತಾಯದ ಹಿನ್ನೆಲೆಯಲ್ಲಿ, ತೆರಿಗೆದಾರರ ಅನುಕೂಲಕ್ಕಾಗಿ ಅವಕಾಶ ಕಲ್ಪಿಸಲಾಗಿದೆ. ಸಾರ್ವತ್ರಿಕ ರಜೆಯ ದಿನವಂದು ವಾಣಿಜ್ಯ ತೆರಿಗೆ ಕಚೇರಿಗಳ ಕಾರ್ಯಾಚರಣೆ ನಡೆಸಲಿವೆ.

ಬಿಜೆಪಿಯವರಿಗೆ ನಿರಾಸೆ: ಎಂ.ಬಿ.ಪಾಟೀಲ್

• **ಬೆಂಗಳೂರು:** ರಾಜ್ಯದ2 ವಿಧಾನಸಭಾಕ್ಷೇತ್ರಗಳ ಉಪ ಚುನಾವಣೆಯಲ್ಲಿ ಬಿಜೆಪಿಯವರಿಗೆ ನಿರಾಸೆಯಾಗುವುದು ಮಾತ್ರವಲ್ಲ, 2028ರ ವಿಧಾನಸಭೆ ಸಾರ್ವತ್ರಿಕ ಚುನಾವಣೆಯಲ್ಲೂ ನಿರಾಸೆಯಾಗಲಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದರು.

ಶನಿವಾರಸುದ್ದಿಗಾರರೊಂದಿಗೆಮಾತನಾಡಿದ ಅವರು, ಎರಡು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲುವುದು ಮಾತ್ರವಲ್ಲ, 2028ರ ವಿಧಾನಸಭೆಯಲ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೊಮ್ಮೆ ಗೆದ್ದು ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಗೊಂದಲ ಬಗೆಹರಿದಿದೆ. ಬಂಡಾಯವಾಗಿ ಸ್ಪರ್ಧಿಸಿದ್ದ ಸಾಧಿಕ್ ಪೈಲ್ವಾನ್ ಅವರ ಮನವೊಲಿಸಲಾಗಿದೆ. ಅವರು ಕಾಂಗ್ರೆಸ್ ಅಭ್ಯರ್ಥಿ ಪರ ಚುನಾವಣೆ ಪ್ರಚಾರದಲ್ಲಿ ಭಾಗಿಯಾಗಲಿದ್ದಾರೆ. ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರೂ ಸೇರಿದಂತೆ ನಾಯಕರು ಅವರ ಮನವೊಲಿಸಿದ್ದಾರೆ ಎಂದರು.

ಅಲ್ಪಸಂಖ್ಯಾತರಿಗೆ ನಾವು ಕೇವಲ ಭರವಸೆ ನೀಡುತ್ತಿಲ್ಲ, ಈಗಾಗಲೇ ಮೂರು ಬಾರಿ ಅಬ್ದುಲ್ ಜಬ್ಬಾರ್ ಅವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಿದ್ದೇವೆ. ಮುಂದೆಯೂ ರಾಜ್ಯಸಭೆ ಸದಸ್ಯರನ್ನಾಗಿ ಮಾಡುವ ಅವಕಾಶ ಇದೆ ಎಂದು ತಿಳಿಸಿದರು. ಬಾಗಲಕೋಟೆಯಲ್ಲಿ ನಮ್ಮ ಪಕ್ಷದ ಸಾಕಷ್ಟು ಸ್ಥಳೀಯ ನಾಯಕರಿದ್ದು, ಮತದಾರರ ಮನಗೆಲ್ಲುವ ಪ್ರಯತ್ನ ಮಾಡುತ್ತಿದ್ದಾರೆ. ಶಾಸಕರಾಗಿದ್ದವರು ಮೃತಪಟ್ಟಾಗ ಅವರ ಕುಟುಂಬದವರಿಗೆ ಟಿಕೆಟ್ ಕೊಡುವ ಪದ್ಧತಿಯನ್ನು ಮುಂದುವರೆಸಿದ್ದೇವೆ. ಈ ವಿಚಾರದಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಸಚಿವ ಜಮೀರ್ ಅಹಮ್ಮದ್ ಖಾನ್ ಕೂಡ ಉಪ ಚುನಾವಣೆಯ ಪ್ರಚಾರದಲ್ಲಿ ಭಾಗಿಯಾಗುತ್ತಾರೆ ಎಂದು ಹೇಳಿದರು.



ಮಾತೃಭಾಷೆಗೆ ಆದ್ಯತೆ

ಶಿಕ್ಷಣದಲ್ಲಿ ಮಾತೃಭಾಷೆಗೆ ಆದ್ಯತೆ ದೊರೆಯಬೇಕು. ಪ್ರಾಥಮಿಕ ಶಿಕ್ಷಣದಿಂದ ವೈದ್ಯಕೀಯ ಶಿಕ್ಷಣದವರೆಗೂ ಕನ್ನಡ ಭಾಷೆ ಕಲಿಕೆ ಇರಬೇಕು, ಕನ್ನಡದ ಜೊತೆಗೆ ಹಿಂದಿ ಕಲಿಕೆಯೂ ಆಗಬೇಕು. ಹಿಂದಿ ಭಾಷೆ ಕಲಿತರೆ ತಪ್ಪಿಲ್ಲ, ಆದರೆ ಹಿಂದಿಯನ್ನು ರಾಷ್ಟ್ರ ಭಾಷೆಯನ್ನಾಗಿ ಇನ್ನು ಒಪ್ಪಿಕೊಂಡಿಲ್ಲ, ಹೀಗಾಗಿ ಸರ್ಕಾರ ಈ ರೀತಿಯ ತೀರ್ಮಾನ ತೆಗೆದುಕೊಂಡಿರಬೇಕು ಎಂದು ಸಚಿವ ಪಾಟೀಲ್ ತಿಳಿಸಿದರು. ತೈಲ ಅಭಾವ ಪರಿಸ್ಥಿತಿಯು ಕೇವಲ ಕೈಗಾರಿಕಾ ಮಾತ್ರವಲ್ಲ ಎಲ್ಲಾ ಕ್ಷೇತ್ರಗಳ ಮೇಲೂ ವ್ಯತಿರಿಕ್ತ ಪರಿಣಾಮವಾಗುತ್ತದೆ. ಇದು ರಾಜ್ಯಕ್ಕೆ ಮಾತ್ರವಲ್ಲ ದೇಶ ಹಾಗೂ ಜಗತ್ತಿಗೂ ಅನ್ವಯ ಆಗುತ್ತದೆ ಎಂದು ಪಾಟೀಲ್ ಹೇಳಿದರು.


ಮತ ಪ್ರಚಾರದ ವೇಳೆ ಪ್ರದೀಪ್ ಈಶ್ವರ್ ಹೈಡ್ರಾಮಾ!

• **ದಾವಣಗೆರೆ:** ತಾಕತ್ತಿದ್ದರೆ ದಾವಣಗೆರೆಗೆ ಬಾ... ಎಂಬ ಮಾಜಿ ಮೇಯರ್ ಬಿ.ಜೆ. ಅಜಯಕುಮಾರ್ ಸವಾಲು ಸ್ವೀಕರಿಸಿದ್ದ ಶಾಸಕ ಪ್ರದೀಪ್ ಈಶ್ವರ್ ಶನಿವಾರ ನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಎಂ.ಶಾಮನೂರು ಪರ ಪ್ರಚಾರಕ್ಕೆ ಆಗಮಿಸಿದ ವೇಳೆ ಹೈಡ್ರಾಮಾ ನಡೆಯಿತು. ನಗರದ ಕೆ.ಬಿ ಬಡಾವಣೆಯಲ್ಲಿ ರಾಘವೇಂದ್ರ ಸ್ವಾಮಿ ಮಠದಲ್ಲಿ ಪೂಜೆ ಸಲ್ಲಿಸಿದ ನಂತರ ತೆರೆದ ವಾಹನದಲ್ಲಿ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ರೋಡ್ ಶೋ ಆರಂಭಿಸಿದರು.

ಬಿಜೆಪಿ ಕಚೇರಿಗೆ ಸಾಗುವ ಮಾರ್ಗದಲ್ಲಿ ಪ್ರದೀಪ್ ಈಶ್ವರ್ ಕಾರಿನ ಮೇಲೆನಿಂತುಬರುತ್ತಿದ್ದಂತೆಬಿಜೆಪಿ, ಕಾಂಗ್ರೆಸ್ ಗುಂಪುಗಳು ಮುಖಾಮುಖಿಯಾಗಿ, ಪರಸ್ಪರರ ವಿರುದ್ಧ ಘೋಷಣೆಕೂಗತೊಡಗಿದರು. ಶಾಸಕಪ್ರದೀಪ್ ಈಶ್ವರ್ ಕಾಂಗ್ರೆಸ್ ಬಾವುಟ ಹಿಡಿದು, ತೊಡೆ ತಟ್ಟುತ್ತಾ, ತಲೆಗೂದಲನ್ನು ಸವರಿಕೊಂಡವರಂತೆ ತಮ್ಮ ಕೂದಲನ್ನೂ ಅಲುಗಾಡಿಸಲು ನಿಮ್ಮಿಂದ ಆಗುವುದಿಲ್ಲವೆಂಬಂತೆ ವರ್ತಿಸಿದರು. ಇದರಿಂದ ಆಕ್ರೋಶಗೊಂಡ ಬಿಜೆಪಿ ಮುಖಂಡರು, ಕಾರ್ಯಕರ್ತರು ಕೈಯಲ್ಲಿ ಚಪ್ಪಲಿ ಹಿಡಿದು ನಿಂದಿಸಿದರೆ, ಬಿಜೆಪಿ ಮಹಿಳಾ ಮೋರ್ಚಾದವರು ಕೈಯಲ್ಲಿ ಪೊರಕೆ ಹಿಡಿದು, ತಮ್ಮ ಕೈಯಲ್ಲಿನ್ನ ಬಳೆಗಳನ್ನು ಬಿಚ್ಚಿ ಪ್ರದೀಪ್ ಈಶ್ವರ್‌ಗೆ ತೋರಿಸಿದರು.

₹12 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆ

• **ಮೈಸೂರು:** ಜಿಲ್ಲೆಯ ಹುಣಸೂರು ತಾಲೂಕಿನಲ್ಲಿ ಪೊಲೀಸರು 12 ಕೋಟಿ ರೂಪಾಯಿ ಮೌಲ್ಯದ ಡ್ರಗ್ಸ್ ದಾಸ್ತಾನು ಪತ್ತೆ ಮಾಡಿದ್ದಾರೆ. ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ದಾಸನಪುರ ಗ್ರಾಮದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಮೈಸೂರು ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ.



ಮೈಸೂರು ಸಿದ್ದಿಖಿ ಮೊಹಲ್ಲಾ ನಿವಾಸಿ ಮೊಹಮ್ಮದ್ ಇರ್ಫಾನ್ ಮತ್ತು ಹುಣಸೂರಿನ ಮೊಹಮ್ಮದ್ ಇರ್ಫಾನ್ ಆರೋಪಿಗಳಾಗಿದ್ದಾರೆ. ಹುಣಸೂರು ತಾಲೂಕಿನ ರತ್ನಪುರಿ-ದಾಸನಪುರ ಮಧ್ಯೆ ಇರುವ ಹುಣಸೂರು ನಗರದ ರಹಮತ್ ಮೊಹಲ್ಲಾದ ಇರ್ಫಾನ್ ಎಂಬುವವರಿಗೆ ಸೇರಿದ ತೋಟದ ಮನೆಯಲ್ಲಿ ಭಾರೀ ಪ್ರಮಾಣದ ಸಿಂಥೆಟಿಕ್ ಡ್ರಗ್ಸ್ ಪ್ಯಾಕೆಟ್ ಮಾಡುತ್ತಿದ್ದರು.

ತೋಟದ ಮಾಲೀಕ ಮೊಹಮ್ಮದ್ ಇರ್ಫಾನ್ ಮೈಸೂರಿನ ಇರ್ಫಾನ್ ಎಂಬಾತ ಸೇರಿಕೊಂಡು ಈ ಕೃತ್ಯ ನಡೆಸುತ್ತಿದ್ದ. ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದ ವೇಳೆ ಸ್ಥಳದಿಂದ ಪರಾರಿಯಾಗಲೆತ್ನಿಸಿದ ಆರೋಪಿಗಳನ್ನು ಸುಮಾರು 10 ಕಿ.ಮೀ.ವರೆಗೆ ಚೇಸ್ ಮಾಡಿ ಹುಣಸೂರು ನಗರಕ್ಕೆ ಸಮೀಪದ ಸಲೀಂ ಪ್ಯಾಲೇಸ್ ಬಳಿ ಬಂಧಿಸಿದ್ದಾರೆ.

ಇವರ ಜಮೀನಿನಲ್ಲಿ ಸಿಂಥೆಟಿಕ್ ಡ್ರಗ್ಸ್ ತಯಾರಿಕೆ ಮತ್ತು ಸಂಗ್ರಹಣೆ ನಡೆಸಲಾಗುತ್ತಿದ್ದುದನ್ನು ಪೊಲೀಸರು ಪತ್ತೆಹಚ್ಚಿದ್ದಾರೆ. ಹುಣಸೂರು ಟೌನ್ ರಹಮತ್ ಮೊಹಲ್ಲಾ ನಿವಾಸಿಯ ಶೆಡ್‌ನಲ್ಲಿ ಕಚ್ಚಾ ವಸ್ತುಗಳನ್ನು ಸಂಗ್ರಹಿಸಿಡಲಾಗಿತ್ತು ಎಂದು ತಿಳಿದುಬಂದಿದೆ ಎಂದು ಹೇಳಿದರು.

ಪೊಲೀಸರು ಜಪ್ತಿ ಮಾಡಿದ ವಸ್ತುಗಳು

ಪೊಲೀಸರು 7.35 ಕೆ.ಜಿ ತೂಕದ ಮೆಫೆಡ್ರೋನ್ ಮತ್ತು 41 ಕೆ.ಜಿ ತೂಕದ ಡ್ರಗ್ಸ್ ಪ್ರಿಕರ್ಸರ್ ವಸ್ತುಗಳನ್ನು ವಶಪಡಿಸಿಕೊಂಡಿದ್ದು, ಒಟ್ಟು 48 ಕೆ.ಜಿ ತೂಕದ ಡ್ರಗ್ಸ್ ಪದಾರ್ಥಗಳನ್ನು ಜಪ್ತಿ ಮಾಡಲಾಗಿದೆ. ಆರೋಪಿಗಳು ಈ ರೀತಿಯಾಗಿ ಸಿಂಥೆಟಿಕ್ ಡ್ರಗ್ಸ್ ತಯಾರಿಕೆ ಮತ್ತು ವಿತರಣೆ ಮಾಡುತ್ತಿದ್ದರು. ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದರು.

ಹಿಂದಿ ಭಾಷೆಗೆ ಗ್ರೇಡಿಂಗ್ ವ್ಯವಸ್ಥೆ ಜಾರಿ: ಕನ್ನಡ ಸಂಘಟನೆ ಸಂಭ್ರಮ

• **ಬೆಂಗಳೂರು:** ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆ ಹಿಂದಿಗೆ ಗ್ರೇಡಿಂಗ್ ವ್ಯವಸ್ಥೆ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರ ಮನೆಯ ಮುಂದೆ ಕನ್ನಡ ಪರ ಸಂಘಟನೆಗಳಿಂದ ಸಂಭ್ರಮಾಚರಣೆ ನಡೆಯಿತು.

ಕರವೇ ಅಧ್ಯಕ್ಷ ನಾರಾಯಣಗೌಡ ನೇತೃತ್ವದಲ್ಲಿ ಮುಖಂಡರು, ಕಾರ್ಯಕರ್ತರ ನಿಯೋಗ, ಸಚಿವರ ಮನೆಗೆ ಭೇಟಿ ನೀಡಿ ಐತಿಹಾಸಿಕ ತೀರ್ಮಾನ ತೆಗೆದುಕೊಂಡಿದ್ದಕ್ಕಾಗಿ ಸಚಿವರಿಗೆ ಅಭಿನಂದನೆ ಸಲ್ಲಿಸಿದರು. ಬಳಿಕ ಮಾತನಾಡಿದ ಕರವೇ ಅಧ್ಯಕ್ಷ ನಾರಾಯಣಗೌಡ ಅವರು, ಹಿಂದಿ ಭಾಷೆ ಪರೀಕ್ಷೆಯಲ್ಲಿ ಉತ್ತೀರ್ಣವಾಗಲೇಬೇಕು ಎಂಬ ಬಲವಂತದ ಹೇರಿಕೆಯಿಂದ ಮಕ್ಕಳಿಗೆ ತೊಂದರೆಯಾಗುತ್ತಿತ್ತು. ಭಾಷೆಯ ದಬ್ಬಾಳಿಕೆಯಿಂದಾಗಿ ಲಕ್ಷಾಂತರ ಮಕ್ಕಳ ಭವಿಷ್ಯ ತೊಂದರೆಗೆ ಒಳಗಾಗುವುದನ್ನು ಸರಕಾರದ ಈ ತೀರ್ಮಾನ ತಪ್ಪಿಸಿದೆ. ಶಾಪಗ್ರಸ್ತ ವ್ಯವಸ್ಥೆಯಿಂದ ವಿಮೋಚನೆಯಾಗಿದೆ. ಮಕ್ಕಳ ಭವಿಷ್ಯ ಉಜ್ವಲವಾಗಲಿದೆ ಎಂದಿದ್ದಾರೆ.

ಬಿಜೆಪಿಯ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇದನ್ನು ಅರ್ಥ ಮಾಡಿಕೊಳ್ಳಬೇಕು. ಮಹಾರಾಷ್ಟ್ರದಲ್ಲಿ ಬಿಜೆಪಿಯ ಆಡಳಿತವೇ ಇದ್ದರೂ ತ್ರಿಭಾಷಾ ಸೂತ್ರವನ್ನು ಕೈಬಿಟ್ಟಿದ್ದಾರೆ. ನಮ್ಮಲ್ಲಿ ಬಿಜೆಪಿಯವರು ಗ್ರೇಡಿಂಗ್ ಪದ್ಧತಿಗೆ ವಿರೋಧ ಮಾಡುತ್ತಿರುವುದು ಸರಿಯಲ್ಲ, ರಾಜಕೀಯ ಅಜೆಂಡಕ್ಕಾಗಿ ಮಕ್ಕಳ ಭವಿಷ್ಯದ ಜೊತೆ ಚೆಲ್ಲಾಟವಾಡಬೇಡಿ ಎಂದು ಎಚ್ಚರಿಕೆ ನೀಡಿದರು.

ದಕ್ಷಿಣ ಪಾಲಿಕೆಯ 48.21 ಲಕ್ಷ ರೂ. ಉಳಿತಾಯ ಬಜೆಟ್। ಸ್ವಂತ ಕಟ್ಟಡಕ್ಕೆ 150 ಕೋಟಿ ರೂ. ಮೀಸಲು

ಹಸಿರು, ಸುರಕ್ಷತೆ, ಶಾಶ್ವತ ನೆಲೆ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರದ(ಜಿಬಿಎ) ಬೆಂಗಳೂರು ದಕ್ಷಿಣ ನಗರ ಪಾಲಿಕೆ ತನ್ನ 2026-27ನೇ ಸಾಲಿನ ಆಯವ್ಯಯ ಮಂಡಿಸಿದೆ. ನಗರವನ್ನು ಹಸಿರು, ಸುರಕ್ಷಿತ, ಶಾಶ್ವತ, ಸಮಾನತೆ ಮತ್ತು ಸಮುದಾಯ ಸ್ನೇಹಿ ಸ್ಥಳವಾಗಿಸುವ ದೃಷ್ಟಿಕೋನದೊಂದಿಗೆ 3825.95 ಕೋಟಿ ರೂ. ವೆಚ್ಚದ ಬಜೆಟ್‌ನ್ನು ಪ್ರಸ್ತುತ ಪಡಿಸಿದೆ. 48.21 ಲಕ್ಷ ರೂ.ಉಳಿತಾಯವನ್ನು ತೋರಿಸಿದೆ.

ಶನಿವಾರ ಬನಶಂಕರಿಯ ನಗರ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ದಕ್ಷಿಣ ಪಾಲಿಕೆಯ ಆಯುಕ್ತ ಕೆ.ಎನ್ ರಮೇಶ್ ಅವರು ಪ್ರಸ್ತುತಿ ಪಡಿಸಿದರು.

ದಕ್ಷಿಣ ಪಾಲಿಕೆಗೆ ಸ್ವಂತ ಕಟ್ಟಡ ನಿರ್ಮಿಸಲು 150 ಕೋಟಿ ರೂ. ಮೀಸಲಿಟ್ಟಿದ್ದಾರೆ. ಭೂಸ್ವಾಧೀನಕ್ಕಾಗಿ 50.45 ಕೋಟಿ ರೂ. ಮೀಸಲಿಡಲಾಗಿದೆ.

ಪಾಲಿಕೆ ಬಜೆಟ್
2026-2027

ಪಾದಚಾರಿ ಮಾರ್ಗಗಳು : ಬನಶಂಕರಿ ದೇವಸ್ಥಾನ, ಮೆಟ್ರೊ ಮತ್ತು ಟಿಟಿಎಂಸಿ ಸಂಪರ್ಕಿಸುವ ಪಾದಚಾರಿ ಸ್ಕೈವಾಕ್ ಅನ್ನು 32 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುವುದು. ಪಿಪಿಪಿ ಮಾದರಿಯಲ್ಲಿ 18 ಸ್ಕೈವಾಕ್‌ಗಳನ್ನು ನಿರ್ಮಿಸಲು ಕ್ರಮ. ಮೆಟ್ರೋ ನಿಲ್ದಾಣಗಳಲ್ಲಿ ಬಹುಮಹಡಿ ಕಾರ್ ಪಾರ್ಕಿಂಗ್ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಹೊಸ ಪಾರ್ಕಿಂಗ್ ನೀತಿಯನ್ನು ಜಾರಿಗೆ ತರಲಾಗುವುದು.

ರಾಜಕಾಲುವೆ ಅಭಿವೃದ್ಧಿ: ವಿಶ್ವ ಬ್ಯಾಂಕ್ ನೆರವಿನೊಂದಿಗೆ 440 ಕೋಟಿ ರೂ. ವೆಚ್ಚದಲ್ಲಿ 28.50 ಕಿ.ಮೀ ಉದ್ದದ ಬೃಹತ್ ಮಳೆನೀರು ಕಾಲುವೆಗಳ ಅಭಿವೃದ್ಧಿ ಕಾಮಗಾರಿಯನ್ನು ಈ ವರ್ಷ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ಆಸ್ತಿ ತೆರಿಗೆ: ಆಸ್ತಿ ತೆರಿಗೆ ದರ ಹೆಚ್ಚಿಸದೆ ವೈಜ್ಞಾನಿಕ ಸಂಗ್ರಹದ ಮೂಲಕ 1101.30 ಕೋಟಿ ರೂ.ಆದಾಯದ ಗುರಿ ಹೊಂದಲಾಗಿದೆ. ಬಿ ಖಾತೆಯಿಂದ ಎ ಖಾತೆಗೆ ಪರಿವರ್ತಿಸುವ ಪ್ರಕ್ರಿಯೆಯಿಂದ 225 ಕೋಟಿ ರೂ. ನಿರೀಕ್ಷಿಸಲಾಗಿದೆ. ಹೊಸ ಜಾಹೀರಾತು ನೀತಿಯಿಂದ 126 ಕೋಟಿ ಹಾಗೂ ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆಯಿಂದ 40 ಕೋಟಿ ರೂ. ಸಂಗ್ರಹಿಸುವ ಯೋಜನೆ ಇದೆ. ಟಿಡಿಆರ್ ಮೂಲಕ ಭೂಸ್ವಾಧೀನ ಪ್ರಕ್ರಿಯೆಗೆ ವೇಗ ನೀಡಲು 50.45 ಕೋಟಿ ಮೀಸಲಿಡಲಾಗಿದೆ. ಬನ್ನೇರುಘಟ್ಟ ರಸ್ತೆ (ಡೈರಿ ಸರ್ಕಲ್‌ನಿಂದ ನೈಸ್ ರಸ್ತೆವರೆಗೆ), ಸುಬ್ರಮಣ್ಯಪುರ ರಸ್ತೆ ಮತ್ತು ಬೇಗೂರು ರಸ್ತೆ ಅಭಿವೃದ್ಧಿಪಡಿಸಲಾಗುವುದು.

ಡಿಜಿಟಲ್ ಆಡಳಿತ ಮತ್ತು ಜನಸಂಪರ್ಕ: ಪಾಲಿಕೆಯ 5.13 ಲಕ್ಷ ಆಸ್ತಿಗಳ ಪೈಕಿ ಉಳಿದ ಆಸ್ತಿಗಳಿಗೆ ತ್ವರಿತವಾಗಿ ಇ-ಖಾತಾ ನೀಡಲು ವಿಶೇಷ ಕ್ಯಾಂಪ್‌ಗಳನ್ನು ಆಯೋಜಿಸಲಾಗುವುದು. ಸಂಪನ್ಮೂಲ ಕ್ರೋಢೀಕರಣಕ್ಕೆ ಎಐ ತಂತ್ರಜ್ಞಾನ ಬಳಸಲು ವೇದಿಕೆ ಸಜ್ಜಾಗುತ್ತಿದೆ.

ಆಡಳಿತ ವಿಕೇಂದ್ರೀಕರಣ: 72 ವಾರ್ಡ್‌ಗಳಲ್ಲಿ ವಾರ್ಡ್ ಕಚೇರಿ ತೆರೆಯುವ ಮೂಲಕ ಆಡಳಿತವನ್ನು ಜನರ ಮನೆಬಾಗಿಲಿಗೆ ಕೊಂಡೊಯ್ಯಲು ನಿರ್ಧರಿಸಲಾಗಿದೆ. ಪಾರದರ್ಶಕತೆಗೆ ಇ-ಆಫೀಸ್ ಮುಖಾಂತರ ಕಡತ ವಿಲೇವಾರಿ ಮಾಡಿ, ಸಂಪೂರ್ಣ ಕಾಗದ ರಹಿತ ಆಡಳಿತ ಜಾರಿಗೆ ತರಲು ಕ್ರಮ. ನೇರ ವೇತನ ಪಡೆಯುತ್ತಿದ್ದ 2109 ಪೌರಕಾರ್ಮಿಕರನ್ನು ಖಾಯಂ ನೇಮಕಾತಿ ಮಾಡಿಕೊಳ್ಳಲು ಕ್ರಮ ವಹಿಸಲಾಗಿದೆ.

ಸಿಬ್ಬಂದಿಗಳ ಹಾಜರಾತಿಗಾಗಿ ಹೊಸ ತಂತ್ರಾಂಶ ಹಾಗೂ ತೆರಿಗೆ ಸೋರಿಕೆ ತಡೆಗಟ್ಟಲು ಮತ್ತು ಅಕ್ರಮ ಕಟ್ಟಡಗಳ ಮೇಲೆ ನಿಗಾ ಇಡಲು ವಿಶೇಷ ಜಾಗೃತ ದಳ ರಚಿಸಲಾಗುವುದು.

ಇವಿ ದ್ವಿಚಕ್ರವಾಹನ ಉಚಿತ ವಿತರಣೆ

ಒಂಟಿ ಮನೆ ನಿರ್ಮಾಣ ಯೋಜನೆಯಲ್ಲಿ, ತಲಾ 5.ಲಕ್ಷ ರೂ.ಗಳ ಅನುದಾನ ಹಾಗೂ ಅಮೃತ ಮಹೋತ್ಸವ ಯೋಜನೆಯಲ್ಲಿ, 1ಬಿಎಚ್‌ಕೆ ಫ್ಲ್ಯಾಟ್ ಖರೀದಿಸಲು 5 ಲಕ್ಷ ರೂ. ಗಳ ಸಹಾಯಧನ ನೀಡಲು 88.25 ಕೋಟಿ ಮೀಸಲಿರಿಸಲಾಗಿದೆ. ಅರ್ಹ ಫಲಾನುಭವಿಗಳಿಗೆ 6.ಕೋಟಿ ರೂ. ವೆಚ್ಚದಲ್ಲಿ ಎಲೆಕ್ಟ್ರಿಕಲ್ ದ್ವಿಚಕ್ರ ವಾಹನವನ್ನು ಉಚಿತವಾಗಿ ವಿತರಿಸಲು ಕ್ರಮ.



ಜೈವಿಕ ಅನಿಲ, ಗೊಬ್ಬರ ತಯಾರಿಕೆ ಗುರಿ

ಈಗಾಗಲೇ ಸಾರ್ವಜನಿಕರ ಸಹಭಾಗಿತ್ವದೊಂದಿಗೆ ಸ್ಥಾಪಿಸಲಾದ ಕೋರಮಂಗಲ ಹಾಗೂ ಎಚ್‌ಎಸ್‌ಆರ್ ಬಡಾವಣೆಯಲ್ಲಿ ತ್ಯಾಜ್ಯ ವರ್ಗಾವಣೆ ಕೇಂದ್ರಗಳಲ್ಲಿ ಜೈವಿಕ ಅನಿಲ ಹಾಗೂ ಗೊಬ್ಬರ ತಯಾರಿಕೆಗೆ ಕ್ರಮ ವಹಿಸಲಾಗುವುದು. ಪಾಲಿಕೆ ವ್ಯಾಪ್ತಿಯಲ್ಲಿ ವಾರ್ಡ್‌ಗಳಿಗೆ ಒಂದು ತ್ಯಾಜ್ಯ ನಿರ್ವಹಣೆ ಕೇಂದ್ರ ಸ್ಥಾಪಿಸುವ ಗುರಿ ಹೊಂದಿದೆ.



ಬೀದಿನಾಯಿ ನಿರ್ವಹಣೆಗೆ ಕ್ರಮ

500 ಬೀದಿ ನಾಯಿಗಳ ಸಾಮರ್ಥ್ಯವಿರುವ ಆಶ್ರಯ ತಾಣ ನಿರ್ಮಾಣ ಮಾಡಲು ಕ್ರಮ. ಪಾಲಿಕೆ ವ್ಯಾಪ್ತಿಯಲ್ಲಿ ಬೀಡಾಡಿ ದನಗಳ ನಿಯಂತ್ರಣಕ್ಕೆ ದನದ ದೊಡ್ಡಿ ನಿರ್ಮಾಣ. ಪಾಲಿಕೆ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಲ್ಲಿ ಮೃತಪಡುವ ಸಣ್ಣ ಪ್ರಾಣಿ ಪಕ್ಷಿಗಳ, ಜಾನುವಾರುಗಳ ದೇಹವನ್ನು ವಿಲೇವಾರಿ ಮಾಡಲು ಸಂಚಾರಿ ಚಿತಾಗಾರ ಪ್ರಾರಂಭಿಸಲಾಗುತ್ತದೆ.

ಹಸಿರೀಕರಣಕ್ಕೆ ಒತ್ತು

ಪಾಲಿಕೆಯ ವ್ಯಾಪ್ತಿಯಲ್ಲಿ ವೈವಿಧ್ಯಮಯ 12,000 ಸಸಿಗಳನ್ನು ರಸ್ತೆ ಬದಿಗಳಲ್ಲಿ, ಕೆರೆ ಪ್ರದೇಶದಲ್ಲಿ, ಉದ್ಯಾನವನಗಳಲ್ಲಿ, ಹಾಗೂ ಶಾಲಾ-ಕಾಲೇಜು ಆವರಣ ಮತ್ತು ಖಾಲಿ ಜಾಗಗಳಲ್ಲಿ,



ನೆಟ್ಟು ಪೋಷಣೆ ಮಾಡಲು ಕ್ರಮ. ಬಿಎಂಆರ್‌ಸಿಎಲ್ ಹಾಗೂ ಕೆ-ಆರ್‌ಐಡಿಇ ಸಹಯೋಗದೊಂದಿಗೆ 25 ಸಾವಿರ ವಿವಿಧ ಜಾತಿಯ ಸಸಿಗಳನ್ನು ನೆಟ್ಟು ಪೋಷಣೆ ಮಾಡಲು ಉದ್ದೇಶಿಸಲಾಗಿದೆ. ಸ್ಪಾಂಜ್ ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸಲು 2 ಕೋಟಿ ನೀಡಲಾಗಿದೆ. ಉದ್ಯಾನ ವನಗಳಲ್ಲಿ 200 ಇಂಗು ಗುಂಡಿಗಳನ್ನು ಸಿಎಸ್‌ಆರ್ ಅಡಿ ನಿರ್ಮಿಸಲು ಕ್ರಮ.

ಕೆರೆ ರಕ್ಷಣೆಗೆ ವಿನೂತನ ಪ್ರಯತ್ನ

ಶುದ್ಧೀಕರಣ ಸೇರಿದಂತೆ ಕೆರೆಗಳ ಅಭಿವೃದಿಗೆ ಒತ್ತು ನೀಡಲಾಗಿದ್ದು, ಪ್ರವಾಸೋದ್ಯಮವನ್ನು ಉತ್ತೇಜಿಸುವ ಉದ್ದೇಶದಿಂದ ಪ್ರಯೋಗಿಕವಾಗಿ ಬೇಗೂರು ಮತ್ತು ಮಡಿವಾಳ ಕೆರೆಗಳಲ್ಲಿ ಪಿಪಿಪಿ ಮಾದರಿಯಲ್ಲಿ ಬೋಟಿಂಗ್ ವ್ಯವಸ್ಥೆ ಕಲ್ಪಿಸಲು ಯೋಜನೆಯನ್ನು ರೂಪಿಸಲಾಗಿದೆ. ಕೆರೆಗಳಲ್ಲಿ ಉನ್ನತ ಪರಿಸರವನ್ನು ಸೃಷ್ಟಿಸಲು ನಡಿಗೆದಾರರು ಮತ್ತು ಸಾರ್ವಜನಿಕರ ಸಹಯೋಗದೊಂದಿಗೆ ಕೆರೆಗಳ ಮಿತ್ರ ಎಂಬ ಶೀರ್ಷಿಕೆಯಡಿ ನೂತನ ಪರಿಕಲ್ಪನೆಯನ್ನು ಪರಿಚಯಿಸಲಾಗುತ್ತದೆ.



ಅಭಿವೃದ್ಧಿಗೆ ವಿಶೇಷ ಅನುದಾನ

ಪಾಲಿಕೆ ವ್ಯಾಪ್ತಿಯ 72 ವಾರ್ಡ್‌ಗಳಿಗೆ ತಲಾ 2.25 ಕೋಟಿಯಂತೆ ಒಟ್ಟು 162 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ. 16ನೇ ಹಣಕಾಸು ಆಯೋಗದ ಅಡಿಯಲ್ಲಿ ಬರಲಿರುವ 128.29 ಕೋಟಿ ರೂ.ಗಳನ್ನು ಮೂಲಭೂತ ಸೌಕರ್ಯಗಳಿಗಾಗಿ ಬಳಸಿಕೊಳ್ಳಲು ನಿರ್ಧರಿಸಲಾಗಿದೆ.



ದಕ್ಷಿಣ ಪಾಲಿಕೆ ಬಜೆಟ್ ಹೈಲೈಟ್ಸ್

- 5 ಕೋಟಿ ರೂ. ವೆಚ್ಚದಲ್ಲಿ ಉಚಿತ ಲ್ಯಾಪ್‌ಟಾಪ್
- ಸ್ವಾವಲಂಬಿ ಯೋಜನೆಗೆ 12 ಕೋಟಿ ರೂ.
- ಪೌರ ಕಾರ್ಮಿಕರ ಮಕ್ಕಳ ವಿವಾಹಕ್ಕೆ 2 ಕೋಟಿ ರೂ.
- ಔಷಧಿ ಗುಣವಿರುವ ವೃಕ್ಷಗಳಿಗೆ ಆದ್ಯತೆ
- ಪ್ರವಾಹ ಪರಿಸ್ಥಿತಿ ಎದುರಿಸಲು 5 ಕೋಟಿ ರೂ
- ನಗರದ ಸೌಂದರ್ಯ ಹೆಚ್ಚಿಸಲು ಪ್ರಮುಖ ವೃತ್ತಗಳಲ್ಲಿ ನೀರಿನ ಕಾರಂಜಿ ನಿರ್ಮಾಣ
- ಆರ್ಟೀರಿಯಲ್, ಸಬ್ ಆರ್ಟೀರಿಯಲ್ ಮತ್ತು ವಾರ್ಡ್ ಮೇಲ್ದರ್ಜೆಗೆ 433 ಕೋಟಿ ರೂ.
- ಹೊರವರ್ತುಲ ರಸ್ತೆ ಅಭಿವೃದ್ಧಿಗೆ 20 ಕೋಟಿ, ಬೇಗೂರು ರಸ್ತೆ ಅಗಲೀಕರಣಕ್ಕೆ 40 ಕೋಟಿ



ಇತರ ಆದಾಯಗಳ ನಿರೀಕ್ಷೆ

- ನಕ್ಷೆ ಮಂಜೂರಾತಿ-ಸ್ವಾಧೀನಾನುಭವ ಪ್ರಮಾಣ ಪತ್ರಗಳಿಂದ 382 ಕೋಟಿ ರೂ.
- ಎಫ್‌ಎಆರ್ ನೀತಿಯಿಂದ 360 ಕೋಟಿ ರೂ.
- ಸಿಂಗಲ್ ಪ್ಲಾಟ್ ಅಪ್ರೂವಲ್ ವ್ಯವಸ್ಥೆಯಿಂದ 175 ಕೋಟಿ ರೂ.

ಗೊರಗುಂಟೆಪಾಳ್ಯ ಸಂಚಾರ ದಟ್ಟಣೆ ನಿವಾರಣೆಗೆ ಕ್ರಮ

• **ಬೆಂಗಳೂರು:** ನಗರದ ಪ್ರಮುಖ ಸಂಚಾರ ಕೇಂದ್ರ ವಾದ ಗೊರಗುಂಟೆಪಾಳ್ಯದ ಟ್ರಾಫಿಕ್ ಸಮಸ್ಯೆ ನಿವಾರಿಸಲು ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಬಜೆಟ್‌ನಲ್ಲಿ ವಿಶೇಷ ಒತ್ತು ನೀಡಿದೆ.

ಟ್ರಾನ್ಸಿಟ್-ಓರಿಯೆಂಟೆಡ್ ಡೆವಲಪ್‌ಮೆಂಟ್ ಆಧಾರಿತವಾಗಿ ವಿಶೇಷ ಯೋಜನೆಗಳನ್ನು ಕೈಗೊಳ್ಳಲಾಗುವುದು. ತುಮಕೂರು ರಸ್ತೆಯ ಪ್ರಮುಖ ಜಂಕ್ಷನ್ ಆಗಿರುವ ಗೊರಗುಂಟೆಪಾಳ್ಯ ಪ್ರದೇಶದಲ್ಲಿ ಭಾರೀ ವಾಹನ ಸಂಚಾರದಿಂದ ದಿನ ನಿತ್ಯ ಟ್ರಾಫಿಕ್ ದಟ್ಟಣೆ ಉಂಟಾಗುತ್ತಿದೆ. ಇದರ ಪರಿಹಾರವಾಗಿ ಗೊರಗುಂಟೆಪಾಳ್ಯ ಮೆಟ್ರೋ ನಿಲ್ದಾಣದ ಸುತ್ತಮುತ್ತ ಪಾದಚಾರಿಗಳಿಗೆ ಅನುಕೂಲಕರ ಪಾದಚಾರಿ ಮಾರ್ಗಗಳು, ಫೀಡರ್ ಬಸ್ ಸೇವೆಗಳು, ಪಾರ್ಕಿಂಗ್ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಹಾಗೂ ವಾಹನ ಸವಾರರ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ರಸ್ತೆ ಅಗಲೀಕರಣ ಉದ್ದೇಶಕ್ಕಾಗಿ 2 ಕೋಟಿ ಅನುದಾನ ನೀಡಲಾಗುವುದೆಂದು ಶನಿವಾರ ಮಂಡಿಸಿರುವ ಬಜೆಟ್‌ನಲ್ಲಿ ತಿಳಿಸಲಾಗಿದೆ.



ಈ ಸಂಬಂಧ ಕೆಲಸವನ್ನು ತ್ವರಿತವಾಗಿ ಮುಗಿಸಲು ಕ್ರಮವಹಿಸಲಾಗುವುದು. ಏಪ್ರಿಲ್ 1ರಿಂದ ಸ್ಥಳದ ತೆರವು ಕಾರ್ಯಾಚರಣೆ ಆರಂಭಿಸಿ, ಸಂಬಂಧಿಸಿದ ಕಾಮಗಾರಿ ಕೈಗೊಳ್ಳಲಾಗುವುದು ಎಂದು ಪಶ್ಚಿಮ ನಗರ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

> ತುಮಕೂರು ರಸ್ತೆ ಹಾಗೂ ಪೈಪ್‌ಲೈನ್ ರಸ್ತೆಯ ಸಂಚಾರ ದಟ್ಟಣೆ ಕಡಿಮೆ ಮಾಡಲು ಗೊರಗುಂಟೆಪಾಳ್ಯದ ಗೋದ್ರೇಜ್ ಆಸ್ತಿಯ ಬಳಿ 6 ಮೀಟರ್ ರಸ್ತೆ ಅಗಲೀಕರಣಕ್ಕೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಎ.1ರಿಂದ ತೆರವು ಕಾರ್ಯಾಚರಣೆ ನಡೆಸಿ ಕಾಮಗಾರಿ ಆರಂಭಿಸಲಾಗುವುದು. ಇದರಿಂದ ಹೊರವರ್ತುಲ ರಸ್ತೆಯಿಂದ ಬರುವ ವಾಹನಗಳಿಗೆ ಸಂಚಾರ ಸುಗಮವಾಗಲಿದೆ. ಕನಿಷ್ಠ 30 ಸೆಕೆಂಡ್‌ಗಳ ವೇಟಿಂಗ್ ಪಿರಿಯಡ್ ಕಡಿಮೆಯಾಗಲಿದೆ ಎಂದು ಅಂದಾಜಿಸಲಾಗಿದೆ.
> ■ ಕೆ.ವಿ.ರಾಜೇಂದ್ರ, ಪಶ್ಚಿಮ ಪಾಲಿಕೆ ಆಯುಕ್ತ

ಕಿರುಸುದ್ದಿ

ಐಐಎಂ 51ನೇ ಘಟಿಕೋತ್ಸವ: ಪದವಿ ಪ್ರದಾನ



• **ಬೆಂಗಳೂರು:** ಐಐಎಂ ಬೆಂಗಳೂರಿನ 51ನೇ ಘಟಿಕೋತ್ಸವದಲ್ಲಿ, ಒಂಬತ್ತು ಚಿನ್ನದ ಪದಕಗಳೊಂದಿಗೆ ವಿವಿಧ ಕೋರ್ಸ್‌ಗಳ 785 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಮುಖ್ಯ ಅತಿಥಿಯಾಗಿದ್ದ ಎಚ್‌ಡಿಎಫ್‌ಸಿ ಲೈಫ್‌ನ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವಿಭಾ ಪಡಲ್ಕರ್ ಪದವಿ ಪ್ರದಾನ ಮಾಡಿ ಮಾತನಾಡಿ, ನೀವು ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ವ್ಯಾಪಾರ ಮಾರುಕಟ್ಟೆ ಪ್ರವೇಶಿಸಿದಾಗ, ನಿರಂತರವಾದ ಯಶಸ್ಸು ಸ್ಥಿರವಾದ ಆಯ್ಕೆಗಳಲ್ಲಿದೆ ಎಂಬುದನ್ನು ನೆನಪಿಡಿ. ದೀರ್ಘಾವಧಿಯಾದ ಮೌಲ್ಯ ಸೃಷ್ಟಿಯೊಂದಿಗೆ ಅಲ್ಪಾವಧಿಯ ಕಾರ್ಯಕ್ಷಮತೆಯನ್ನು ಸಮತೋಲನಗೊಳಿಸುವುದೇ ನಿಜವಾದ ನಾಯಕತ್ವ ಎಂದು ಹೇಳಿದರು. ಮಾನಸಿ ಅಂಜು ಮರ್ತಿಯಾ, ಧ್ರುವ್ ಜಾಯೆನ್ ಮೆಹ್ತಾ, ಮಯೂರ್ ದತ್ತಾತ್ರೇಯ ಖಿಲೆ, ಭರತ್ ಮುಂದ್ರಾ, ಅಯ್ಯಾ ಶಾಬಾ ಪಿ.ಪಿ., ರಾಜಸಿಲ್ಪಿ ಎಸ್.ಪಿ. ಲಕ್ಷ್ಮಿ ಆರ್., ಬಿಸ್ವರಂಜನ್ ಮಿಶ್ರಾ, ಅನಿರುದ್ಧ್, ದಿವ್ಯಾ ದ್ವಿವೇದಿ ವಿವಿಧ ವಿಭಾಗಗಳಲ್ಲಿನ ಶೈಕ್ಷಣಿಕ ಸಾಧನೆಗಾಗಿ ಚಿನ್ನದ ಪದಕಗಳನ್ನು ಪಡೆದುಕೊಂಡರು.

ಬಿಜೆಪಿ ಯುವ ಮುಖಂಡ ಡಾ. ನಿರಂತರ ಗಣೇಶ್
ಎಲ್ಲರಿಗೂ ಸಮಾನ ಆರೋಗ್ಯಕ್ಕೆ ಆದ್ಯತೆ



• **ಬೆಂಗಳೂರು:** ಆರೋಗ್ಯವಂತ ಸಮಾಜ ಇದ್ದರೆ ದೇಶದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ. ಎಲ್ಲರಿಗೂ ಸಮಾನ ಆರೋಗ್ಯ ಒದಗಿಸುವುದು ನಮ್ಮ ಆದ್ಯತೆ. ಆರೋಗ್ಯವಂತ ನಾಗರೀಕರು ದೇಶದ ಅಭಿವೃದ್ಧಿಗೆ ಬುನಾದಿ ಎಂದು ಬಿಜೆಪಿ ಯುವ ಮುಖಂಡ ಡಾ. ನಿರಂತರ ಗಣೇಶ್ ಹೇಳಿದರು.

ಹೆಬ್ಬಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕ್ಯಾನ್ಸ್ ಸಂಸ್ಥೆ ವತಿಯಿಂದ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿ, ಕೋವಿಡ್ ನಂತರದಲ್ಲಿ ವಿಧಾನಸಭಾ ಕ್ಷೇತ್ರ ವಾರು ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗುತ್ತಿದೆ. ಮುಂದಿನ ದಿನದಲ್ಲಿ ವಾರ್ಡ್ ಮಟ್ಟದಲ್ಲಿ ತಿಂಗಳಿಗೊಮ್ಮೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳುವ ಮೂಲಕ ಆರ್ಥಿಕವಾಗಿ ದುರ್ಬಲರಾದವರಿಗೆ ಉತ್ತಮ ಆರೋಗ್ಯ ಸೇವೆ ಕಲ್ಪಿಸುವ ಉದ್ದೇಶ ಹೊಂದಲಾಗಿದೆ ಎಂದರು.

ಮಧುಮೇಹ, ರಕ್ತದೊತ್ತಡ, ಹೃದಯ ತಪಾಸಣೆ, ಎಲುಬು ಮತ್ತು ಕೀಲು ಪರೀಕ್ಷೆ, ಕಣ್ಣಿನ ತಪಾಸಣೆ ನಡೆಸಲಾಗುತ್ತಿದೆ. ಮಹಿಳೆಯರು, ಮಕ್ಕಳು ಮತ್ತು ಹಿರಿಯ ನಾಗರೀಕರಿಗಾಗಿ ವಿಶೇಷ ತಪಾಸಣೆ ನಡೆಸಿ ಉಚಿತವಾಗಿ ಚಿಕಿತ್ಸೆ ಸಹ ನೀಡಲಾಗುತ್ತಿದೆ. ಗಂಭೀರ ಕಾಯಿಲೆಗಳನ್ನು ಆರಂಭದಲ್ಲೇ ಪತ್ತೆಹಚ್ಚಿ ಚಿಕಿತ್ಸೆ ನೀಡುವುದಕ್ಕೆ ಈ ಶಿಬಿರ ನೆರವಾಗಿದೆ. ಸಾರ್ವಜನಿಕರಲ್ಲಿ ಆರೋಗ್ಯದ ಜಾಗೃತಿ ಮೂಡಿಸುವುದರ ಜತೆಗೆ ಉಚಿತ ಆರೋಗ್ಯ ಸೇವೆ ನೀಡುವ ಸಲುವಾಗಿ ನಗರದ ಹಲವೆಡೆ ಉಚಿತ ಆರೋಗ್ಯ ತಪಾಸಣೆ ಶಿಬಿರಗಳನ್ನು ನಿರಂತರವಾಗಿ ಹಮ್ಮಿಕೊಂಡು ಬರಲಾಗುತ್ತಿದೆಂದು ಹೇಳಿದರು.

ಆಯುಷ್ಮಾನ್ ಭಾರತ್ ವಿಶ್ವದ ಅತಿದೊಡ್ಡ ಯೋಜನೆ

ಇತ್ತೀಚಿನ ವರ್ಷಗಳಲ್ಲಿ ಭಾರತೀಯ ವೈದ್ಯಕೀಯ ಕ್ಷೇತ್ರದಲ್ಲಿ ಗಮನಾರ್ಹ ಬೆಳವಣಿಗೆಯಾಗಿದೆ. ಭಾರತ ಸರ್ಕಾರ ಕೂಡ ಆರೋಗ್ಯ ಕ್ಷೇತ್ರಕ್ಕೆ ವಿಶೇಷ ಒತ್ತು ಕೊಟ್ಟಿದೆ. ಈ ಸಾಲಿನ ಬಜೆಟ್ ನಲ್ಲಿ 1 ಲಕ್ಷ ಕೋಟಿ ರೂ. ಅಧಿಕ ಹಣವನ್ನು ಆರೋಗ್ಯ ಕ್ಷೇತ್ರಕ್ಕೆ ಮೀಸಲಿರಿಸಲಾಗಿದೆ. ಆರೋಗ್ಯ ರಕ್ಷಣೆಗಾಗಿ ಸರ್ಕಾರದ ವೆಚ್ಚವು ವರ್ಷದಿಂದ ವರ್ಷಕ್ಕೆ ಶೇ.6.27ರಷ್ಟು ಹೆಚ್ಚಾಗಿದೆ. ಆರ್ಥಿಕವಾಗಿ ದುರ್ಬಲ ಕುಟುಂಬಗಳಿಗೆ ವಾರ್ಷಿಕ ರೂ.5ಲಕ್ಷದವರೆಗೆ ನಗದು ರಹಿತ ಚಿಕಿತ್ಸೆ ಒದಗಿಸುವ ಆಯುಷ್ಮಾನ್ ಭಾರತ್ ಯೋಜನೆ ವಿಶ್ವದ ಅತಿದೊಡ್ಡ ಸಾರ್ವಜನಿಕ ಆರೋಗ್ಯ ವಿಮಾ ಯೋಜನೆಯಾಗಿದೆ ಎಂದು ಹೇಳಿದರು.

ಸಿಲಿಂಡರ್ ತುಂಬಿದ ಲಾರಿ ಪಲ್ಟಿ: ತಪ್ಪಿದ ಅನಾಹುತ

• **ಬೆಂಗಳೂರು:** ನಂದಿನಿ ಲೇಔಟ್‌ನಲ್ಲಿ ಶನಿವಾರ ಭೀಕರ ರಸ್ತೆ ಅಪಘಾತವೊಂದು ಸಂಭವಿಸಿದೆ. ಗೃಹಬಳಕೆಯ ಗ್ಯಾಸ್ ಸಿಲಿಂಡರ್ ತುಂಬಿಕೊಂಡು ಹೋಗುತ್ತಿದ್ದ ಲಾರಿಯೊಂದು ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿದ್ದು, ರಸ್ತೆಯಲ್ಲಿದ್ದ ಕಾರಿಗೆ ಡಿಕ್ಕಿ ಹೊಡೆದಿದೆ. ಅದೃಷ್ಟವಶಾತ್ ಸಿಲಿಂಡರ್‌ಗಳು ಸ್ಫೋಟಗೊಳ್ಳದ ಕಾರಣ ದೊಡ್ಡ ಮಟ್ಟದ ದುರಂತವೊಂದು ತಪ್ಪಿದಂತಾಗಿದೆ.

ನೂರಾರು ಗ್ಯಾಸ್ ಸಿಲಿಂಡರ್‌ಗಳನ್ನು ಹೊತ್ತು ಸಾಗುತ್ತಿದ್ದ ಲಾರಿ, ನಂದಿನಿ ಲೇಔಟ್ ವ್ಯಾಪ್ತಿಯಲ್ಲಿ ಚಲಿಸುತ್ತಿದ್ದಾಗ ಹಠಾತ್ ಚಾಲಕನ ನಿಯಂತ್ರಣ ತಪ್ಪಿದೆ. ಈ ವೇಳೆ ರಸ್ತೆಯಲ್ಲಿದ್ದ ಕಾರಿಗೆ ಡಿಕ್ಕಿ ಹೊಡೆದ ಲಾರಿ ಮಗುಚಿ ಬಿದ್ದಿದೆ. ಅಪಘಾತದ ರಭಸಕ್ಕೆ ಲಾರಿ ಚಾಲಕನಿಗೆ ತೀವ್ರ ಗಾಯಗಳಾಗಿದ್ದು, ತಕ್ಷಣವೇ ಸ್ಥಳೀಯರು ಆತನನ್ನು ಹತ್ತಿರದ ಆಸ್ಪತ್ರೆಗೆ ದಾಖಲಿಸಿದ್ದಾರೆ. ಲಾರಿಯಲ್ಲಿದ್ದ ಇತರ ಇಬ್ಬರು ಸಿಬ್ಬಂದಿ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.



ಲಾರಿ ಪಲ್ಟಿಯಾದ ಸುದ್ದಿ ತಿಳಿಯುತ್ತಿದ್ದಂತೆಯೇ ಸ್ಥಳದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಗ್ಯಾಸ್ ಸೋರಿಕೆಯಾಗಿ ಬೆಂಕಿ ಹೊತ್ತಿಕೊಳ್ಳುವ ಭೀತಿಯಿಂದ ಜನರು ಆತಂಕಗೊಂಡಿದ್ದರು. ತಕ್ಷಣವೇ ಕಾರ್ಯಪ್ರವೃತ್ತರಾದ ತುರ್ತು ಸೇವಾ ಸಿಬ್ಬಂದಿ ಮತ್ತು ಪೊಲೀಸರು, ಸಿಲಿಂಡರ್‌ಗಳಿಂದ ಅನಿಲ ಸೋರಿಕೆಯಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡರು. ಸಿಬ್ಬಂದಿಯ ಸಮಯೋಚಿತ ಹಸ್ತಕ್ಷೇಪದಿಂದಾಗಿ ಜನನಿಬಿಡ ಪ್ರದೇಶದಲ್ಲಿ ಸಂಭವಿಸಬಹುದಾಗಿದ್ದ ಭಾರಿ ಅನಾಹುತವೊಂದು ನಿಯಂತ್ರಣಕ್ಕೆ ಬಂದಿದೆ.

ಅಪಘಾತದ ದೃಶ್ಯಗಳು ಸಮೀಪದ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿವೆ. ರಾಜಾಜಿನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದ್ದು, ಪೊಲೀಸರು ಸಿಸಿಟಿವಿ ಫೂಟೇಜ್‌ಗಳನ್ನು ಆಧರಿಸಿ ತನಿಖೆ ನಡೆಸುತ್ತಿದ್ದಾರೆ. ಲಾರಿಯ ಬ್ರೇಕ್ ವೈಫಲ್ಯ ಅಥವಾ ಅತಿ ವೇಗ ಅಪಘಾತಕ್ಕೆ ಕಾರಣವೇ ಎಂಬ ಬಗ್ಗೆ ಪರಿಶೀಲನೆ ನಡೆಯುತ್ತಿದೆ.

ಕೌಶಲಾಭಿವೃದ್ಧಿಗೆ ಎಐ ಉಪಯುಕ್ತ

• **ಬೆಂಗಳೂರು:** ಕೃತಕ ಬುದ್ಧಿಮತ್ತೆ (ಎಐ) ಕೇವಲ ಸಾಧನವಾಗಿರದೆ ಮಾನವ ಕೌಶಲಾಭಿವೃದ್ಧಿಪಡಿಸಲು ಸಹಾಯಕವಾಗುವ ಶಕ್ತಿಯುತ ತಂತ್ರಜ್ಞಾನವಾಗಿದೆ. ಭವಿಷ್ಯದ ದೃಷ್ಟಿಯಿಂದ ಕೃತಕ ಬುದ್ಧಿಮತ್ತೆ ಕಲಿಕೆ ವಿದ್ಯಾರ್ಥಿಗಳಲ್ಲಿ ಹೊಸ ಅವಕಾಶವನ್ನು ಸೃಷ್ಟಿಸಲಿದೆ ಎಂದು ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮುಷ್ಕಾ ಚೌದರಿ ಅಭಿಪ್ರಾಯಪಟ್ಟರು.

ಬೆಂಗಳೂರು ವಿಶ್ವವಿದ್ಯಾಲಯ ಭಾರತ ಸರ್ಕಾರದ ಶಿಕ್ಷಣ ಸಚಿವಾಲಯ, ಕರ್ನಾಟಕ ಸರ್ಕಾರ ಉನ್ನತ ಶಿಕ್ಷಣ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ ಚೊಚ್ಚಲ ಏಜೆಂಟಿಕ್ ಎಐ ಸಕ್ಷಮ್ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ಬದಲಾಗುತ್ತಿರುವ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಎಐ ಪರಿಕರಗಳು, ಹೊಸ ತಂತ್ರಜ್ಞಾನವನ್ನು ಅರ್ಥಮಾಡಿಕೊಳ್ಳುವುದು ಹಾಗೂ ಅಳವಡಿಸಿಕೊಳ್ಳಬಹುದು ಅಗತ್ಯವಾಗಿದೆ. ಎಐ ವಿಸ್ತಾರವಾಗುತ್ತಿದೆ. ವಿದ್ಯಾರ್ಥಿಗಳು ಆತಂಕಕ್ಕೊಳಗಾಗದೆ ಅದನ್ನು ಸಮರ್ಪಕ ಮತ್ತು ಜೋಡಣೆಯಿಂದ ಬಳಸಿಕೊಂಡು ಭವಿಷ್ಯ ಸೃಷ್ಟಿಸಬಹುದು ಎಂದು ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿ ಡಾ. ಜಯಕರ ಎಸ್.ಎಂ ಮಾತನಾಡಿ, ವಿದ್ಯಾರ್ಥಿಗಳು ಮತ್ತು ಯುವ ಸಮೂಹ ಈ ದೇಶದ ಶಕ್ತಿ. ಕೇವಲ ಉದ್ಯೋಗ ಹರಸುವವರಾಗದೆ ಉದ್ಯೋಗ ಸೃಷ್ಟಿಸುವ ದೃಷ್ಟಿಯಲ್ಲಿ ವಿದ್ಯಾರ್ಥಿಗಳು ಚಿಂತಿಸಬೇಕು. ಎಐ ಮೂಲಕ ಹೊಸ ಅವಕಾಶಗಳು ಸೃಷ್ಟಿಯಾಗಲಿದ್ದು, ಅದಕ್ಕೆ ತಕ್ಕ ಕೌಶಲ್ಯ ಮತ್ತು ಕಲಿಕೆಯನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳಬೇಕು ಎಂದರು.



ಚೊಚ್ಚಲ ಏಜೆಂಟಿಕ್ ಎಐ ಸಕ್ಷಮ್ ಕಾರ್ಯಾಗಾರ ಉದ್ಘಾಟನೆ

ಕಾರ್ಯಕ್ರಮದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಕುಲಸಚಿವರು ಕೆ.ಟಿ.ಶಾಂತಲಾ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಕೆ.ಜಿ.ಚಂದ್ರಶೇಖರ, ಶಿಕ್ಷಣ ಸಚಿವಾಲಯದ ವಿಭಾಗಾಧಿಕಾರಿ ಡಾ.ಅಮಿತ್ ಸಿಂಗ್ ಸೇರಿದಂತೆ ಇತರರಿದ್ದರು.

ವೈದ್ಯರಲ್ಲಿ ಮಾನವೀಯತೆ ಇರಲಿ

• **ಕೆಂಗೇರಿ:** ವೈದ್ಯಕೀಯ ಕ್ಷೇತ್ರದಲ್ಲಿ ಮಾನವೀಯ ಮೌಲ್ಯವನ್ನು ಅಳವಡಿಸಿಕೊಂಡು ರೋಗಿಗಳ ಅತ್ಯುತ್ತಮ ಸೇವೆಯಲ್ಲಿ ತೊಡಗಿರುವ ಗ್ಲೆನೀಗಲ್ಸ್ ಬಿಜಿಎಸ್ ಆಸ್ಪತ್ರೆ ವೈದ್ಯರ ಕಾರ್ಯ ಶ್ಲಾಘನೀಯ ಎಂದು ಗ್ಲೆನೀಗಲ್ಸ್ ಬಿಜಿಎಸ್ ಆಸ್ಪತ್ರೆ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ರವಿ ಬಗಲಿ ಹೇಳಿದರು.

ಉತ್ತರಹಳ್ಳಿ ಕೆಂಗೇರಿ ಮುಖ್ಯ ರಸ್ತೆಯಲ್ಲಿರುವ ಗ್ಲೆನೀಗಲ್ಸ್ ಬಿಜಿಎಸ್ ಆಸ್ಪತ್ರೆಯಲ್ಲಿ ಮೂತ್ರಪಿಂಡ ವೈಫಲ್ಯದಿಂದ ಬಳಲುತ್ತಿದ್ದ ವ್ಯಕ್ತಿಗೆ ಜೀವದಾನ ಸಿಕ್ಕಿದೆ. ಮಹದೇವಪುರ ಆಸ್ಪತ್ರೆಯಲ್ಲಿ ಮೆದುಳು ನಿಷ್ಕ್ರಿಯಗೊಂಡಿದ್ದ ವ್ಯಕ್ತಿ ಸಾವಿಗೀಡಾಗಿದ್ದು ಅವರ ಕಿಡ್ನಿಯನ್ನು ಕುಟುಂಬದವರು ದಾನ ಮಾಡಿದ ಹಿನ್ನೆಲೆಯಲ್ಲಿ ಮೂತ್ರ ಪಿಂಡವನ್ನು ಪ್ರತಿರೋಪಣ ಮಾಡುವ ಮೂಲಕ ಗ್ಲೆನೀಗಲ್ಸ್ ಬಿಜಿಎಸ್ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿದ್ದಾರೆ ಎಂದು ತಿಳಿಸಿದರು.

ಬಿಎಂಆರ್‌ಸಿಎಲ್ ಸಹಕಾರ ಮಹತ್ವದ್ದು: ಕೆ.ಆರ್.ಪುರ ಮೆಟ್ರೊ ರೈಲು ನಿಲ್ದಾಣದಿಂದ ಕೆಂಗೇರಿ ಬಸ್ ಟರ್ಮಿನಲ್ ಮೆಟ್ರೋ ರೈಲು ನಿಲ್ದಾಣಕ್ಕೆ ಅಂಗಾಂಗವನ್ನು ಸರಿಯಾದ ಸಮಯಕ್ಕೆ ಸುರಕ್ಷಿತವಾಗಿ ತರಲು ವಿಶೇಷ ಸಾರಿಗೆ ವ್ಯವಸ್ಥೆ ಮಾಡುವಲ್ಲಿ ಮಹತ್ವದ ಪಾತ್ರ ವಹಿಸಿದ ಬಿಎಂಆರ್‌ಸಿ ಸಂಸ್ಥೆಗೆ ಕೃತಜ್ಞತೆ ತಿಳಿಸಿದರು.



ಆರೋಗ್ಯ ಸಂಸ್ಥೆಗಳು ಮತ್ತು ಸಾರ್ವಜನಿಕ ಮೂಲಸೌಕರ್ಯಗಳ ನಡುವೆ ಇರುವ ಸಾಮರಸ್ಯ ಜೀವಗಳನ್ನು ಉಳಿಸಲು ಎಷ್ಟು ಅಗತ್ಯವೆಂಬುದನ್ನು ಇದು ತೋರಿಸುತ್ತದೆ. ಜತೆಗೆ ಒಂದು ಜೀವಕ್ಕೆ ಮತ್ತೊಮ್ಮೆ ಬದುಕುವ ಅವಕಾಶ ನೀಡಿದ ದಾನಿಯ ಕುಟುಂಬದ ಮಹಾನ್ ನಿರ್ಧಾರಕ್ಕೆ ಅವರು ಕೃತಜ್ಞತೆ ಸಲ್ಲಿಸಿದರು.

ವೃದ್ಧೆಗೆ ಚಾಕುವಿನಿಂದ ಹಲ್ಲೆ: ನಾಲ್ವರ ಬಂಧನ

• **ಬೆಂಗಳೂರು:** ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ವೃದ್ಧೆಯ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿ ಯುವತಿಯನ್ನು ಅಪಹರಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಅಡುಗೋಡಿ ಪೊಲೀಸರು ನಾಲ್ವರು ಆರೋಪಿಯನ್ನು ಬಂಧಿಸಿದ್ದಾರೆ.



ಬಂಧಿತರನ್ನು ಮಣಿಕಿರಣ್, ಅಭಿಷೇಕ್, ಮನಿರಾಜ್ ಮತ್ತು ಮನಿವಣ್ಣನ್ ಎಂದು ಗುರುತಿಸಲಾಗಿದೆ.ಮಾ.25 ರಂದು ಮಾಗೇಶ್ವರಿ ಎಂಬುವರ ಮನೆಯಲ್ಲಿ ಈ ರಾದ್ಧಾಂತ ನಡೆದಿತ್ತು. ಆರೋಪಿ ಮಣಿಕಿರಣ್‌ಗೆ ಈಗಾಗಲೇ ಮದುವೆಯಾಗಿದ್ದರೂ, ಮಾಗೇಶ್ವರಿ ಅವರ ಮೊಮ್ಮಗಳು ಚಾರುಲತಾ ಎಂಬಾಕೆಯನ್ನು ಕರೆದುಕೊಂಡು ಹೋಗಿದ್ದ. ಆದರೆ, ಕೆಲವು ದಿನಗಳ ಹಿಂದೆ ಆತನನ್ನು ಬಿಟ್ಟು ಬಂದಿದ್ದ ಚಾರುಲತಾ, ತನ್ನ ಅಜ್ಜಿಯ ಜತೆ ವಾಸವಿದ್ದಳು.

ಇದರಿಂದ ಕೆರಳಿದ ಕಿರಣ್ ಮತ್ತು ಆತನ ಕುಟುಂಬಸ್ಥರು ಮಾ.25 ರಂದು ಮಾಗೇಶ್ವರಿ ಅವರ ಮನೆಗೆ ನುಗ್ಗಿ ಚಾರುಲತಾಳನ್ನು ಬಲವಂತವಾಗಿ ಅಪಹರಿಸಿದ್ದಾರೆ. ಇದನ್ನು ತಡೆಯಲು ಬಂದ ವೃದ್ಧೆ ಮಾಗೇಶ್ವರಿ ಅವರಿಗೆ ಚಾಕುವಿನಿಂದ ಇರಿದು ಗಾಯಗೊಳಿಸಿದ್ದರು.

ಸದ್ಯ ಸಂತ್ರಸ್ತೆ ಮಾಗೇಶ್ವರಿ ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿದ ಪೊಲೀಸರು ನಾಲ್ವರು ಆರೋಪಿಗಳನ್ನು ಜೈಲಿಗಟ್ಟಿದ್ದಾರೆ.

ಪಾಸ್ ಇಟ್ ಆನ್ ಆ್ಯಪ್ ಅನಾವರಣ

• **ಬೆಂಗಳೂರು:** ಒಬ್ಬರಿಗೆ ಬೇಡದ ವಸ್ತುವನ್ನು ಮತ್ಯಾರೋ ಬೇಕಾದವರಿಗೆ ತಲುಪಿಸುವುದು ಉತ್ತಮ ಅಭ್ಯಾಸ. ಆದರೆ, ಇಂತಹ ಅಭ್ಯಾಸವನ್ನು ಸರಳಗೊಳಿಸಲು ಮತ್ತು ಪ್ರೋತ್ಸಾಹಿಸಲು ಹೊಸ ಆ್ಯಪ್ ಒಂದು ಅನಾವರಣಗೊಂಡಿದೆ.

ಬೆಂಗಳೂರು ಕ್ರಿಯೇಟಿವ್ ಸರ್ಕಲ್‌ನಲ್ಲಿ ಸಂಸ್ಥಾಪಕ ಬಿ.ಆರ್.ರಾಮಕೃಷ್ಣ (ರಾಮ್) ನೇತೃತ್ವದಲ್ಲಿ ಪಾಸ್ ಇಟ್ ಆನ್ ಎಂಬ ಮೊಬೈಲ್ ಆ್ಯಪ್‌ಅನ್ನು ಅನಾವರಣಗೊಳಿಸಲಾಯಿತು. ಕಲಾತ್ಮಕ ಅಭಿವ್ಯಕ್ತಿ, ಅರ್ಥಪೂರ್ಣ ಸಂವಾದ ಮತ್ತು ಸಂವಹನಾತ್ಮಕ ಅನುಭವಗಳಿಗೂ ವೇದಿಕೆಯಾಯಿತು. ಬಹಳ ವಿಭಿನ್ನ ರೀತಿಯಲ್ಲಿ ಪಾಸ್ ಇಟ್ ಆನ್ ಆ್ಯಪ್ ಅನ್ನು ಪರಿಚಯಿಸಲಾಯಿತು.

ಉದ್ಯಮಿ ರಾಮ್ ಅವರು ಮಾತನಾಡಿ, ಇದು ಕೊಂಡುಕೊಳ್ಳುವುದಕ್ಕಿಂತ ಹಂಚಿಕೊಳ್ಳುವುದು ಮುಖ್ಯ ಎಂಬ ಸಂಸ್ಕೃತಿಯನ್ನು ಉತ್ತೇಜಿಸುತ್ತದೆ. ಬಹುಮುಖ್ಯವಾಗಿ ಇದು ಪರಿಸರ ಸ್ನೇಹಿ ಕೆಲಸವೂ ಆಗಿದೆ. ಹೀಗೆ ಬೇಡದ ವಸ್ತುಗಳನ್ನು ತಲುಪಿಸುವುದರಿಂದ ತ್ಯಾಜ್ಯವೂ ಕಡಿಮೆಯಾಗುತ್ತದೆ. ಪರಿಸರದ ಮೇಲಿನ ಒತ್ತಡವೂ ಇಳಿಯುತ್ತದೆ. ಈ ಆ್ಯಪ್ ಆ್ಯಂಡರೆಡ್ ಮತ್ತು ಐಫೋನ್‌ನಲ್ಲೂ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ತಿಳಿಸಿದರು.



ಏನಿದು ಪಾಸ್ ಇಟ್ ಆನ್?

ಯುವ ಉದ್ಯಮಿ ಬಿ.ಆರ್. ರಾಮ್ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ, ಈ ಪಾಸ್ ಇಟ್ ಆನ್ ಮೊಬೈಲ್ ಆ್ಯಪ್ ಆರಂಭಿಸಿದ್ದಾರೆ. ನಮ್ಮಲ್ಲಿ ಅನೇಕರು ತಾವು ಬಳಕೆ ಮಾಡಿದ ವಸ್ತುವನ್ನು ಉಪಯೋಗಿಸಿ ಬೇಡವಾದ ನಂತರ ಬಿಸಾಡುವುದು ಅಥವಾ ಎಲ್ಲೋ ಮೂಲೆಗೆ ಎಸೆಯುವುದು ಮಾಡುತ್ತೇವೆ. ಹೀಗೆ ಬೇಡವೆಂದು ಮೂಲೆ ಸೇರುವ ವಸ್ತು ಮತ್ಯಾರಿಗೋ ಅಗತ್ಯವಿರುತ್ತದೆ ಮತ್ತು ಅವರಿಗೆ ಉಪಯುಕ್ತವಾಗುತ್ತದೆ. ಇಂತಹ ಬೇಡ ವಸ್ತುಗಳನ್ನು ಬೇಕಾದವರಿಗೆ ತಲುಪಿಸುವುದು ಎಂಬ ಆಲೋಚನೆಯಿಂದ ಜನ್ಮತಳೆದಿರುವುದೇ ಪಾಸ್ ಇಟ್ ಆನ್ ಇದು ಸಂಪೂರ್ಣ ಉಚಿತವಾಗಿ ನಡೆಯಲಿದೆ.

ಇಂದು ನಗರದಲ್ಲಿ...

- ಕರಗ ಉತ್ಸವದ ಅಂಗವಾಗಿ ಕೆಂಪೇಗೌಡ ವೃತ್ತದಲ್ಲಿನ ಅಣ್ಣಮ್ಮ ದೇವಸ್ಥಾನ ಬಳಿ ವಿಶೇಷ ಪೂಜೆ, ಬೆಳಗ್ಗೆ 10.00, ಸ್ಥಳ: ಕೆಂಪೇಗೌಡ ವೃತ್ತದಲ್ಲಿನ ಅಣ್ಣಮ್ಮ ದೇವಸ್ಥಾನ
- ಮರೆಯಲಾರದ ಮಹನೀಯರ ನುಡಿ ಗೌರವ, ಗೀತ ಗೌರವ, ಸ್ಥಳ: ಕಹಳೆ ಬಂಡೆ, ಬಸವನಗುಡಿ, ಬೆಳಗ್ಗೆ 10.00
- ಹಸಿರು ಸಿರಿ ಸಾಂಸ್ಕೃತಿಕ ಉತ್ಸವ, ಸ್ಥಳ: ನಯನ ಸಭಾಂಗಣ, ಸಮಯ: ಸಂಜೆ 4.30

ಸ್ವಂತ ಆದಾಯ ಹೆಚ್ಚಳ, ಅನುದಾನ ಬಳಕೆ | ಮುನ್ಸಿಪಲ್ ಬಾಂಡ್ ಮೂಲಕ ಆದಾಯ ಸಂಗ್ರಹ ಗುರಿ

ಪಶ್ಚಿಮ ಪಾಲಿಕೆ: ಸವಾಲಿನ ಬಜೆಟ್

• **ಬೆಂಗಳೂರು:** ಆದಾಯ ಕ್ರೋಢೀಕರಣದ ಸವಾಲಿನ ನಡುವೆಯೂ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ(ಜಿಬಿಎ) ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಅತೀ ದೊಡ್ಡ ಗಾತ್ರದ ಬಜೆಟ್ ಮಂಡನೆ ಮಾಡಲಾಗಿದೆ. 4732.73 ಕೋಟಿ ರೂ. ವೆಚ್ಚದ 2026-2027 ನೇ ಸಾಲಿನ ತನ್ನ ಆಯವ್ಯಯವನ್ನು ಶನಿವಾರ ಪ್ರಸ್ತುತ ಪಡಿಸಿದೆ. 4732.81 ಕೋಟಿ ರೂ. ಆದಾಯದ ನಿರೀಕ್ಷೆ ಇಟ್ಟಿರುವ ಪಾಲಿಕೆ 8.42 ಲಕ್ಷ ರೂ. ಉಳಿಕೆ ಬಜೆಟ್ ಮಂಡಿಸಿದೆ.

ಮಲ್ಲೇಶ್ವರದಲ್ಲಿರುವ ಜಲಮಂಡಳಿಯ ಸುವರ್ಣಭವನದಲ್ಲಿ ಪಾಲಿಕೆ ಆಯುಕ್ತ ಡಾ. ಕೆ.ವಿ. ರಾಜೇಂದ್ರ ಬಜೆಟ್ ಮಂಡನೆ ಮಾಡಿದ್ದು, ಸ್ವಂತ ಆದಾಯ ಹೆಚ್ಚಿಸುವುದು, ವಿವಿಧ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು ಹಾಗೂ ಮುನ್ಸಿಪಲ್ ಬಾಂಡ್ ಮೂಲಕ ಹೆಚ್ಚುವರಿ ಹಣ ಸಂಗ್ರಹಿಸುವ ಗುರಿಯನ್ನು ಹೊಂದಲಾಗಿದೆ ಎಂದು ಬಜೆಟ್‌ನಲ್ಲಿ ವಿವರಿಸಿದ್ದಾರೆ.

ಆದಾಯದ ನಿರೀಕ್ಷೆ
4732.81
ಕೋಟಿ ರೂ.

ವೆಚ್ಚ
4732.73
ಕೋಟಿ ರೂ.

ಉಳಿತಾಯ
8.42
ಲಕ್ಷ ರೂ.



ಮುನ್ಸಿಪಲ್ ಬಾಂಡ್ ಮತ್ತು ಬಿ ಟು ಎ ಖಾತಾ ಆದಾಯದ ಭರವಸೆ

ವಸತಿ ಪ್ರದೇಶ ಹೆಚ್ಚಿರುವ ಪಶ್ಚಿಮ ಪಾಲಿಕೆಯಲ್ಲಿ ಆದಾಯದ ಕ್ರೋಢೀಕರಣ ಸವಾಲಿನ ಕೆಲಸವಾಗಿದೆ. ಆದರೆ, ಅಚ್ಚರಿ ಎಂಬಂತೆ ಅತೀ ಹೆಚ್ಚಿನ ವೆಚ್ಚದ ಬಜೆಟ್ ಮಂಡಿಸಿರುವ ಪಾಲಿಕೆ ಮುನ್ಸಿಪಲ್ ಬಾಂಡ್ ಮತ್ತು ಬಿ ಯಿಂದ ಎ ಖಾತಾ ಪರಿವರ್ತನೆಯಿಂದ ಹೆಚ್ಚಿನ ಆದಾಯದ ನಿರೀಕ್ಷೆ ಇಟ್ಟುಕೊಂಡಿದೆ. 200 ಕೋಟಿ ರೂ. ಮುನ್ಸಿಪಲ್ ಬಾಂಡ್ ಹೊರಡಿಸಲಾಗುವುದು. ಇದರಿಂದ ಕೇಂದ್ರ ಸರ್ಕಾರದ 26 ಕೋಟಿ ರೂ. ಪ್ರೋತ್ಸಾಹ ಸಿಗಲಿದೆ. ಒಟ್ಟಾರೆ 226 ಕೋಟಿ ರೂ. ಆದಾಯದ ಗಳಿಸುವ ಗುರಿ ಹೊಂದಿದೆ. ಬಿ-ಖಾತಾದಿಂದ ಎ-ಖಾತಾಗೆ ಪರಿವರ್ತನೆ ಅಭಿಯಾನದಿಂದ 563 ಕೋಟಿ ರೂ. ಆದಾಯದ ನಿರೀಕ್ಷೆ ಇದೆ ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ. ಪಾಲಿಕೆ ವ್ಯಾಪ್ತಿಯ 2.5 ಲಕ್ಷ ರೂ. ಬಿ-ಖಾತೆ ಆಸ್ತಿಗಳಲ್ಲಿ ಮೊದಲ ಹಂತದಲ್ಲಿ 1.5 ಲಕ್ಷ ರೂ. ಆಸ್ತಿಯನ್ನು ಪರಿಗಣಿಸಿ, ಅದರಲ್ಲಿ 15,000 ರೂ. ಆಸ್ತಿಗಳನ್ನು ಎ-ಖಾತೆಗೆ ಪರಿವರ್ತಿಸುವ ಗುರಿ ಹೊಂದಲಾಗಿದೆ. ಇದರಿಂದ ಅಂದಾಜು ಕನಿಷ್ಠ 563 ಕೋಟಿ ರೂ. ವರೆಗೆ ಆದಾಯ ನಿರೀಕ್ಷಿಸಲಾಗಿದೆ ಎಂದು ಆಯುಕ್ತರು ಸಮರ್ಥಿಸಿಕೊಂಡಿದ್ದಾರೆ.

ಘನತ್ಯಾಜ್ಯ ನಿರ್ವಹಣೆಗೆ 300 ಕೋಟಿ ರೂ.

ತ್ಯಾಜ್ಯ ಸಂಗ್ರಹಣೆ ಮತ್ತು ವೈಜ್ಞಾನಿಕ ವಿಲೇವಾರಿಗೆ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತಕ್ಕೆ 300 ಕೋಟಿ ರೂ. ನೀಡಲಾಗಿದೆ. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ 10 ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ಸ್ಥಾಪಿಸಲು ಕ್ರಮ. ವೈಜ್ಞಾನಿಕ ಯಂತ್ರಗಳ ಖರೀದಿ, ಮತ್ತಿತರ ಕಾರ್ಯಕ್ಕೆ 25 ಕೋಟಿ ರೂ. ನೀಡಲಾಗಿದೆ.

ಪಾಲಿಕೆ ಬಜೆಟ್ 2026-2027

ಕೆರೆ ಅಭಿವೃದ್ಧಿಗೆ ಕಾಯಕಲ್ಪ

ಕೆರೆಗಳ ಅಭಿವೃದ್ಧಿಗೆ ಒಟ್ಟು 13.75 ಕೋಟಿ ರೂ. ಮೀಸಲಿರಿಸಿದ್ದು, ಇವುಗಳಲ್ಲಿ ಕೆರೆಗಳ ವಾರ್ಷಿಕ ನಿರ್ವಹಣೆಗೆ 7.50 ಕೋಟಿ, ಹಾಗೂ ತಂತಿ ಬೇಲಿ ನಿರ್ಮಿಸಲು 6.25 ಕೋಟಿ ರೂ. ಮೀಸಲಿಡಲಾಗಿದೆ. ಅಲ್ಲದೆ ಯಡಿಯೂರು ಹಾಗೂ ಚಿಕ್ಕಲ್ಲಸಂದ್ರ ಕೆರೆಯ ಸಮಗ್ರ ಅಭಿವೃದ್ಧಿಗೆ ಮೊದಲಹಂತದಲ್ಲಿ 5 ಕೋಟಿ ಮೀಸಲಿಡಲಾಗಿದೆ.

ಪಶುಪಾಲನಾ ಮಾದರಿ ವಾರ್ಡ್ ನಿರ್ಮಾಣ

500 ಬೀದಿ ನಾಯಿ ಸಾಮರ್ಥ್ಯದ ಆಶ್ರಯ ತಾಣ ನಿರ್ಮಾಣಕ್ಕೆ 2 ಕೋಟಿ, ಎಲ್ಲಾ ವಾರ್ಡ್‌ಗಳಲ್ಲಿ ಎಬಿಸಿ ಮತ್ತು ಲಸಿಕಾ ಕೇಂದ್ರ ತೆರೆಯಲು 1.12 ಕೋಟಿ ನೀಡಲಾಗಿದೆ. 20 ವಾರ್ಡ್‌ಗಳನ್ನು ಪಶುಪಾಲನಾ ಇಲಾಖೆಯ ಮಾದರಿ ವಾರ್ಡ್ ನಿರ್ಮಾಣಕ್ಕೆ ಯೋಜನೆ. ವಿಧಾನಸಭಾಕ್ಷೇತ್ರದಲ್ಲಿ ಕನಿಷ್ಠ ಒಂದು ಪಾರ್ಕ್ ಸಾಕು ಪ್ರಾಣಿ ಸ್ನೇಹಿ ಪಾರ್ಕ್ ಮಾಡಲು ಕ್ರಮ.

ಸಾರ್ವಜನಿಕ ಕಾಮಗಾರಿಗೆ ಒತ್ತು

226 ಕೋಟಿ ಮುನ್ಸಿಪಲ್ ಬಾಂಡ್ ನಿಂದ ಬರುವ ಆದಾಯದಲ್ಲಿ ವಿವಿಧ ಮೂಲಭೂತ ಸೌಕರ್ಯ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ. 667.74 ಕೋಟಿ ರೂ.ಗಳಲ್ಲಿ ವಿವಿಧ ರಸ್ತೆಗಳ ಅಭಿವೃದ್ಧಿ, ಟ್ರಾಫಿಕ್ ಸಮಸ್ಯೆ ನಿವಾರಣೆಗೆ ರಸ್ತೆ ಅಗಲೀಕರಣಕ್ಕೆ 8 ಕೋಟಿ, 175 ಜಂಕ್ಷನ್ ಸೌಂದರ್ಯೀಕರಣ, 500 ಕಿ.ಮೀ ಪಾದಚಾರಿ ಮಾರ್ಗ ಅಭಿವೃದ್ಧಿಗೆ 50 ಕೋಟಿ ನೀಡಲಾಗಿದೆ. 5 ಮೃಗಾಲಯ ಮತ್ತು 1 ಪ್ರಾಣಿ ಚಿತಾಗಾರದಲ್ಲಿ ಹಾಗೂ ಪಾಲಿಕೆ ಕಚೇರಿಗಳಲ್ಲಿ ರೂಫ್‌ಟಾಪ್ ಸೋಲಾರ್ ಅಳವಡಿಸಲು 2 ಕೋಟಿ ಮೀಸಲಿಡಲಾಗಿದೆ.

ಕೆಂಪೇಗೌಡ-ನಟ ರಾಜಕುಮಾರ್‌ಗೆ ಗೌರವ



ಡಾ.ರಾಜ್‌ಕುಮಾರ್ ಕಲಾಕ್ಷೇತ್ರದ ಸಮಗ್ರ ಅಭಿವೃದ್ಧಿಗೆ 5 ಕೋಟಿ, ಹಂಪಿನಗರ ವಾರ್ಡ್‌ನಲ್ಲಿ ಕೆಂಪೇಗೌಡ ಭವನ ನಿರ್ಮಾಣಕ್ಕೆ ಒಂದು ಕೋಟಿ ರೂ. ಅನುದಾನ ನೀಡಲಾಗಿದೆ. ಅಲ್ಲದೆ ಕೆಂಪೇಗೌಡ ಅಧ್ಯಯನ ಕೇಂದ್ರ ಮತ್ತು ಇನ್ನಿತರ ಅನುದಾನಿತ ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡಲು 10.50 ಕೋಟಿ ಮೀಸಲಿರಿಸಲಾಗಿದೆ.



ಕಲ್ಯಾಣ ಯೋಜನೆಗಳಿಗೆ ಅನುದಾನದ ಶಕ್ತಿ

ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ, ಪೌರಕಾರ್ಮಿಕರು, ಅಲ್ಪಸಂಖ್ಯಾತರು ಹಾಗೂ ವಿಶೇಷ ಚೇತನರಿಗೆ ಶಿಕ್ಷಣ, ಆರೋಗ್ಯ ಹಾಗೂ ಇತರೆ ಆರ್ಥಿಕ ನೆರವು ನೀಡಲು ಒಟ್ಟಾರೆ 334.99 ಕೋಟಿ ರೂ.ಮೀಸಲಿರಿಸಲಾಗಿದೆ. ಒಂಟಿ ಮನೆ ಯೋಜನೆಗೆ 5 ಲಕ್ಷ, ಸರ್ಕಾರದ ವಸತಿ ಸಮುಚ್ಚಯದಲ್ಲಿ ಘಟಕ ಖರೀದಿಗೆ 5 ಲಕ್ಷ ಸಹಾಯ ಧನದಂತೆ 71.64 ಕೋಟಿ ರೂ.ಅನುದಾನ ಒದಗಿಸಲಾಗಿದೆ. ಇನ್ನಿತರ ವಿವಿಧ ಯೋಜನೆಗಳಿಗೆ 221.48 ಕೋಟಿ ರೂ. ಅನುದಾನ ನೀಡಲಾಗಿದೆ. ಬೀದಿ ಬದಿ ವ್ಯಾಪಾರಿಗಳಿಗೆ ಇ-ವೆಂಡಿಂಗ್ ವಾಹನ ನೀಡಲು 13.35 ಕೋಟಿ ರೂ.ನಿಗದಿ ಮಾಡಲಾಗಿದೆ.

ಹಸಿರೀಕರಣ-ಉದ್ಯಾನವನಕ್ಕೆ ಬಲವರ್ಧನೆ



ಉದ್ಯಾನವನಗಳ ನಿರ್ವಹಣೆ ಮತ್ತು ಅಭಿವೃದ್ಧಿಗೆ 53.77 ಕೋಟಿ ರೂ.ಹಾಗೂ ತಂತಿ ಬೇಲಿ ಅಳವಡಿಸಲು 3.25 ಕೋಟಿ ರೂ.ಮೀಸಲಿಡ ಲಾಗಿದೆ. 100 ಮಿಯಾವಾಕಿ ಕಾಡುಗಳನ್ನು ಸ್ಥಾಪಿಸಲು 1 ಕೋಟಿ ರೂ.ಹಂಚಿಕೆ. ಪಾಲಿಕೆಯ ಪ್ರತಿ ವಿಭಾಗಗಳಲ್ಲಿ ಕನಿಷ್ಠ 1 ರಂತೆ ವಿಶೇಷ ಚೇತನ ಸ್ನೇಹಿ ಉದ್ಯಾನವನ ನಿರ್ಮಾಣ, ವಾಚನಾಲಯ, ಪಾಲಿಕೆಯ ಕಚೇರಿಗಳು, ಮೈದಾನಗಳು, ಪಾರ್ಕ್‌ಗಳಲ್ಲಿ ಪೇ ಆ್ಯಂಡ್ ಯೂಸ್ ವಿದ್ಯುತ್ ಚಾರ್ಜಿಂಗ್ ಪಾಯಿಂಟ್ ಸ್ಥಾಪನೆಗೆ ಕ್ರಮ. 20 ಉದ್ಯಾನವನಗಳಲ್ಲಿ 10 ಲಕ್ಷ ವೆಚ್ಚದಲ್ಲಿ ಮಳೆಯ ನೀರು ಸಂಗ್ರಹಣಾ ಘಟಕ ಸ್ಥಾಪನೆಗೆ ಯೋಜನೆ. ಮೊದಲ ಹಂತದಲ್ಲಿ 2 ಕೋಟಿ ರೂ. ಮೀಸಲು. ಉದ್ಯಾನವನಗಳ ಶಾಶ್ವತ ನಿರ್ವಹಣೆಗೆ ಹಾಗೂ ಉತ್ತೇಜನಕ್ಕೆ 2 ಕೋಟಿ ರೂ.ನೀಡಲಾಗಿದೆ.

ಮೂರು ವಿಧಾನಸಭಾ ಕ್ಷೇತ್ರಕ್ಕೆ ವಿಶೇಷ ಅನುದಾನ

- ಮಲ್ಲೇಶ್ವರ, ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರಕ್ಕೆ 5 ಕೋಟಿ ರೂ.
- ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ 4 ಕೋಟಿ ರೂ.

ಆರೋಗ್ಯಕ್ಕೆ ಮದ್ದು ನೀಡಿದ ಬಜೆಟ್

- ಆರೋಗ್ಯ ಕ್ಷೇತ್ರದ ಕಾಮಗಾರಿಗಳಿಗೆ 95.73 ಕೋಟಿ ರೂ.
- 6 ಆಸ್ಪತ್ರೆಗಳ ಉನ್ನತೀಕರಣಕ್ಕೆ ಕ್ರಮ
- 20 ಆರೋಗ್ಯ ಕೇಂದ್ರಗಳಲ್ಲಿ ಸ್ಮಾರ್ಟ್ ವರ್ಚುವಲ್ ಕ್ಲಿನಿಕ್ ಆರಂಭಿಸಲು 4 ಕೋಟಿ ರೂ.
- ಜಯದೇವ ಹೃದ್ರೋಗ ಸಂಸ್ಥೆಯ ಪ್ರಾದೇಶಿಕ ಕೇಂದ್ರ ಸ್ಥಾಪಿಸಲು 10 ಕೋಟಿ ರೂ.



ಪಾಲಿಕೆಯಿಂದ ಇ-ನಿಯತಕಾಲಿಕೆ

- ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಪ್ರತ್ಯೇಕ ಇ-ನಿಯತಕಾಲಿಕೆ ಪ್ರಾರಂಭ
- ಪಾಲಿಕೆಯ ವಿವಿಧ ಅಭಿವೃದ್ಧಿ ಕಾರ್ಯಕ್ರಮ ಸೇರಿದಂತೆ ಇತರೆ ಮಾಹಿತಿಗಳ ಕುರಿತು ಡಿಜಿಟಲ್ ನ್ಯೂಸ್ ಬುಲೆಟಿನ್ ಪ್ರಕಟಣೆ

ಆದಾಯದ ಇತರೆ ಮೂಲಗಳು

- ಕಂದಾಯ ವಿಭಾಗದಿಂದ 1964 ಕೋಟಿ
- ಆಸ್ತಿ ತೆರಿಗೆ 872 ಕೋಟಿ
- ವಿವಿಧ ಜಾಹಿರಾತಿನಿಂದ 118 ಕೋಟಿ
- ಪ್ರೀಮಿಯಂ ಎಫ್‌ಎಆರ್ ನೀತಿಯಿಂದ 380 ಕೋಟಿ
- ಆಸ್ತಿ ಡಿಜಿಟಲೀಕರಣದಿಂದ 18 ಕೋಟಿ
- ಪಾಲಿಕೆ ಸ್ವತಂತ ಆಸ್ತಿಯ ಬಾಡಿಗೆಗಳಿಂದ 29.50 ಕೋಟಿ
- ನಗರ ಯೋಜನೆ ವಿಭಾಗದಿಂದ 254 ಕೋಟಿ ರೂ.
- ಸಿಂಗಲ್ ಪ್ಲಾಟ್ ಅಪ್ರೋವಲ್ ನೀಯಮದಿಂದ 200 ಕೋಟಿ

> ಬಜೆಟ್ ತಿಳಿಸಲಾದ ಯೋಜನೆಗಳು ಪರಿಣಾಮಕಾರಿಯಾಗಿ ಜಾರಿಗೆ ಬಂದು ಪ್ರತಿಯೊಂದು ಮನೆಗೂ ಪ್ರಯೋಜನವಾಗಲಿ ಎಂಬ ನಿರೀಕ್ಷೆ ನಮ್ಮದು.
> ■ **ನವೀನ್ ಅಯ್ಯರ್,** ಬಿ ಪ್ಯಾಕ್ ಸಿವಿಕ್ ಲೀಡರ್

ಸಾರ್ವಜನಿಕ ಕಾಮಗಾರಿಗೆ ಹಣಕಾಸಿನ ಸಹಾಯ

- ಪ್ರತಿ ವಾರ್ಡ್‌ಗೆ 2.25 ಕೋಟಿಯಂತೆ 253.5 ಕೋಟಿ ಮೀಸಲು
- ಓನ್ ಸ್ಟ್ರೀಟ್ ಪಾರ್ಕಿಂಗ್ ಜಾರಿ
- ವಿವಿಧ ಕಾಮಗಾರಿ ಭೂಸ್ವಾಧೀನಕ್ಕೆ 20 ಕೋಟಿ
- ಕೆಂಗೇರಿ ಸಾರ್ವಜನಿಕ ಆಟದ ಮೈದಾನ ಅಭಿವೃದ್ಧಿಗೆ 5 ಕೋಟಿ
- ಯಶವಂತಪುರದಲ್ಲಿ 50 ಹಾಸಿಗೆ ಆಸ್ಪತ್ರೆ ನಿರ್ಮಾಣಕ್ಕೆ 10 ಕೋಟಿ
- ಕುಂಬಳಗೋಡು ವಿದ್ಯುತ್ ಚಿತಾಗಾರ ಅಭಿವೃದ್ಧಿಗೆ 10 ಕೋಟಿ
- ಮಲ್ಟಿಲೇವಲ್ ಕಾರ್ ಪಾರ್ಕಿಂಗ್ ನಿರ್ಮಾಣಕ್ಕೆ ಕ್ರಮ
- ಆಡಳಿತಾತ್ಮಕ ಪಾರದರ್ಶಕತೆಗೆ ಆಡಿಟ್ ಸೆಲ್ ಸ್ಥಾಪನೆ
- ಭೂಸ್ವಾಧೀನ ಹಾಗೂ ಟಿಡಿಆರ್ ಕೋಶ ಸ್ಥಾಪನೆ, ಟಿಡಿಆರ್ ಎಕ್ಸ್‌ಚೇಂಜ್ ಸೆಲ್ ಆರಂಭಿಸಲು ಯೋಜನೆ



ಶಿಕ್ಷಣಕ್ಕೆ ಅಲ್ಪ ಹಂಚಿಕೆ

- ಶಿಕ್ಷಣಕ್ಕೆ 44.35 ಕೋಟಿ ರೂ. ಮೀಸಲು
- ಕೆಂಪಾಪುರ ಶಾಲಾ ಕಟ್ಟಡಕ್ಕೆ ಹೆಚ್ಚುವರಿ 2 ಕೋಟಿ ನಿಗದಿ
- ಪಠ್ಯೇತರ ಚಟುವಟಿಕೆಗೆ ವಿಶೇಷ ಉತ್ತೇಜನ
- 5 ಶಾಲೆಗಳನ್ನು ಸ್ಮಾರ್ಟ್ ಶಾಲೆಗಳಾಗಿ ಪರಿವರ್ತಿಸಲು 1 ಕೋಟಿ
- ವಿದ್ಯಾರ್ಥಿಗಳ ಕರ್ನಾಟಕ ದರ್ಶನ ಪ್ರವಾಸ 3 ದಿನಕ್ಕೆ ಏರಿಕೆ, 2 ಕೋಟಿ ಮೀಸಲು
- ಸ್ಯಾನಿಟರಿ ಪ್ಯಾಡ್ ದಹಿಸುವ ಯಂತ್ರ ಅಳವಡಿಸಲು ಕ್ರಮ



ಕೆರೆ-ಉದ್ಯಾನವನಗಳ ಅಭಿವೃದ್ಧಿ

- ಪ್ರತಿ ವಿಭಾಗವಾರು ಕನಿಷ್ಠ 5 ಸ್ಥಳಗಳಲ್ಲಿ ಹಾಗೂ ನಾಯಂಡಹಳ್ಳಿ ಕೆರೆಯ ಸುತ್ತ ಸೈಕಲ್ ಪಥ ನಿರ್ಮಾಣ
- ಉದ್ಯಾನವನಗಳು ಮತ್ತು ಆಟದ ಮೈದಾನಗಳಲ್ಲಿ ಖಾಸಗಿ ಸಂಸ್ಥೆಗಳ ಮೂಲಕ ವಿಶೇಷ ಕಾರ್ಯಕ್ರಮ ಆಯೋಜನೆ. ಪಾಲಿಕೆಗೂ ಆದಾಯದ ನಿರೀಕ್ಷೆ
- ಅಂಜನೇಯ ದೇವಸ್ಥಾನ, ಉಷಾ ಕುವೆಂಪು ಮತ್ತು ಕಿರ್ಲೋಸ್ಕರ್ ಕಾಲೋನಿ ಉದ್ಯಾನವನಗಳ ಸಮಗ್ರ ಅಭಿವೃದ್ಧಿಗೆ 5 ಕೋಟಿ ರೂ.

ಉತ್ತರ ಪಾಲಿಕೆಯ 4,341 ಕೋಟಿ ಬಜೆಟ್

ಸರ್ವಜನರ ಏಳಿಗೆಗೆ ವಿಶೇಷ ಗಮನ



• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಉತ್ತರ ನಗರ ಪಾಲಿಕೆಯ ಚೊಚ್ಚಲ ಆಯವ್ಯಯದಲ್ಲಿ ಮೂಲ ಸೌಕರ್ಯದ ಅಭಿವೃದ್ಧಿಗೆ ಒತ್ತು ನೀಡುವುದರೊಂದಿಗೆ ಸರ್ವ ಜನರ ಏಳಿಗೆಗೆ ವಿಶೇಷ ಆದ್ಯತೆ ನೀಡಲಾಗಿರುವ 4,341 ಕೋಟಿ ರೂ. ಗಾತ್ರದ ಬಜೆಟ್ ಮಂಡನೆಯಾಗಿದೆ.

ಶನಿವಾರ ಜಿಬಿಎ ಮುಖ್ಯ ಆಡಳಿತಾಧಿಕಾರಿ ಮಹೇಶ್ವರ್ ರಾವ್ ಸಮ್ಮುಖದಲ್ಲಿ ಯಲಹಂಕದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಉತ್ತರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅವರು 4,344 ಕೋಟಿ ರೂ.ಆದಾಯದ ಅಂದಾಜಿನೊಂದಿಗೆ 2.80 ಕೋಟಿ ಉಳಿತಾಯ ಬಜೆಟ್‌ನ್ನು ಮಂಡಿಸಿದರು. ಈ ವೇಳೆ ಅಭಿವೃದ್ಧಿ ಹೆಚ್ಚುವರಿ ಆಯುಕ್ತೆ ಆರ್.ಲತಾ, ಜಂಟಿ ಆಯುಕ್ತ ಮೊಹ್ಮದ್ ನಯೀಮ್ ಮೋಮಿನ್, ಹಣಕಾಸು ವಿಭಾಗದ ಉಪ ನಿಯಂತ್ರಕ ನಾಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಪತ್ರಕರ್ತರಿಗೆ 72 ಲಕ್ಷ ರೂ.: ಪತ್ರಕರ್ತರು, ಮಾಧ್ಯಮ ವರದಿಗಾರರಿಗೆ ವೈದ್ಯಕೀಯ ಪರಿಹಾರ ಸೌಲಭ್ಯ ನೀಡಲು 50 ಲಕ್ಷ, ಸಣ್ಣ ಮಧ್ಯಮ ಪತ್ರಕರ್ತರು, ವರದಿಗಾರರಿಗೆ ಸಾಮೂಹಿಕ ವಿಮಾ ಯೋಜನೆಗಾಗಿ 22 ಲಕ್ಷ ರೂ. ಕಾಯ್ದಿರಿಸಲಾಗಿದೆ. ಸುಮಾರು 336ಕ್ಕೂ ಅಧಿಕ ಉದ್ಯಾನವನ ಹಾಗೂ 38 ರಸ್ತೆ ಮೀಡಿಯನ್ ಉತ್ತಮ ನಿರ್ವಹಣೆಗಾಗಿ 37 ಕೋಟಿ ರೂ, ಉದ್ಯಾನವನ ಅಭಿವೃದ್ಧಿ ಮತ್ತು ಉನ್ನತೀಕರಣಕ್ಕಾಗಿ 25 ಕೋಟಿ ರೂ, ನೀಡಲಾಗುತ್ತದೆ.

ಅಕ್ಕ ಕೆಫೆಗೆ 27 ಲಕ್ಷ ರೂ.

ಮಹಿಳಾ ಕಲ್ಯಾಣ ಕಾರ್ಯಕ್ರಮಕ್ಕಾಗಿ 1.27 ಕೋಟಿ ರೂ. ಹೊಲಿಗೆ ತರಬೇತಿ ಪಡೆದ ಮಹಿಳೆಯರಿಗೆ ಹೊಲಿಗೆ ಯಂತ್ರ ನೀಡಲು ಮತ್ತು ಉದ್ಯೋಗಸ್ಥ ಮಹಿಳೆಯರಿಗೆ ಎಲೆಕ್ಟ್ರಿಕಲ್ ದ್ವಿಚಕ್ರ ವಾಹನ ವಿತರಿಸಲು 50 ಲಕ್ಷ ರೂ. ಅಕ್ಕ ಕೆಫೆ ಪ್ರಾರಂಭಿಸಲು 27 ಲಕ್ಷ ರೂ. ಮೀಸಲಿರಿಸಲಾಗಿದೆ.



ಕಸ ತ್ಯಾಜ್ಯ ವಿಲೇವಾರಿಗೆ 301 ಕೋಟಿ ರೂ.

ಡಿಪಿಎಸ್ ಪೌರ ಕಾರ್ಮಿಕರಿಗೆ 13 ಕೋಟಿ ರೂ. ಪೌರಕಾರ್ಮಿಕರಿಗೆ ಸಂಬಂಧಿಸಿದಂತೆ ಹಬ್ಬದ ಮುಂಗಡ, ರಜಾ ಅವಧಿ, ವಿಶೇಷ ಸ್ವಯಂ ಚಾಲಿತ ವೇತನ ಬಡ್ತಿಗಾಗಿ 19.12 ಕೋಟಿ ರೂ. ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತಕ್ಕೆ ಆಡಳಿತಾತ್ಮಕ ವೆಚ್ಚಕ್ಕಾಗಿ 13.38 ಕೋಟಿ ರೂ., ಘನತ್ಯಾಜ್ಯ ಸಂಗ್ರಹಣೆ-ಸಾಗಾಣಿಕೆ ಸ್ಥಾವರ ಮತ್ತು ಇತರೆ ನಿರ್ವಹಣೆಗಾಗಿ 129.57 ಕೋಟಿ ರೂ. ಹಾಗೂ ಬಂಡವಾಳ ಕಾಮಗಾರಿಗಳಿಗಾಗಿ 157.05 ಕೋಟಿ ರೂ. ಅನುದಾನ ನೀಡಲಾಗುತ್ತಿದೆ.

ಪ್ರಾಣಿ ತ್ಯಾಜ್ಯ ನಿರ್ವಹಣೆಗಾಗಿ 2.70 ಕೋಟಿ ರೂ.

ಸ್ವಚ್ಛತೆಗಾಗಿ ವೈಜ್ಞಾನಿಕ ಯಂತ್ರಗಳ ಖರೀದಿಗೆ 5 ಕೋಟಿ ರೂ. ಪುಲಕೇಶಿನಗರ ವಿಭಾಗಕ್ಕೆ ಸಂಬಂಧಿಸಿದಂತೆ ಪ್ರಾಣಿ ತ್ಯಾಜ್ಯ ನಿರ್ವಹಣೆಗಾಗಿ 2.70 ಕೋಟಿ ರೂ. ಘನತ್ಯಾಜ್ಯ ಸಂಬಂಧಿಸಿದ ಕಾರ್ಯಗಳಿಗೆ 10 ಲಕ್ಷ ರೂ. ಇತರೆ ನಿರ್ವಹಣೆಗಾಗಿ 33 ಲಕ್ಷ 50 ಲಕ್ಷ ರೂ. ಮೀಸಲಿಡಲಾಗಿದೆ.

ಆದಾಯ ನಿರೀಕ್ಷೆ

- 826.25 ಕೋಟಿ ರೂ.ಆಸ್ತಿ ತೆರಿಗೆ, ಮ್ಯುಟೇಷನ್ ಅರ್ಜಿಗಳಲ್ಲಿ ಸ್ಟ್ಯಾಂಪ್ ಡ್ಯೂಟಿಯಿಂದ 40 ಕೋಟಿ ರೂ.
- ಪಿಎಸ್‌ಯು, ವಸತಿನಿವೇಶನ ಅಭಿವೃದ್ಧಿ ಶುಲ್ಕದಿಂದ 128.02 ಕೋಟಿ ರೂ.ಆದಾಯ / ಆಸ್ತಿ ತೆರಿಗೆ,
- ಬಿ-ಖಾತದಿಂದ ಎ-ಖಾತಾ ಆಸ್ತಿಗಳನ್ನಾಗಿ ಪರಿವರ್ತಿಸುವ ಪ್ರಕ್ರಿಯೆಯಿಂದ 680 ಕೋಟಿ ರೂ.
- ಜಾಹೀರಾತು ಪರವಾನಿಗೆ ಮೊತ್ತದಿಂದ 1.25 ಕೋಟಿ ರೂ. ಹಾಗೂ 108 ಕೋಟಿ ರೂ. ಜಾಹೀರಾತು ಆದಾಯ.
- 15ನೇ ಹಣಕಾಸು ಆಯೋಗದಿಂದ 25 ಕೋಟಿ ರೂ.
- 16ನೇ ಹಣಕಾಸು ಆಯೋಗದಿಂದ 128.29 ಕೋಟಿ ರೂ.
- ವಿಶೇಷ ಮೂಲ ಸೌಕರ್ಯ ಅನುದಾನ 429.27 ಕೋಟಿ ರೂ.
- ಏಕ ನಿವೇಶನ ನಕ್ಷೆ ಮಂಜೂರಾತಿಯಲ್ಲಿ ಉದ್ಯಾನವನ/ಬಯಲು ಜಾಗದಿಂದ 817.37 ಕೋಟಿ ರೂ.
- ಖಾಲಿ ನಿವೇಶನ ಸ್ವತ್ತುಗಳಿಂದ 100 ಕೋಟಿ ರೂ.

ಬೆಂಗಳೂರು ಉತ್ತರ ಪಾಲಿಕೆಗೆ ನೀಡಲಾದ ಅನುದಾನ

- ನಗರ ಕೋಶಕ್ಕೆ 50 ಕೋಟಿ ರೂ.
- ಕೇಂದ್ರ ಕಚೇರಿ ನಿರ್ಮಾಣಕ್ಕೆ 40 ಕೋಟಿ ರೂ.
- ಭೂ ಸ್ವಾಧೀನ ಪರಿಹಾರಕ್ಕೆ 17 ಕೋಟಿ
- ಯಲಹಂಕ ಮಿನಿ ವಿಧಾನಸೌಧದಲ್ಲಿ ಕಚೇರಿ ಸಂಕೀರಣ ನಿರ್ಮಿಸಲು 10 ಕೋಟಿ ರೂ.
- ಮಹಾ ಯೋಜನೆಗೆ 5 ಕೋಟಿ ರೂ.
- ಇ-ಸಾರಥಿ ಯೋಜನೆಗೆ 4.08 ಕೋಟಿ
- ವಸತಿ ಯೋಜನೆಗೆ 71 ಕೋಟಿ ರೂ.
- ಕ್ಯಾನ್ಸರ್, ಕಿಡ್ನಿ ವೈಫಲ್ಯ ಮುಂತಾದಕ್ಕೆ ಆರ್ಥಿಕ ನೆರವಿಗೆ 11.12 ಕೋಟಿ ರೂ.
- ಪೌರ ಕಾರ್ಮಿಕರಿಗೆ ದ್ವಿಚಕ್ರ ವಾಹನ ವಿತರಣೆಗೆ 1 ಕೋಟಿ ರೂ.
- ಪೌರ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಕ್ಕೆ 10 ಕೋಟಿ ರೂ.
- ಪಾಲಿಕೆ ಕಚೇರಿ ಸಂಕೀರ್ಣ ನಿರ್ಮಾಣಕ್ಕೆ 10 ಕೋಟಿ ರೂ.
- ತಂತ್ರಾಂಶ ಅಭಿವೃದ್ಧಿಗೆ 6 ಕೋಟಿ ರೂ.
- ಪೌರ ಕಾರ್ಮಿಕರಿಗೆ ವಿಶೇಷ ಸ್ವಯಂ ಚಾಲಿತ ವೇತನ ಬಡ್ತಿಗಾಗಿ ಒಟ್ಟು 19.12 ಕೋಟಿ ರೂ.
- ತೃತೀಯ ಲಿಂಗಿಗಳ ಕಲ್ಯಾಣ ಕಾರ್ಯಕ್ರಮಕ್ಕೆ 73 ಲಕ್ಷ ರೂ.
- ವಿಶೇಷ ಚೇತನರಿಗೆ ತ್ರಿಚಕ್ರ ವಿತರಣೆಗೆ 1.28 ಕೋಟಿ ರೂ. , 1.58 ಕೋಟಿ ರೂ.ಯಲ್ಲಿ ವೀಲ್ ಚೇರ್
- ಹಿಂದುಳಿದ ವರ್ಗದವರಿಗೆ ಉಚಿತ ಲ್ಯಾಪ್ ಟಾಪ್‌ಗೆ 7.60 ಕೋಟಿ ರೂ.
- ಬೀದಿ ಬದಿ ವ್ಯಾಪಾರಿಗಳ ಕಲ್ಯಾಣಕ್ಕಾಗಿ 60 ಲಕ್ಷ
- ಬೀದಿ ಬದಿ ವ್ಯಾಪಾರಿಗಳಿಗೆ ಇ ವೆಂಡಿಂಗ್ ವಾಹನ ವಿತರಣೆಗೆ 7.10 ಕೋಟಿ ರೂ.
- ನಿರಾಶ್ರಿತರ ರಾತ್ರಿ ತಂಗುದಾಣ ನಿರ್ವಹಣೆಗಾಗಿ 1.10 ಕೋಟಿ ರೂ.
- ಸಾಮಾನ್ಯ ವರ್ಗದ ಕಲ್ಯಾಣಕ್ಕಾಗಿ 5.60 ಕೋಟಿ
- ಸ್ವಯಂ ಸೇವಾ ಸಂಘ ಸಂಸ್ಥೆಗಳ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲು 11 ಕೋಟಿ ರೂ.
- ಕ್ರೀಡಾಪಟುಗಳಿಗೆ 1 ಕೋಟಿ ರೂ. ಆರ್ಥಿಕ ನೆರವು
- ಮಹಾಪೌರರ ವೈದ್ಯಕೀಯ ಪರಿಹಾರ ಸೌಲಭ್ಯಕ್ಕೆ 2 ಕೋಟಿ ರೂ.
- ಪಾಲಿಕೆ ಸದಸ್ಯರಿಗೆ ವೈದ್ಯಕೀಯ ಪರಿಹಾರ ಸೌಲಭ್ಯ ನೀಡಲು 2 ಕೋಟಿ
- ಅಭಿವೃದ್ಧಿಪಡಿಸಲಾದ 30 ಕೆರೆಗಳ ವಾರ್ಷಿಕ ನಿರ್ವಹಣೆಗಾಗಿ 8 ಕೋಟಿ
- ರಸ್ತೆ ದುರಸ್ತಿ ಪ್ರತಿ ವಾರ್ಡ್ ಗೆ 1.50 ಕೋಟಿ ರೂ.
- ಪಾದಚಾರಿ ಮಾರ್ಗ ರಿಪೇರಿ, ಪುನರ್ ನಿರ್ಮಾಣಕ್ಕೆ 18 ಕೋಟಿ ರೂ.
- ಸ್ಕೈ ವಾಕ್ ನಿರ್ಮಾಣಕ್ಕೆ 50 ಕೋಟಿ ರೂ. ರಾಜ ಕಾಲುವೆ ದುರಸ್ತಿ ಹಾಗೂ ನಿರ್ವಹಣೆ 10 ಕೋಟಿ
- ಆಟದ ಮೈದಾನ, ಸಮುದಾಯ ಭವನ ನಿರ್ವಹಣೆ 9.40 ಕೋಟಿ ರೂ.
- ವಿಧಾನಸಭಾ ಕ್ಷೇತ್ರ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ 120 ಕೋಟಿ ರೂ.
- ರಸ್ತೆ ಅಗಲೀಕರಣ ಕಾಮಗಾರಿಗೆ 25 ಕೋಟಿ ರೂ.
- ಪೌರ ಕಾರ್ಮಿಕರ ವೇತನಕ್ಕೆ 150 ಕೋಟಿ ರೂ.
- ಕೆರೆ ಅಭಿವೃದ್ಧಿಪಡಿಸಲು 40 ಕೋಟಿ
- ಪಾಲಿಕೆ ವ್ಯಾಪ್ತಿಯಲ್ಲಿ ಹವಾಮಾನ ಕ್ರಿಯಾ ಯೋಜನೆಗೆ ಸಂಬಂಧಿಸಿದಂತೆ 20 ಕೋಟಿ ರೂ.

ಪ್ರಾಥಮಿಕ ಆರೋಗ್ಯ ಕೇಂದ್ರಗಳ ಉನ್ನತೀಕರಣಕ್ಕೆ 35 ಕೋಟಿ ರೂ.

ಡೆಂಟಲ್ ಕ್ಲಿನಿಕ್ ಸ್ಥಾಪನೆಗೆ 35 ಕೋಟಿ ರೂ., ಇಂದಿರಾ ಕ್ಯಾಂಟೀನ್‌ಗಾಗಿ 11.15 ಕೋಟಿ ರೂ., ಸಂಜಯನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಮಲ್ಲಸಂದ್ರ ಡಯಾಲಿಸಿಸ್ ಕೇಂದ್ರಗಳ ನಿರ್ವಹಣೆಗಾಗಿ 50 ಲಕ್ಷರೂ. ಡಿ.ಜೆ. ಹಳ್ಳಿ ಮತ್ತು ಮುನಿರೆಡ್ಡಿಪಾಳ್ಯ ಹೆರಿಗೆ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಲು 35 ಕೋಟಿ ರೂ. ಮೀಸಲಿಡಲಾಗಿದೆ.



ಶಿಕ್ಷಣಕ್ಕಾಗಿ 23 ಕೋಟಿ ರೂ.ಮೀಸಲು

ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯಪುಸ್ತಕ, ನೋಟ್ ಬುಕ್ ವಿತರಿಸಲು 4 ಕೋಟಿ ರೂ., ವಿನಾಯಕನಗರದ ಶಾಲಾ/ಕಾಲೇಜು ಕಟ್ಟಡದಲ್ಲಿ ಅವಶ್ಯಕವಾಗಿ ಬೇಕಾಗಿರುವ ಪೀಠೋಪಕರಣಗಳಿಗೆ 2 ಕೋಟಿ ರೂ., ಸ್ಮಾರ್ಟ್ ಪ್ಯಾನೆಲ್ ಅಳವಡಿಸಲು 1ಕೋಟಿ ರೂ., ಗ್ರಂಥಾಲಯ ಉನ್ನತೀಕರಿಸಲು 50 ಲಕ್ಷ ರೂ. ವಿದ್ಯಾರ್ಥಿಗಳ ಸಹಾಯಧನ ಸಹ ನೀಡಲು ಪ್ರಸಕ್ತ ಸಾಲಿನಲ್ಲಿ 8.94 ಕೋಟಿ ರೂ. ಮೀಸಲಿಡಲಾಗಿದೆ.



ಬೀದಿ ನಾಯಿಗಳ ನಿರ್ವಹಣೆಗಾಗಿ 1.50 ಕೋಟಿ ರೂ.

ಸುಮಾರು 14 ಕೋಟಿ ರೂ. ಅನುದಾನದಲ್ಲಿ ಆಧುನಿಕ ಕಸಾಯಿಖಾನೆ ಸ್ಥಾಪನೆ, 12,000 ಬೀದಿ ನಾಯಿಗಳಿಗೆ ಎಬಿಸಿ ಶಸ್ತ್ರಚಿಕಿತ್ಸೆಗೆ 3 ಕೋಟಿ ರೂ. ವಿವಿಧ ಲಸಿಕೆ ನೀಡಲು 5 ಕೋಟಿ ರೂ., ಮಾಹಿತಿ, ಪ್ರಚಾರ ಕಾರ್ಯಕ್ಕೆ 50 ಲಕ್ಷ ರೂ, 500 ನಾಯಿಗಳ ಸಾಮರ್ಥ್ಯದ ಆಶ್ರಯ ತಾಣ ನಿರ್ಮಾಣಕ್ಕೆ 3.80 ಕೋಟಿ ರೂ, ಬೀದಿ ನಾಯಿಗಳ ನಿರ್ವಹಣೆಗಾಗಿ 1.50 ಕೋಟಿ ರೂ. ಮೀಸಲಿರಿಸಲಾಗಿದೆ.

ಹಸಿರೇ ಉಸಿರು

ಮರಗಳ ಸಮಗ್ರ ನಿರ್ವಹಣೆ, ವನ್ಯಜೀವಿ ಸಂರಕ್ಷಣೆ ಮತ್ತು ನಗರದಾದ್ಯಂತ ಅರಣ್ಯ ಚಟುವಟಿಕೆಗಳನ್ನು ನಿರ್ವಹಿಸಲು 1051 ಲಕ್ಷ ರೂ., ಮರಗಳ ಗಣತಿ ಕಾಮಗಾರಿಗೆ 30 ಲಕ್ಷ ರೂ. ಮರಗಳ ನಿರ್ವಹಣೆ 500 ಲಕ್ಷ ರೂ. ಗಿಡಗಳನ್ನು ನೆಟ್ಟು ಪೋಷಿಸಲು 416 ಲಕ್ಷ ರೂ. ವನ್ಯಜೀವಿ ಸಂರಕ್ಷಣೆಗೆ 15 ಲಕ್ಷ ರೂ. ವನಮಹೋತ್ಸವದ ಕಾರ್ಯಕ್ರಮಕ್ಕೆ 10 ಲಕ್ಷ ರೂ. ಒದಗಿಸಿದೆ.



ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ಚಿಂತಿಸಬೇಕಾದ ವಿಷಯ ಯಾವುದು?

▸ ವೈಭವವಿದ್ದರೂ ಮತ್ತೊಬ್ಬರಿಗೆ ಕೊಡದಿರುವ ಕೃಪಣತಾ

ಅತ್ಯಂತ ವಿಷಾದದ ಸಂಗತಿ ಯಾವುದು ಎಂಬುದು ಇಲ್ಲಿನ ಪ್ರಶ್ನೆ. ಇದಕ್ಕೆ ಉತ್ತರ, ಒಬ್ಬ ವ್ಯಕ್ತಿಯಲ್ಲಿ ಸಾಕಷ್ಟು ಸಂಪತ್ತು ಇದೆ; ಒಂದರ್ಥದಲ್ಲಿ ಧನಿಕ. ತಾನು ಮಾತ್ರ ಆ ಸಂಪತ್ತನ್ನು ಬಳಸಿದರೂ ಅದು ಖರ್ಚಾಗದ ರೀತಿಯಲ್ಲಿ ಇದೆ. ಹಾಗಾದರೆ, ಇಷ್ಟು ಸಂಪತ್ತುಳ್ಳವನಾಗಿದ್ದರೂ ಕೂಡ ಅವನು ದೀನ ದರಿದ್ರರಿಗೆ ಆ ಸಂಪತ್ತನ್ನು ಕೊಡದೇ ತಾನೇ ಭೋಗಿಸಬೇಕು ಎಂಬ ಯಾವ ಆಸೆ ಇದೆಯೋ, ಅದೇ ವಸ್ತುತಃ ಕೃಪಣತಾ ಎಂಬುದಾಗಿ ಹೇಳಲಾಗಿದೆ. ಈ ಕಾರ್ಪಣ್ಯ ಎಂಬ ಅತಿಭಯಂಕರವಾದ ಅವಗುಣವು ಪ್ರಸ್ತುತ ವಿಷಾದಪಡಬೇಕಾದ ವಿಚಾರವಾಗಿದೆ. ವಿಷಾದಪಡುವ ಸಂಗತಿಯಾದರೂ ಏನು? ಸಂಪತ್ತನ್ನು ಕೊಡಲೇಬೇಕೆಂಬ ನಿಯಮವಿದೆಯೇ? ಕೊಡದಿದ್ದರೆ ಏನು ಅಪರಾಧ? ನಿಜವಾಗಿಯೂ ಆ ವ್ಯಕ್ತಿ ತನ್ನ ಸಾಮರ್ಥ್ಯ, ಬುದ್ಧಿಮತ್ತೆ ಮತ್ತು ಶ್ರಮದ ಕಾರಣದಿಂದ ಸಂಪತ್ತನ್ನು ಗಳಿಸಿರುತ್ತಾನೆ. ಹಾಗಾಗಿ ಆ ಸಂಪತ್ತನ್ನು ಅವನೇ ಇಟ್ಟುಕೊಂಡು ಬಳಸಿ, ತನ್ನ ಪರಿವಾರದ ಪ್ರಗತಿಗಾಗಿ ಸೀಮಿತವಾಗಿ ಇಟ್ಟರೆ ಅದು ಹೇಗೆ ಆತಂಕದ ವಿಷಯ? ಅದನ್ನು ಏಕೆ ಕಾರ್ಪಣ್ಯ ಎಂಬುದಾಗಿ ಕರೆಯಬೇಕು ಎಂಬುದು ಇಲ್ಲಿನ ಆಶಯ. ಹೀಗಿರುವಾಗ ವೈಭವವಿದ್ದಾಗ ಮತ್ತೊಬ್ಬರಿಗೆ ಕೊಡದ ಮನೋಧರ್ಮವು ಹೇಗೆ ವಿಷಾದದ ಸಂಗತಿ ಎಂಬುದನ್ನು ಯೋಚಿಸಬೇಕಾಗಿದೆ.

"ಸ್ತೋಕಾದಪಿ ಹಿ ದಾತವ್ಯಂ ಮುದಿದೇನ ಅಂತರಾತ್ಮನಾ। ಅಹನ್ಯಹನಿ ಯತ್ಕಿಂಚಿತ್ ಅಕಾರ್ಪಣ್ಯಮ್ ಇತಿ ಸ್ಮೃತಮ್॥" ಸ್ವಲ್ಪವಾದ್ದಾದರೂ ಕೊಡಲೇಬೇಕು, ಸ್ವಲ್ಪವಾದ್ದಾದರೂ ಅತ್ಯಂತ ಸಂತೋಷದಿಂದ ಕೊಡಬೇಕು, ಅದನ್ನು ಪ್ರತಿನಿತ್ಯವೂ ಕೊಡಬೇಕು ಎಂಬುದಾಗಿ ಕಾರ್ಪಣ್ಯದ ಸ್ವಭಾವವನ್ನು ಇಲ್ಲಿ ಹೇಳಲಾಗಿದೆ. ಪ್ರತಿಯೊಬ್ಬ ಮನುಷ್ಯನು ಕೂಡ ತಾನು ಸಂಪಾದಿಸಿದ್ದರಲ್ಲಿ ಹತ್ತನೆಯ ಒಂದು ಭಾಗವನ್ನು ದಾನ ಮಾಡಬೇಕು ಎಂಬುದಾಗಿ ನಮ್ಮೆಲ್ಲಾ ಶಾಸ್ತ್ರ ಸಂಪ್ರದಾಯಗಳು ಸಾರುತ್ತವೆ. ಅಂದರೆ ತ್ಯಾಗ ಮಾಡುವ ಮನೋಭಾವನೆ ಬೆಳೆಸಿಕೊಳ್ಳಬೇಕು; ಕೇವಲ ತಾನು ಮಾತ್ರ ಸಂಪತ್ತನ್ನು ಬಳಸಿಕೊಳ್ಳಬೇಕು ಎಂಬ ಭಾವನೆ ಸಲ್ಲದು ಎಂದು. ಸಂಪಾದಿಸಿದ ದ್ರವ್ಯದಲ್ಲಿ ಗೃಹಸ್ಥನಾದವನು ಪಂಚಮಹಾಯಜ್ಞಗಳನ್ನು ಮಾಡಬೇಕು ಎಂಬುದಾಗಿ ನಮ್ಮ ಸನಾತನ ಧರ್ಮದಲ್ಲಿ ಹೇಳಿರುವ ಅತ್ಯಂತ ಮಹತ್ವದ ವಿಷಯ. ಈ ಪಂಚಮಹಾಯಜ್ಞ ಎಂಬ ಶ್ರೇಷ್ಠವಾದ ಕರ್ಮವು ತನ್ನ ಸಂಪತ್ತನ್ನು ಸದ್ವಿನಿಯೋಗ ಮಾಡುವ ವಿಧಾನ ಎಂದು ಕರೆಯುತ್ತಾರೆ. ಇದರಿಂದ ಸಂಪತ್ತು ಸದ್ವಿನಿಯೋಗವಾದಂತಾಗುತ್ತದೆ. ದಾನದಿಂದ ಭೂತಕೋಟಿಗಳ ತೃಪ್ತಿಯು ಉಂಟಾಗಿ ದಾನಿಗೆ ಭೂತಕೋಟಿಯ ಅನುಗ್ರಹ ಸಿಗುತ್ತದೆ. ಹಾಗಾಗಿ ಎಷ್ಟು ವೈಭವವಿದ್ದರೂ ಅವನು ತನ್ನ ಗಳಿಕೆಯ ದ್ರವ್ಯವನ್ನು ಬೇರೊಬ್ಬರಿಗೆ ದಾನ ಮಾಡಲಿಲ್ಲವೆಂದರೆ ಅವನು ಶುದ್ಧನಾಗುವುದಿಲ್ಲ, ತ್ಯಾಗದ ಮನೋಭೂಮಿಕೆ ಬರದಿದ್ದರೆ ಶುದ್ಧಿ ಎಲ್ಲಿಂದ ಬರುತ್ತದೆ? ಶುದ್ಧನಾಗದಿದ್ದರೆ ಅವನು ಹೇಗೆ ತಾನೇ ಪುರುಷಾರ್ಥಗಳನ್ನು ಪಡೆಯುತ್ತಾನೆ? ಇತ್ಯಾದಿ ಅನೇಕ ಆತಂಕಗಳಿಂದ ಕೇಳಿರುವ ಪ್ರಶ್ನೆ ಇದಾಗಿದೆ.



ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಜರಾಸಂಧನಿಗೆ ಕೃಷ್ಣನ ಉತ್ತರ

ಜರಾಸಂಧನು ಹೇಳಿದನು: "ನಿಮ್ಮೊಂದಿಗೆ ವೈರವೆಂಬುದು ಎಂದುಂಟಾಯಿತು ಎಂಬುದು ನನ್ನ ಸ್ಮರಣೆಗೆ ಬರುತ್ತಿಲ್ಲ, ಯೋಚಿಸಿದರೂ ಹೊಳೆಯುತ್ತಿಲ್ಲ. ನನ್ನ ಕಡೆಯಿಂದ ಯಾವುದೇ ಅಪರಾಧವೆಂಬುದಿಲ್ಲದಿರುವಾಗ, ನಿರಪರಾಧಿಯಾದ ನನ್ನನ್ನು ಶತ್ರುವೆಂಬುದಾಗಿ ಹೇಗೆ ಪರಿಗಣಿಸಿದಿರಿ? ವಿಪ್ರರೇ, ಸಾಧು-ಪುರುಷರ ವರ್ತನೆಯೆಂದರೆ ಹೀಗಿರುವುದೇ? ಯಾರಿಗಾದರೂ ಧರ್ಮಕ್ಕೆ ಹೊಡೆತಬಿತ್ತೆಂದರೆ ಮನಸ್ಸು ಸಂತಾಪಗೊಳ್ಳುತ್ತದೆ. ಮಹಾರಥಿಯೆಂದೂ ಧರ್ಮಜ್ಞನೆಂದೂ ಕರೆಸಿಕೊಳ್ಳುವ ಯಾವನೇ ಕ್ಷತ್ರಿಯನು ಅನ್ಯಥಾ ನಡೆದುಕೊಳ್ಳುವವನಾಗಿ ಅಪರಾಧವಿಲ್ಲದವನ ಮೇಲೇರಿ ಹೋಗುವವನೋ, ಅಂತಹವನು ಪಾಪಗತಿಯನ್ನು ಹೊಂದುವನು ಹಾಗೂ ತನ್ನ ಶ್ರೇಯಸ್ಸಿಗೇ ಭಂಗವನ್ನು ತರುವನು. ಸತ್ಕರ್ಮಗಳನ್ನು ಮಾಡುವುದೆನ್ನುವುದರಲ್ಲಿ, ಕ್ಷತ್ರಿಯರಧರ್ಮವೆಂಬುದೇ ಮೂರೂ ಲೋಕಗಳಲ್ಲಿ ಶ್ರೇಷ್ಠವೆನಿಸತಕ್ಕದ್ದು. ಧರ್ಮಜ್ಞರು ಬೇರಿನ್ನಾವುದೇ ಧರ್ಮವನ್ನು ಪ್ರಶಂಸಿಸುವುದಿಲ್ಲ. ನಾನಾದರೋ ಸ್ವಧರ್ಮದಲ್ಲಿ ನೆಲೆಗೊಂಡಿರತಕ್ಕವನು. ಮನಸ್ಸನ್ನು ಸಂಯಮದಲ್ಲಿ ಇಟ್ಟುಕೊಂಡಿರುವವನು. ಪ್ರಜೆಗಳ ವಿಷಯದಲ್ಲಿ ಏನೂ ಅಪರಾಧವನ್ನು ಎಸಗದಿರುವವನು. ನನ್ನ ವಿಷಯದಲ್ಲಿ ಏನೋ ಪ್ರಮಾದದಿಂದಲೇ ನೀವು ಹೀಗೆ ಹೇಳುತ್ತಿರುವಿರಿ."

ಅದಕ್ಕೆ ಕೃಷ್ಣನು ಹೇಳಿದನು: ಒಂದು ಕುಲದ ಉದ್ಧಾರವೆಂಬುದು ದೊಡ್ಡಕೆಲಸವಯ್ಯಾ ಮಹಾಬಾಹುವೇ! ಕುಲದ ಗೌರವವನ್ನುಳಿಸುವಂತಹವನು ಎಲ್ಲೋ ಒಬ್ಬನಿದ್ದಾನು. ಅಂತಹ ಮಹಾಪುರುಷನೊಬ್ಬನ ಆಣತಿಯಂತೆಯೇ ನಾವೀಗ ನಿನಗೆ ದಂಡವನ್ನೀಯಲು ಬಂದಿದ್ದೇವೆ. ಈ ಭೂಮಿಯ ಮೇಲಿರುವ ಅನೇಕ ಕ್ಷತ್ರಿಯ ರಾಜರನ್ನು ನೀನು ಸೆರೆಗೆ ನೂಕಿರುವೆ. ಇದು ಕ್ರೂರಾಪರಾಧ. ಇದನ್ನು ಮಾಡಿಯೂ ನಿನ್ನನ್ನು ನೀನೇ ನಿರಪರಾಧಿಯೆಂದುಕೊಳ್ಳುವುದೇ? ಅಪರಾಧಿಗಳಲ್ಲದ ಇತರ ರಾಜರನ್ನು ಒಬ್ಬ ರಾಜನು ಅದೆಂತು ಹಿಂಸಿಯಾನು ರಾಜಶ್ರೇಷ್ಠನೇ? ರಾಜರುಗಳನ್ನು ಸೈಲಿಗೆ ತಳ್ಳಿ ಅವರನ್ನು ರುದ್ರನಿಗೆ ಬಲಿಗೊಡಲು ನೀನು ಬಯಸುತ್ತಿರುವೆಯಲ್ಲವೇ? ನೀನು ಎಸಗುವ ಆ ಪಾಪವು ನಮಗೆ ಅಂಟಿಕೊಳ್ಳುತ್ತದೆ. ಓ ಜರಾಸಂಧ! ಅದರೆ ನಾವು ಧರ್ಮವನ್ನು ಪಾಲಿಸತಕ್ಕವರು, ಧರ್ಮದ ರಕ್ಷಣೆಯನ್ನು ಮಾಡಲು ಸಮರ್ಥರಾಗಿರುವವರು.

ದೇವತೆಗೆಂದು ಮನುಷ್ಯರನ್ನು ಬಲಿಗೊಡುವುದನ್ನು ನಾವೆಂದೂ ಕಂಡವರಲ್ಲ, ಹಾಗಿರಲು ಶಿವನ ಯಜ್ಞಕ್ಕಾಗಿ ಅಷ್ಟೊಂದು ಮನುಷ್ಯರನ್ನು ಬಲಿಗೊಡಲಿರುವೆಯೆಂಬುದೇ ಒಪ್ಪಲಾಗದ ಸಂಗತಿ. ನೀನು ಕ್ಷತ್ರಿಯ. ಉಳಿದ ರಾಜರು ನಿನಗೆ ಸವರ್ಣರು. ಜರಾಸಂಧ, ಮತ್ತಾರು ತಾನೆ ನಿನ್ನಂತೆ ಈ ರೀತಿಯಾಗಿ ದುರ್ಮತಿಯನ್ನು ಹೊಂದಿದ್ದಾರು? ಯಾವ ಯಾವ ಅವಸ್ಥೆಯಲ್ಲಿ ಯಾವ ಯಾವ ಕರ್ಮವನ್ನು ಒಬ್ಬನು ಮಾಡುತ್ತಾನೋ, ಅದದೇ ಅವಸ್ಥೆಯಲ್ಲಿ ಅದರ ಫಲವನ್ನು ಹೊಂದಬೇಕಾಗುತ್ತದೆ. ನೀನು ಜ್ಞಾತಿಕ್ಷಯಕರ. ಎಂದರೆ ಬಂಧುಗಳನ್ನೇ ನಾಶಮಾಡಲಿಕ್ಕೆ ಹೊರಟಿರತಕ್ಕವನು. ಆದರೆ ನಾವು ಆರ್ತರಿಗೆ ರಕ್ಷಣೆಯನ್ನು ಕೊಡತಕ್ಕವರು. ಆದ್ದರಿಂದ ಜ್ಞಾತಿವೃದ್ಧಿಗಾಗಿ ನಿನ್ನ ವಧೆಯನ್ನು ಮಾಡಲು ಬಂದಿರುವಂಥವರು.

ಈ ಲೋಕದಲ್ಲಿ ಕ್ಷತ್ರಿಯರಲ್ಲಿ ಗಂಡಸೆಂಬುವನೇ ಮತ್ತೊಬ್ಬನಿಲ್ಲ ಎಂದ ನೀನೇನನ್ನು ಭಾವಿಸಿಕೊಂಡಿರುವೆಯೋ, ಅದು ನಿನ್ನ ಮಹತ್ತಾದ ಬುದ್ಧಿವಿಪ್ಲವವೇ ಸರಿ. ಸ್ವಾಭಿಮಾನಿಯಾದ ಯಾವ ಕ್ಷತ್ರಿಯನು ತಾನೆ ತನ್ನ ಬಂಧುಗಳನ್ನು ಅರಿತವನಾಗಿ, ಅವರನ್ನು ಕಾಪಾಡಲೋಸುಗ ಮಾಡಬೇಕಾದ ರಣವನ್ನು ತಪ್ಪಿಸಿಕೊಂಡಾನು? ಅದರಿಂದಲೇ ಸ್ವರ್ಗಪ್ರಾಪ್ತಿಯು ತನಗುಂಟಾಗುವುದು ಎಂಬುದನ್ನು ಅರಿತಿದ್ದೂ ಸಹ! ರಣವೆಂಬುದು ಒಂದು ಯಜ್ಞ. ರಣಯಜ್ಞದಲ್ಲಿ ದೀಕ್ಷೆಗೊಂಡ ಕ್ಷತ್ರಿಯರು ಸ್ವರ್ಗದಲ್ಲಿ ಆಸ್ಥೆಯುಳ್ಳವರಾಗಿ, ತಮಗೆ ಅಭೀಷ್ಟವಾದ ಲೋಕಗಳನ್ನು ಸೇರುವರೆಂಬುದನ್ನು ನೀನೂ ಅರಿತಿರಬೇಕಷ್ಟೆ?

ರಂಗಭೂಮಿ; ಎಡವಟ್ಟಿನಲ್ಲಿಯೂ ರಸ!



ವಕ್ರದೃಷ್ಟಿ

• ಎಸ್.ರಾಮನಾಥ್

anakuramanath@gmail.com

ಟಿ.ಪಿ.ಕೈಲಾಸಂ ಬರೆದ ನಾಟಕದಲ್ಲಿನ ಸನ್ನಿವೇಶ ಇಂತಿದೆ:

"ಯಾರಲ್ಲಿ!" ದರ್ಪದಿಂದ ಕೂಗಿದ ರಾಜ.

"ಅಪ್ಪಣೆ ಮಹಾಪ್ರಭು" ಎನ್ನುತ್ತಾ ಭಟನೊಬ್ಬನು ಮುಂದೆ ಬಂದ.

"ರಾಜದ್ವಾರದ ಬಳಿ ಏನು ನಡೆಯುತ್ತಿದೆ?"

"ಮಹಾಪ್ರಭುಗಳೇ, ದ್ವಾರಸ್ಥನೋರ್ವನು ವಿಪ್ರನಾಗಿರುವನು."

ಆ ಕಾಲದಲ್ಲಿ ಮತಾಂತರ ಇರಲಿಲ್ಲ, ಇತರ ಜಾತಿಯವರನ್ನು ವಿಪ್ರರನ್ನಾಗಿಸುವುದಂತೂ ಕನಸಿನಲ್ಲಿಯೂ ಕಲ್ಪಿಸಿಕೊಳ್ಳಲಾಗದ ಕಾಲಘಟ್ಟ, ಇಂಥದರಲ್ಲಿ ದ್ವಾರಸ್ಥನೊಬ್ಬನು ಥಟ್ಟನೆ ವಿಪ್ರನಾಗಲು ಸಾಧ್ಯವೆ?

ರಾಜನಪಾತ್ರಧಾರಿಗೆಭಟನಪಾತ್ರಧಾರಿಯಎಡವಟ್ಟುತಿಳಿಯಿತು. "ಹೋಗಿ ಅದೇನೆಂದು ಮತ್ತೆ ಅರಿತು ಬಾ" ಎಂದು ಹೂಂಕರಿಸಿದ. ಮತ್ತೆ ಬಂದ ಭಟನು "ವಿಪ್ರನೊಬ್ಬನು ದ್ವಾರಸ್ಥನಾಗಿರುವನು" ಎಂದ. ನಾಟಕ ಮುಂದುವರಿಯಿತು.

ಎಡವಟ್ಟುಗಳಿಗೂ, ನಾಟಕಗಳಿಗೂ ಬಿಡಲಾರದನಂಟು. ಒಮ್ಮೆ ರಾತ್ರಿಪೂರ್ತಿ ವಾಗಿ ನಡೆಯುತ್ತಿದ್ದ ನಾಟಕವೊಂದರಲ್ಲಿ ರಂಗದಲ್ಲಿದ್ದ ಇಬ್ಬರು ನಟರೂ ತಮ್ಮ ಮಾತುಗಳನ್ನು ಮರೆತರು. ಹಾಗೆ ಮರೆತಾಗ ಮಾತನ್ನು ನೆನಪಿಸಲೆಂದೇ ಇದ್ದ ಪ್ರಾಂಪ್ಟರ್ ಸೈಡ್‌ವಿಂಗಿನಿಂದ ಡೈಲಾಗನ್ನು ಪಿಸುಗುಟ್ಟಿದ. ಆದರೂ ನಟರು ಬೆಚ್ಚಿದ್ದೇ. "ಯಾಕ್ರೋ, ಡೈಲಾಗ್ ಕೇಳಿಸ್ತಿಲ್ವಾ?" ಪ್ರಾಂಪ್ಟರ್ ಕೊಂಚ ದನಿಯೇರಿಸಿ ಕೇಳಿದ.

ಸೈಡ್‌ವಿಂಗಿನ ಸಮೀಪಕ್ಕೇ ನಡೆದ ನಟನೊಬ್ಬನು "ಕೇಳಿಸ್ತಿದೆ, ಸ್ಪಷ್ಟವಾಗಿ ಕೇಳಿಸ್ತಿದೆ. ಆದರೆ ಆ ಡೈಲಾಗ್ ನನ್ನದೋ, ಅವನದೋ?" ಎಂದ.

ಸೈಡ್‌ವಿಂಗಿನ ಪ್ರಾಂಪ್ಟಿಂಗು ವಿಫಲವಾದ ಮತ್ತೊಂದು ಪ್ರಸಂಗವು ಕೈಲಾಸಂರ 'ನಂ ಕಂಪ್ನಿ' ನಾಟಕದಲ್ಲಿ ಕಂಡುಬರುತ್ತದೆ. ಮಕ್ಕಳಿಲ್ಲದ ರಾಜದಂಪತಿಗಳಿಗೆ ತಪಸ್ಸು ಮಾಡಿದರೆ ಮಕ್ಕಳಾಗುತ್ತೆಂದು ವಿಪ್ರನೊಬ್ಬನು ನುಡಿದ ಕಾರಣ ರಾಜನು ಕಾಡಿಗೆ ಹೊರಡುವನು. ಅವನನ್ನು ತಡೆಯಲೆಂದು ನಾಡಿಗರು ಯತ್ನಿಸುತ್ತಾ, "ಪಾಡು ಪಾರ್ವ ಪೇಳ್ವನೆಂದು ನಾಡು ಬಿಡುವುದೇ, ಭೂಪ, ನಾಡ ಬಿಡುವುದೇ" ಎಂದು ಹಾಡಬೇಕಿತ್ತು.

ವಿರುದ್ಧನಿಯ ನಾಡಿಗರ ಪಾತ್ರಧಾರಿಯೊಬ್ಬನು "ನಾಡ ಬುಡುವುದೇ... ಭೂಪ, ನಾಡ ಬುಡುವುದೇ..." ಎಂದು ಹಾಡಿದ.

"ಏಯ್! ಬು ಅಲ್ಲ ಕಣೋ, ಬೀ ಕಣೋ" ಎಂದ ಪ್ರಾಂಪ್ಟರ್.

"ನಾಡು ಬುಡುವುದೇ, ಭೀಪಾ, ನಾಡ ಬುಡುವುದೇ" ಎಂದ ವಿರುಕಂಠ.

"ಅದಲ್ರೋ, ಮೊದಲ ಬು ಕಣೋ..."

"ನಾಡ ಬಿಡುವುದೇ ಭೀಪಾ ನಾಡ ಬಿಡುವುದೇ..."

"ಥೂ! ಇವನು ಸರಿಹೋಗಲ್ಲ ಕಣ್ರೋ... ವಾದ್ಯದ ಸದ್ದು ಏರಿಸ್ರೋ" ಎಂದ ಪ್ರಾಂಪ್ಟರ್.

ಖ್ಯಾತ ನಟ ಕಲಾಸಿಳ್ಳೆಯವರನ್ನು ಕುರಿತಾದ ಪ್ರಸಂಗವೊಂದಿದೆ. ಒಳ್ಳೆಯ ಸಂಗೀತಗಾರರಾಗಿದ್ದ ಅವರು ಹಾಡಿನ ಒಂದೇ ಸಾಲನ್ನು ವಿಸ್ತರಿಸಿ ಹಾಡುತ್ತಾ ಸಂಗೀತರಸಿಕರ ಮನವನ್ನು ಗೆಲ್ಲುವುದರಲ್ಲಿದ್ದರು. ಆದರೆ ಸಭೆಯಲ್ಲಿರುವ ಎಲ್ಲರಿಗೂ ಸಂಗೀತದ ಗಂಧವಿರಬೇಕೆಂಬ ನಿಯಮವಿಲ್ಲವಲ್ಲ, ಸಭಿಕರಲ್ಲೊಬ್ಬನು ಎದ್ದುನಿಂತು, "ಸ್ವಾಮಿ, ಕೆಲವೊಮ್ಮೆ ಮುಂದಿನ ಮಾತು ಮರೆತ್ಹೋಗೋದು ಸಹಜವೇ. ಪರವಾಯಿಲ್ಲ ಬಿಡಿ, ಪಕ್ಕದವನಿಗೆ ಮಾತಾಡಕ್ಹೇಳಿ, ಮುಂದಿನ ಮಾತುಗಳು ನೆನಪಿಗೆ ಬಂದಾವು" ಎಂದಿದ್ದ!

ಪೌರಾಣಿಕ ನಾಟಕಗಳಲ್ಲಿ ಆಧುನಿಕತೆಯ ಸುಳಿವು ತೂರಿ ನಗೆಯೆಬ್ಬಿಸುವ ಪ್ರಸಂಗಗಳು ಅನೇಕವಿವೆ. ಶ್ರೀ ಎಂ.ಎಸ್. ಅಶ್ವತ್ಥ್ ಬರೆದಿರುವ 'ಸೀ ಕಿಸ್ನ ಸಂದಾನ' ನಾಟಕವು ಇಂತಹ ಹಾಸ್ಯ ಪ್ರಸಂಗಗಳ ಮಾಲೆಯೇ ಆಗಿದೆ. ಇದೋ ಆ ನಾಟಕದ ಒಂದು ಸಣ್ಣ ಝಲಕ್:

"ಎಲೈ ಸೀ ಕಿಸ್ನ, ಮಾಯಾವಿ! ಪಾಂಡವರು ಮಾಂಸ ಮಾರ್ತಾರೆ; ಯುಧಿಷ್ಠಿರನು ಮಾಂಸ ಮಾರ್ತಾನೆ. ಭೀಮಸೇನನು ಮಾಂಸ ಮಾರ್ತಾನೆ; ಹರ್ಜುನನುಮಾಂಸಮಾರ್ತಾನೆ; ನಕುಲಸಹದೇವರುಮಾಂಸಮಾರ್ತಾರೆ" ಎಂದು ಅಬ್ಬರಿಸಿದ ದುರ್ಯೋಧನ ಪಾತ್ರಧಾರಿ.

"ಲೇ, ಪಾಂಡವರು ಯಾವಾಗ, ಎಲ್ಲಿ ಮಾಂಸದಂಗಡಿ ಇಟ್ಕೊಂಡಿದ್ರೋ?" ಹೈರಾಣಾದರು ನಾಟಕ ಕಲಿಸುವ ಮೇಷ್ಟ್ರು.

"ನೀವೇ ಏಳಿದ್ರಲ್ಲ ಮೇಸ್ಟ್ರೇ!"

"ಎಲ್ಲಿ, ಆ ಸ್ಕ್ರಿಪ್ಟ್ ತೊಗೊಂಡ್ಬಾ." ನಟನು ಸ್ಕ್ರಿಪ್ಟ್ ತಂದ, ಸಾಲುಗಳನ್ನು ತೋರಿಸಿದ. ಅದರಲ್ಲಿದ್ದ 'ಮಹಾ ಸಮರ್ಥರೆ..' ಇವನ ನಾಲಿಗೆಗೆ ಆಟಕಾಯಿಸಿಕೊಂಡು 'ಮಾಂಸ ಮಾರ್ತಾರೆ' ಎಂದಾಗಿತ್ತು.

ಇದೇ ನಾಟಕದಲ್ಲಿ ದ್ರೌಪದಿಯು "ಅರ್ಜುನ ನೀನು ಓಗು; ನಾನು ಹೊಳೆಗೆ ಓಗುತ್ತೀನಿ" ಎನ್ನುತ್ತಾಳೆ. ನಾಟಕದ ಮೇಷ್ಟ್ರು "ನೀನ್ಯಾಕಮ್ಮ ಹೊಳೆಗೆ ಹೋಗ್ಬೇಕು? ನೀನು ರಾಣಿ ಕಣಮ್ಮಾ, ದ್ರೌಪದಿ. ನೀನು ಹೋಗಬೇಕಾದ್ದು ಹೊಳೆಗೆ ಅಲ್ಲ, ಒಳಗೆ!" ಎಂದು ತಿದ್ದುತ್ತಾನೆ. ದುರ್ಯೋಧನನು 'ದುರ್ವೋದನ' ಆಗಿ, ದುಶ್ಶಾಸನನು 'ದುಶ್ಯಾಸನ' ಆಗಿ (ಆಗಾಗ್ಗೆ ಹೆಂಡ ಏರಿಸುವುದರಿಂದ ದುಶ್ಯಾಸನನೇ) ಶಕುನಿಯು 'ಸಕ್ನಿ'ಯಾಗಿ, ಇಡೀ ನಾಟಕವು ವಿನೋದಪೂರ್ಣವಾಗಿದೆ.

ವೇದಿಕೆಯ ಮೇಲೆ ಒಂದು ವಿಧದ ವಿನೋದ ಕಂಡರೆ ವೇದಿಕೆಯ ಹೊರಗೆ ಮತ್ತೊಂದು ರೀತಿಯ ವಿನೋದ ಕಂಡುಬರುತ್ತದೆ. 'ರಾಮಾಯಣ' ನಾಟಕವು ಆ ಹಳ್ಳಿಯಲ್ಲಿ ಹಲವಾರು ಪ್ರದರ್ಶನಗಳನ್ನು ಕಂಡಿತ್ತು. ಸೀತೆಯ ಪಾತ್ರಧಾರಿಯ ಅಭಿನಯಕ್ಕೆ ಸಭಿಕರು ಎಂಟು ಗೇಣು (ಮಾರು!) ಹೋಗಿದ್ದರು. ಮರುದಿನ ಪರದೆ ಏರಿಸುವುದಕ್ಕೆ ಮುಂಚೆ ನಟನಟಿಯರನ್ನೆಲ್ಲ ಒಗ್ಗೂಡಿಸಲು ನೋಡಿದಾಗ ಸೀತೆ ನಾಪತ್ತೆ! "ರಾವಣನೇ ಬರದೆ ಸೀತೆ ಎಲ್ಹೋದ್ಲೋ?" ಕಂಪನಿಯ ಯಜಮಾನರು ಕಕ್ಕಾಬಿಕ್ಕಿಯಾಗಿದ್ದರು.

"ಹನುಮಂತನೂ ಕಾಣ್ತಿಲ್ಲ, ನನ್ನೊಡೆಯ" ಬಿನ್ನವಿಸಿದ ಯಜಮಾನರ ಆಪ್ತ. ವಿಚಾರಿಸಿದಾಗ ತಿಳಿದ ಅಂಶವೆಂದರೆ ಸೀತೆಗೆ ಚೂಡಾಮಣಿಯನ್ನು ಕೊಡುವದನ್ನು ನೆಪದಲ್ಲಿ ದಿನವೂ ಹನುಮನ ಪಾತ್ರಧಾರಿಯು ಪ್ರೇಮಮಯ ನೋಟವನ್ನು ಬೀರುತ್ತಿದ್ದನಂತೆ, ಕೆಲವು ಪಿಸುಗುಡಿಗಳನ್ನೂ ಆಡುತ್ತಿದ್ದನಂತೆ. ಸೀತೆಯ ಪಾತ್ರಧಾರಿಯೂ ಅದಕ್ಕೆ ಸ್ಪಂದಿಸಿದ ಕಾರಣ ರಾವಣನಿಗೆ ಚಾನ್ಸೇ ಕೊಡದೆ ಹನುಮನೇ ಸೀತೆಯನ್ನು ಹಾರಿಸಿಕೊಂಡು ಹೋಗಿದ್ದ!

ಸೀತೂ ಕಂಪನಿ ಪ್ರಸಿದ್ಧಿಯ ಉತ್ತುಂಗದಲ್ಲಿದ್ದ ಸಮಯ. ಕಂಪನಿಯ ನಾಟಕಗಳಲ್ಲಿ ಜನಮನವನ್ನು ಹೆಚ್ಚಾಗಿ ಆಕರ್ಷಿಸುತ್ತಿದ್ದುದು ಸ್ತ್ರೀಪಾತ್ರಗಳೇ. ಸುಂದರಿಯರಿರಲ್ ರಾತಿರ್ ದೂರವಿರ್ಪರೇ! ಊರಿನ ಧನಿಕನೊಬ್ಬನಿಗೆ ಪಾತ್ರಧಾರಿಯೊಬ್ಬಳ ಮೇಲೆ ಮನಸ್ಸಾಯಿತು. ಧನಿಕನು, "ಎಷ್ಟೇ ಖರ್ಚಾದ್ರೂ ಸರಿ, ಆ ಹುಡುಗಿ ನನಗೆ ಬೇಕು" ಎಂದು ಕಂಪನಿಯ ಮುಖ್ಯಸ್ಥರ ಬೆನ್ನುಬಿದ್ದ. "ಅವಳು ಯಾರನ್ನೂ ಭೇಟಿ ಮಾಡಲ್ಲ ಅಂತಾಳೆ" ಎಂದರು ಕಂಪನಿಯವರು.

"ಕೇಳಿದಷ್ಟು ಕೊಡ್ತೀನಿ!" ಎಂದ ಸಾಹುಕಾರನನ್ನು ಗ್ರೀನ್‌ರೂಮಿನಿಂದ ದೂರ ಇರಿಸುವುದೇ ಹರಸಾಹಸವಾಯಿತು. ಕಡೆಗೂ ಒಂದು ದಿನ ಆ ರೂಪಸಿಯನ್ನು ಸಿರಿವಂತನ ಬಳಿಗೆ ಮಾಲೀಕರು ಕರೆದುಕೊಂಡು ಬಂದೇಬಿಟ್ಟರು.

"ಹುಡುಗೀನ್ನ ಕರ್ಕೊಂಬರ್ತೀನಿಂತ ಪಂಚೆ ಶಲ್ಯದ ಆಸಾಮೀನ ಕರ್ಕೊಂಬಂದ್ರಲ್ಲ!" How ಹಾರಿದರು ಸಾಹುಕಾರರು.

"ಕ್ಷಮಿಸಿ ಸಾಹುಕಾರ್ರೇ. ಹುಡುಗಿಯ ಪಾತ್ರದವನು ಹುಡುಗ ಅಂತ ಗೊತ್ತಾದ್ರೆ ಕಲೆಕ್ಷನ್ ಡೌನ್ ಆಗ್ತೇಂತ ನಿಮ್ಮಿಂದ ವಿಷಯ ಮುಚ್ಚಿಟ್ಟು ಇಷ್ಟು ದಿನ ತಳ್ಳಿದೆ" ರಹಸ್ಯ ಹೊರಗೆಡವಿದರು ಕಂಪನಿಯವರು. ಸೀತೂ ಕಂಪನಿಯ ಸೀತೂವಿನ ಬೆಡಗು, ಬಿನ್ನಾಣ ಸ್ತ್ರೀಯರನ್ನೂ ನಾಚಿಸುವಂತಿದ್ದವು. ಸೀತೂ ಸೀರೆಯ ನೆರಿಗೆಯನ್ನು ಚಿಮ್ಮಿಸಿಕೊಂಡು ನಡೆಯುವ ರೀತಿಯನ್ನು ಕಲಿಯಲೆಂದೇ ಅನೇಕ ಹೆಂಗಳೆಯರು ಅವರ ಬಳಿ ಬರುತ್ತಿದ್ದರಂತೆ.

ರಂಗನಾಟಕಗಳನ್ನು ಆಕಾಶವಾಣಿಯಲ್ಲಿಯೂ ಬಿತ್ತರಿಸಲು ಅನುಕೂಲವಾಗುವಂತೆ ರೇಡಿಯೋ ನಾಟಕಗಳ ಶಕೆ ಆರಂಭವಾಯಿತು. ಧಾರವಾಡ ಆಕಾಶವಾಣಿಯಲ್ಲಿ ಡಾ. ಎಚ್.ಕೆ.ರಂಗನಾಥ್ ಮತ್ತು ಖ್ಯಾತ ನಟಿ ಯಮುನಾ ಮೂರ್ತಿಯವರು ಅಸಂಖ್ಯಾತ ನಾಟಕ ಪ್ರಯೋಗಗಳನ್ನು ಕೈಗೊಂಡು ಯಶಸ್ವಿಯಾದವರು. ಹಾಗೊಂದು ನಾಟಕದ ಸನ್ನಿವೇಶ. ಡೈಲಾಗುಗಳನ್ನು ಹಾಳೆಗಳಲ್ಲಿ ಬರೆದುಕೊಂಡು ಓದುತ್ತಾ, ಆ ಹಾಳೆಯ ಡೈಲಾಗ್ ಮುಗಿದಾಕ್ಷಣ ಸದ್ದಾಗದಂತೆ ಹಾಳೆಯನ್ನು ಜಾರಿಸಿ ಮುಂದಿನ ಹಾಳೆಗೆ ಹೋಗುವುದು ಅಂದಿನ ಕ್ರಮ. ನಾಟಕದ ಒಂದು ಹಂತದಲ್ಲಿ "ಮಗು ಕಾಣ್ತಿಲ್ಲಂತೆ" ಎಂಬ ಮಾತು; ಅದಕ್ಕೆ ಯಮುನಾಮೂರ್ತಿಯವರ ಸ್ಪಂದನ ಇದ್ದಿತು. ಆದರೆ '...ಕಾಣ್ತಿಲ್ಲಂತೆ' ಎನ್ನುವ ಸಮಯಕ್ಕೆ ಸರಿಯಾಗಿ ಯಮುನಾಮೂರ್ತಿಯವರ ಕೈಯಲ್ಲಿದ್ದ ಹಾಳೆಗಳು ಜಾರಿ, ಕ್ರಮವಿಹೀನವಾಗಿ ನೆಲದ ಮೇಲೆ ಹರಡಿಕೊಂಡವು. ಹಾಳೆಗಳನ್ನು ಸದ್ದಿಲ್ಲದೆ ಎತ್ತಿ, ಕ್ರಮದಲ್ಲಿ ಜೋಡಿಸಿಕೊಂಡು ಮುಂದಿನ ಡೈಲಾಗ್‌ಗೆ ಗ್ರೆಸ್ತಿಕೊಳ್ಳಬೇಕಾಗಿತ್ತು. ಅಲ್ಲಿಯವರೆಗೂ ಪ್ರಸಾರದಲ್ಲಿ ನಿಶ್ಶಬ್ದವಿರಲು ಸಾಧ್ಯವಿಲ್ಲವಲ್ಲ! ಹಾಳೆಗಳನ್ನು ಹೆಕ್ಕಿ ಜೋಡಿಸುವವರೆಗೆ ಯಮುನಾಮೂರ್ತಿಯವರು "ಅಯ್ಯೋ! ಆ ಮಗುವಿನ ತಾಯಿ ಎಷ್ಟು ಅಳ್ತಿದ್ದಾಳೋ; ಭಗವಂತಾ! ಯಾಕಪ್ಪಾ ಇಂತಹ ಪರಿಸ್ಥಿತಿ ತಂದಿಟ್ಟೆ..." ಮುಂತಾದ ಗೋಳುಪದಗಳನ್ನಾಡುತ್ತಾ ಪರಿಸ್ಥಿತಿಯನ್ನು ನಿಭಾಯಿಸಿದ್ದರು.

ರಂಗನಾಥರು ಅಭಿನಯಿಸುತ್ತಿದ್ದ ಪ್ರಸಂಗವೊಂದರಲ್ಲಿ ಸಹನಟಿಯು "ಹೊರಡೋಣವೇ ಪ್ರಾಣನಾಥ" ಎನ್ನಬೇಕಿತ್ತು, ಅದಕ್ಕುತ್ತರವಾಗಿ ಇವರು "ನಡೆ ಪ್ರಾಣಪ್ರಿಯೆ" ಎನ್ನಬೇಕಿತ್ತು. ನಟಿಯ ಬಾಯಲ್ಲಿ ಹೊರಡುತ್ತಿದ್ದ 'ನಾತ'ವನ್ನು 'ನಾಥ'ಕ್ಕೆ ತರಿಸಲು ಬಹಳವೇ ಪ್ರಯತ್ನಗಳಾದವು. ಕಡೆಗೊಮ್ಮೆ 'ನಾಥ' ಎಂದಾಗ, 'ಸರಿ, ಲೈವ್ ಹೋಗೋಣ' ಎಂದು ಮುಂದಾದರು. ಆದರೆ ಲೈವ್‌ನಲ್ಲಿ ಮತ್ತೆ 'ಹೊರಡೋಣವೇ ಪ್ರಾಣನಾತ' ಎಂದಳು ನಟಿ.

ರೋಸಿಹೋದ ರಂಗನಾಥರು, "ನಡೆ ಅಲ್ಪಪ್ರಾಣಪ್ರಿಯೆ" ಎಂದರು!

ನಟನೆಗೆ ಉಚ್ಚಾರ, ಮುಖಭಾವಗಳೇ ಜೀವಾಳ. ರೇಡಿಯೋದಲ್ಲಂತೂ ಧ್ವನಿಯ ಏರಿಳಿತಗಳು, ಸ್ಪಷ್ಟ ಉಚ್ಚಾರಗಳೇ ಭಾವವಾಹಕಗಳು. ಅಂತಿರುವಾಗ 'ಮುಂದಿನ ಕಾರ್ಯಕ್ರಮ ಗೌತಮಬುದ್ಧ' ಎನ್ನಬೇಕಾದವನು 'ಮುಂದಿನ ಕಾರ್ಯಕ್ರಮ ಭೌತಮ ಗುದ್ಧ' ಎಂದಿದ್ದ!

ಕಾವ್ಯೇಷು ನಾಟಕಂ ರಮ್ಯಂ. ಇಂತಹ ಪ್ರಸಂಗಗಳು ವೇದಿಕೆಯ ಮೇಲೂ, ವೇದಿಕೆಯಿಂದ ಹೊರಗೂ ಜನರಿಗೆ ಆಪ್ಯಾಯಮಾನವಾಗುತ್ತವೆ. ನಾಟಕ ಗೆಲ್ಲೆ; ವಿನೋದಮುಖಿ ಗೆಲ್ಲೆ; ವಿನೋದನಾಟಕಂ ಗೆಲ್ಗೆ, ಬಾಳ್ಗೆ.

ಮಹಿಳಾ ಪರ ಹೋರಾಟಗಳಲ್ಲಿ ಭಾರತೀಯ ದೃಷ್ಟಿಕೋನವಿರಲಿ

▸ ದಿವಾಕರ ಹನಕೋಡು

> ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಮಹಿಳೆಯರಿಗೆ ಶ್ರೇಷ್ಠವಾದ ಸ್ಥಾನ ನೀಡಲಾಗಿದೆ.

ಲೇಖಕಿ ಭಾನು ಮುಷ್ತಾಕ್‌ರವರು "ಕನ್ನಡ ಭಾಷೆಯನ್ನು ಕನ್ನಡ ಭುವನೇಶ್ವರಿಯೆಂದು ಮಂದಾಸನದಲ್ಲಿ ಕೂರಿಸಿ ಪೂಜಿಸುತ್ತೀರಿ. ಮತ್ತೊಂದೆಡೆ ಮಹಿಳೆಯರನ್ನು ಶೋಷಣೆ ಮಾಡುತ್ತೀರಿ. ಕನ್ನಡ ಭಾಷೆಯ ವಿಷಯಕ್ಕೆ ಬಂದಾಗ ಒಬ್ಬ ಮುಸ್ಲಿಂ ಮಹಿಳೆಯಾದ ನಾನು ಎಲ್ಲಿ ನಿಲ್ಲಬೇಕೆಂದು ಗೊತ್ತಾಗುತ್ತಿಲ್ಲ" ಎಂದು ಈ ಹಿಂದೆ ಹೇಳಿಕೆ ನೀಡಿದ್ದರು.

ಮಹಿಳೆಯರನ್ನು ಪೂಜಿಸುವುದರ ಮೂಲಕ, ಅವಳನ್ನು ಆರಾಧಿಸುವ ಮೂಲಕ ಅವಳ ಶೋಷಣೆ ನಡೆಯುತ್ತಿದೆ. ಅವಳನ್ನು ತಮಗೆ ಸಮಾನಳೆಂಬಂತೆ ನಡೆಸಿಕೊಳ್ಳುವುದಿಲ್ಲ, ಒಂದೋ ದೇವಿ, ತಾಯಿಯೆಂಬಂತೆ ನೋಡುತ್ತಾರೆ. ಇಲ್ಲವೇ ದಾಸಿಯಂತೆ ನಡೆಸಿಕೊಳ್ಳುತ್ತಾರೆ ಎಂಬುದು ಪಾಶ್ಚಿಮಾತ್ಯರ ದೃಷ್ಟಿಯಲ್ಲಿ ಯೋಚಿಸುವ ಬಹಳ ಮಂದಿ ಸ್ತ್ರೀವಾದಿಗಳ ವಾದ.

ಆದರೆ ಹೆಣ್ಣನ್ನು ದೇವಿಯಾಗಿ, ತಾಯಿಯಾಗಿ ನೋಡಿದವನು ಹೆಣ್ಣನ್ನು ಕೀಳಾಗಿ ಕಾಣಲು ಸಾಧ್ಯವೇ?! ಶಕ್ತಿಸ್ವರೂಪಿಣಿಯ ರೂಪದಲ್ಲಿ, ಮಾತೃಸ್ವರೂಪಿಣಿಯ ರೂಪದಲ್ಲಿ ಪದೇ ಪದೇ ನೋಡುತ್ತಾ, ಆರಾಧಿಸುತ್ತಾ ಬಂದವರಿಗೆ ಹೆಣ್ಣನ್ನು ಕಂಡಾಗ ಗೌರವದ, ಆದರದ ಭಾವನೆಗಳೇ ಮೊದಲು ಬರುವುದು ಸಹಜ.

ಭಾರತೀಯ ಸಂಸ್ಕೃತಿಯಲ್ಲಿ ಭೂಮಿತಾಯಿಯಿಂದ ನದಿಯವರೆಗೆ ಯಾವೆಲ್ಲಾ ಪ್ರಾಕೃತಿಕ ಶಕ್ತಿಗಳು ನಮ್ಮನ್ನು ಪೊರೆಯುತ್ತಿದೆಯೋ ಅವುಗಳೆಲ್ಲವನ್ನೂ ಹೆಣ್ಣಿನ ರೂಪದಲ್ಲಿ, ತಾಯಿಯ ರೂಪದಲ್ಲಿ ನೋಡುವ ದೃಷ್ಟಿ ಜನಮಾನಸದಲ್ಲಿ ತುಂಬಾ ಆಳವಾಗಿ ಬೇರೂರಿದೆ.

ಸ್ತ್ರೀವಾದಿಗಳು ಒಮ್ಮೆ 'ದ್ರೌಪದಿ ಪ್ರತಾಪ' ಎಂಬ ಯಕ್ಷಗಾನ ಪ್ರಸಂಗವನ್ನು ನೋಡಬೇಕು. ಇದು ಮೂಲ ಮಹಾಭಾರತದಲ್ಲಿ ಇಲ್ಲದ ಒಂದು ಕಾಲ್ಪನಿಕ ಕಥೆಯಾದರೂ ತುಂಬಾ ಸೊಗಸಾಗಿದೆ. ಇದರಲ್ಲಿ... ಕುರುಕ್ಷೇತ್ರ ಯುದ್ಧಾನಂತರ ಯುದ್ಧವನ್ನು ಗೆದ್ದ ಶ್ರೇಯಸ್ಸು ಯಾರಿಗೆ ಸಲ್ಲಬೇಕು ಎಂಬ ಚರ್ಚೆ ಪಾಂಡವ ಪಾಳೆಯದಲ್ಲಿ ನಡೆಯುತ್ತದೆ. ಈ ವಿಷಯವಾಗಿ ಭೀಮಾರ್ಜುನರಲ್ಲಿ ಜಗಳ ನಡೆದು ಅವರಿಬ್ಬರ ಮಧ್ಯೆ ಕಾಳಗವೇ ನಡೆದು ಬಿಡುತ್ತದೆ! ತಮ್ಮನೆಂಬ ವಾತ್ಸಲ್ಯ ಭಾವದಿಂದ ಅರ್ಜುನನೊಡನೆ ಕಠಿಣವಾಗಿ ಹೋರಾಡಲು ಭೀಮನಿಗೆ ಸಾಧ್ಯವಾಗದ ಕಾರಣ ಆತ ಸೋಲುತ್ತಾನೆ. ತನ್ನ ಸೋಲಿನ ನಂತರ ತುಂಬಾ ಯೋಚಿಸಿದ ಭೀಮನು ಮಡದಿ ದ್ರೌಪದಿಯನ್ನು ಅರ್ಜುನನ ವಿರುದ್ಧ ಯುದ್ಧಕ್ಕೆ ಕಳಿಸುತ್ತಾನೆ. (ಒಂದೊಂದು ವರ್ಷ ಒಬ್ಬೊಬ್ಬರ ಬಳಿ ದ್ರೌಪದಿ ಇರುವಂತೆ ಪಾಂಡವರು ತಮ್ಮಲ್ಲಿ ಮಾಡಿಕೊಂಡ ಒಪ್ಪಂದದ ಪ್ರಕಾರ ಆ ವರ್ಷ ದ್ರೌಪದಿಯು ಭೀಮಸೇನನ ಜೊತೆ ಇರುತ್ತಾಳೆ) ಅರ್ಜುನ ದ್ರೌಪದಿಯರ ಮಧ್ಯೆ ನಡೆದ ಯುದ್ಧದಲ್ಲಿ ದ್ರೌಪದಿ ಗೆಲ್ಲುತ್ತಾಳೆ!

ಆಗ ಅರ್ಜುನನ ಸೋಲಿನಿಂದ ನೊಂದ ಸುಭದ್ರೆಯು ದ್ರೌಪದಿಯ ಮೇಲೆ ಯುದ್ಧಕ್ಕೆ ಬಂದು ಸೋಲುತ್ತಾಳೆ. ತಂಗಿಯ ಸಹಾಯಕ್ಕೆ ಬಂದ ಶ್ರೀ ಕೃಷ್ಣನು ದ್ರೌಪದಿಯ ಜೊತೆ ಯುದ್ಧ ಮಾಡಲು ತೊಡಗುತ್ತಾನೆ. ಆ ಕಾಳಗದಲ್ಲಿಯೂ ದ್ರೌಪದಿಗೇ ಗೆಲುವಾಗುತ್ತದೆ!! ಕೃಷ್ಣನು ತನ್ನ ಆಶ್ಚರ್ಯದಂತಿರುವ ಮಹಾಶಿವನನ್ನು ಪ್ರಾರ್ಥಿಸಲು ಪರಶಿವನೇ ಸಮರಕ್ಕೆ, ಯುದ್ಧಕ್ಕೆ ಬಂದು ಹೋರಾಡಿದರೂ ಆ ಕಾಳಗದಲ್ಲಿಯೂ ದ್ರೌಪದಿಯೇ ಗೆಲ್ಲುತ್ತಾಳೆ!! ಇದರ ಪರಿಣಾಮವಾಗಿ ಪಾರ್ವತಿಯು ಮಹಾಕಾಳಿಯ ರೂಪದಲ್ಲಿ ರಣಾಂಗಣಕ್ಕೆ ಬರುತ್ತಾಳೆ. ಮಹಾಕಾಳಿ ಮತ್ತು ದ್ರೌಪದಿಯರ ಯುದ್ಧವನ್ನು ಶ್ರೀಕೃಷ್ಣ ಮತ್ತು ನಾರದರು ಬಂದು ತಡೆಯುತ್ತಾರೆ.

ದ್ರೌಪದಿಯಲ್ಲಿದ್ದ ಮಹಾಶಕ್ತಿಯ ಅಂಶವನ್ನು ಮಹಾಕಾಳಿಯು ತನ್ನತ್ತ ಸೆಳೆದುಕೊಳ್ಳುವಂತೆ ಶ್ರೀಕೃಷ್ಣನು ಸೂಚಿಸಿದಾಗ ಪಾಂಡವ ಪಕ್ಷಕ್ಕೆ ಶಕ್ತಿ ತುಂಬಲು ಪಾಂಚಾಲಿಯಲ್ಲಿ ಸನ್ನಿವಿಷ್ಟವಾಗಿದ್ದ ಮಹಾಕಾಳಿಯ ಶಕ್ತಿ ಮರಳಿ ತನ್ನ ಮೂಲಸ್ಥಾನವಾದ ಪಾರ್ವತಿಯನ್ನು ಸೇರುವ ಮೂಲಕ ಕಥೆ ಸುಖಾಂತ್ಯವಾಗುತ್ತದೆ. ಈ ಪ್ರಸಂಗದ ಸೂತ್ರಧಾರನಾದ ಶ್ರೀಕೃಷ್ಣನು ಪಾಂಡವರು ಗೆಲ್ಲುವುದಕ್ಕೆ ಮುಖ್ಯ ಕಾರಣ ದ್ರೌಪದಿಯಲ್ಲಿದ್ದ ಮಹಾಶಕ್ತಿಯ ಅಂಶ ಎಂದು ಸಾರುವುದರೊಂದಿಗೆ ಪ್ರಸಂಗ ಮುಕ್ತಾಯವಾಗುತ್ತದೆ. ಸ್ತ್ರೀಪರವಾದ ಭಾಷಣ ಎಂದಾಕ್ಷಣ ಸೀತೆಯನ್ನು ಕಾಡಿಗಟ್ಟಿದ ಕಥೆಯನ್ನೋ, ಮನುಸ್ಮೃತಿಯ ಒಂದು ಸಾಲನ್ನೋ ಮತ್ತೆ ಮತ್ತೆ ಚರ್ವಿತಚರ್ವಣ ಎನ್ನುವಂತೆ ಭಾಷಣ ಮಾಡುವ ಎಲ್ಲರೂ ಒಮ್ಮೆ ಮಹಾಭಾರತದ ದ್ರೌಪದಿಯಂತಹ ದಿಟ್ಟ ಮಹಿಳೆಯ ಬಗೆಗೂ ಮುಕ್ತ ಮನಸ್ಸಿನಿಂದ ವಿಚಾರ ಮಾಡಿ ನೋಡಬೇಕು. ನಮ್ಮ ಜನಪದ ಲೋಕದಲ್ಲಿ ಬರುವ ಇಂತಹ ಕತೆಗಳನ್ನು ತಿಳಿದುಕೊಳ್ಳಬೇಕು.

ರಾಮಾಯಣದಲ್ಲಿ ದಶರಥನು ಯುದ್ಧಕ್ಕೆ ಹೋಗುವಾಗ ತನ್ನ ಕಿರಿಯ ಪತ್ನಿಯಾದ ಕೈಕೇಯಿಯನ್ನೂ ಕರೆದುಕೊಂಡು ಹೋಗುತ್ತಾನೆ. ಯುದ್ಧದಲ್ಲಿ ಸಹಾಯ ಮಾಡಿದಳೆಂದು ಆಕೆಗೆ ವರವನ್ನೂ ಕೊಡುವುದರಿಂದಲೇ ರಾಮಾಯಣದ ಕಥೆಗೆ ಮುಖ್ಯವಾದ ತಿರುವು ಸಿಕ್ಕಿತಲ್ಲವೇ!!

ನರಕಾಸುರನ ಜತೆ ಯುದ್ಧ ಮಾಡುವಾಗ ಕೃಷ್ಣನೊಂದಿಗೆ ಪತ್ನಿ ಸತ್ಯಭಾಮೆಯೂ ರಣರಂಗಕ್ಕೆ ಬಂದಿರುತ್ತಾಳೆ. ಯುದ್ಧದ ಮಧ್ಯದಲ್ಲಿ ಕೃಷ್ಣನು ಬಳಲಿರುವಾಗ ಸತ್ಯಭಾಮೆಯು ಅಸುರನೊಡನೆ ಯುದ್ಧವನ್ನು ಮುಂದುವರಿಸಿ ಕೃಷ್ಣನಿಗೆ ಬೇಕಾಗಿದ್ದ ವಿಶ್ರಾಂತಿಯನ್ನು ಒದಗಿಸುತ್ತಾಳೆ.

ಭೂಮಿ ಆದಿಪರಾಶಕ್ತಿಯಿಂದ ಸೃಷ್ಟಿಸಲ್ಪಟ್ಟಿರುತ್ತದೆ. ಲೋಕದ ಸಮರ್ಥ ನಿರ್ವಹಣೆಗಾಗಿ ಆಕೆಯೇ ತ್ರಿಮೂರ್ತಿಗಳನ್ನು ಸೃಷ್ಟಿಸಿ ಕರ್ತವ್ಯಗಳನ್ನು ಹಂಚಿರುತ್ತಾಳೆ.

ಪ್ರತಿಬಾರಿ ರಾಕ್ಷಸರಿಂದ ವಿಪತ್ತು ಬಂದಾಗಲೆಲ್ಲಾ ಆದಿಪರಾಶಕ್ತಿಯು ಖಳ ರಕ್ಕಸರನ್ನು ಸಂಹರಿಸಿ ಲೋಕವನ್ನು ಕಾಪಾಡುತ್ತಾಳೆ. ಬ್ರಹ್ಮ, ವಿಷ್ಣು, ರುದ್ರ, ಇಂದ್ರಾದಿ ದೇವತೆಗಳೆಲ್ಲಾ ಸೋತು ಕೈಚೆಲ್ಲಿದಾಗ ಮಹಾದುರ್ಗೆಯು ದುಷ್ಟ ರಾಕ್ಷಸರನ್ನು ಸಂಹರಿಸಿ ಲೋಕವನ್ನು ಕಾಪಾಡುತ್ತಾಳೆ.

ಭಾರತದ ಪುರಾಣಗಳಲ್ಲಿ, ಸಂಸ್ಕೃತಿಯಲ್ಲಿ, ನಾಗರಿಕತೆಯಲ್ಲಿ ಮಹಿಳೆಯನ್ನು ಯಾವ ರೀತಿ ಪೂಜನೀಯ ಸ್ಥಾನದಲ್ಲಿ ಇಟ್ಟಿದ್ದಾರೆ ಎಂಬುದನ್ನು ಎಲ್ಲರೂ ತಿಳಿಯಬೇಕಾದ ಅವಶ್ಯಕತೆ ಇದೆ. ಯಾವೆಲ್ಲಾ ಶ್ರೇಷ್ಠ ಸಂಗತಿಗಳಿವೆಯೋ ಅವೆಲ್ಲವನ್ನೂ ಸ್ತ್ರೀರೂಪದಲ್ಲಿ ಕಂಡು ಗೌರವಿಸುವ ಗುಣ ಭಾರತೀಯರಲ್ಲಿದೆ.

ಐಶ್ವರ್ಯಕ್ಕೆ ಸಂಬಂಧಪಟ್ಟ ಹಣ, ಭೂಮಿ, ಸಂಪತ್ತು, ಧಾನ್ಯ, ವಾಹನ, ಗೋಸಂಪತ್ತು ಎಲ್ಲವನ್ನೂ ಲಕ್ಷ್ಮೀ ಎಂದು ಪೂಜಿಸುತ್ತಾರೆ. ಎಲ್ಲಾ ವಿದ್ಯೆ-ಕಲೆಗಳನ್ನೂ ಸರಸ್ವತಿಯ ರೂಪದಲ್ಲಿ ಕಂಡು ಆರಾಧಿಸುತ್ತಾರೆ.

ಶಕ್ತಿಯ ರೂಪದಲ್ಲಿರುವ ಎಲ್ಲವನ್ನೂ ಮಹಾಶಕ್ತಿ, ಮಹಾಕಾಳಿಯ ರೂಪದಲ್ಲಿ ಕಂಡು ನಮಿಸುತ್ತೇವೆ. ಕವಿ ಬಂಕಿಮಚಂದ್ರರು ಭಾರತಮಾತೆಯನ್ನು ವರ್ಣಿಸುವಾಗ ಹೇಳಿದ್ದಾರೆ,

ಕೇ ಬಲಾ ಮಾತಾಮಿ ಅಬಲಾ
ಬಹುಬಲಧಾರಿಣಿ, ರಿಪುದಲವಾರಿಣಿ

(ನಿನ್ನನ್ನು ಅಬಲೆಯೆಂದು ಕರೆದವರ್ಯಾರು?! ನೀನು ಅಬಲೆಯಲ್ಲ, ಮಹಾಬಲಶಾಲಿ, ಶತ್ರುಗಳನ್ನು ನಾಶಮಾಡುವ ಶಕ್ತಿಶಾಲಿನಿ) ಎಂದು ವರ್ಣಿಸಿದ್ದಾರೆ.

ರಾಮಾಯಣದಲ್ಲಿ ರಾಮನ ಅಶ್ವಮೇಧದ ಕುದುರೆಯನ್ನು ಮಾಯಾಪುರಿ ಎಂಬ ಸ್ತ್ರೀರಾಜ್ಯದ ಯೋಧೆಯರು ಕಟ್ಟಿ ರಾಮನ ಸೈನ್ಯದೊಡನೆ ಕಾದಾಡಿದ ಕಥೆಯನ್ನು ನೋಡಿದರೆ ಮಹಾಭಾರತದಲ್ಲಿ ಪಾಂಡವರ ಅಶ್ವಮೇಧದ ಕುದುರೆಯನ್ನು ಕಟ್ಟಿ ಅರ್ಜುನನೊಡನೆ ಯುದ್ಧ ಮಾಡಿದ ಸ್ತ್ರೀರಾಜ್ಯದ ರಾಣಿ ಪ್ರಮೀಳೆಯ ಪ್ರಸಂಗವನ್ನು ನಾವು ಕಾಣುತ್ತೇವೆ.

ಪ್ರಸಿದ್ಧ ಮಧುರೆಯ ಮೀನಾಕ್ಷಿ ದೇಗುಲದ ಸ್ಥಳ ಪುರಾಣದ ಪ್ರಕಾರ ಪಾಂಡ್ಯರ ರಾಜಕುಮಾರಿ ಮೀನಾಕ್ಷಿಯು ಭೂಲೋಕದ ಎಲ್ಲಾ ರಾಜರುಗಳನ್ನು ಯುದ್ಧದಲ್ಲಿ ಗೆದ್ದು ಸ್ವರ್ಗಲೋಕಕ್ಕೆ ದಾಳಿ ಮಾಡುತ್ತಾಳೆ. ಇಂದ್ರನನ್ನೂ ಯುದ್ಧದಲ್ಲಿ ಸೋಲಿಸುತ್ತಾಳೆ. ಕೊನೆಗೆ ಪರಶಿವನನ್ನೇ ವರಿಸುತ್ತಾಳೆ.

ಶ್ರೀ ಶ್ರೀ ಶಂಕರಾಚಾರ್ಯರಿಗೂ ಮಂಡನ ಮಿಶ್ರರಿಗೂ ವೇದಾಂತದ ವಿಚಾರವಾಗಿ ವಾಗ್ವಾದ ನಡೆಯುವಾಗ ಇಬ್ಬರಲ್ಲಿ ಜಯಶಾಲಿ ಯಾರು ಆಗುವರೆಂದು ತೀರ್ಮಾನಿಸಲು ತೀರ್ಮಾನಗಾರರು ಒಬ್ಬರು ಬೇಕಾಗುತ್ತದೆ. ಆಗ ಯತಿವರೇಣ್ಯರು ಮಂಡನ ಮಿಶ್ರರ ಪತ್ನಿ ಉಭಯ ಭಾರತೀ ದೇವಿಯವರೇ ತೀರ್ಮಾನಗಾರರಾಗಲಿ ಎಂದು ಹೇಳುತ್ತಾರೆ!! ಹೀಗೆ ಅನೇಕ ಸಂದರ್ಭಗಳಲ್ಲಿ ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಮಹಿಳೆಯರಿಗೆ ಶ್ರೇಷ್ಠವಾದ ಸ್ಥಾನವನ್ನೇ ನೀಡಲಾಗಿದೆ.

ಕೆಲವು ವರ್ಷಗಳ ಹಿಂದೆ ನಮ್ಮ ಊರಿನಲ್ಲಿ ಧಾರ್ಮಿಕ ಆಚರಣೆಗಳ ಕುರಿತ ಸಂವಾದ ಕಾರ್ಯಕ್ರಮವೊಂದು ನಡೆಯಿತು. ರಜಸ್ವಲೆಯಾದ ಮಹಿಳೆ ಹೊರಗೆ ಕೂರಬೇಕೆ? ಬೇಡವೇ? ಎಂಬ ಬಗ್ಗೆ ಚರ್ಚೆ ನಡೆದಾಗ ಹೆಚ್ಚಿನ ಮಹಿಳೆಯರು ಅವಳಿಗೆ ಮುಟ್ಟಿನ ಮೂರು ದಿನಗಳ ಕಾಲ ಮೈಲಿಗೆಯ ನೆಪದಲ್ಲಿ ವಿಶ್ರಾಂತಿ ನೀಡುವುದು ಸರಿಯಾದ ಕ್ರಮ ಎಂದು ಹೇಳಿದರು. ಆ ಸಮಯದಲ್ಲಿ ಗಂಡಂದಿರು ಅಡಿಗೆ ಮಾಡಲಿ, ಅಡಿಗೆ ಮನೆಯ ಅನುಭವ, ಸಂಕಷ್ಟಗಳ ಪರಿಚಯ ಅವರಿಗೂ ಆಗಲಿ, ನಮಗೂ ವಿಶ್ರಾಂತಿಯ ಕೆಲಸ ಕಾರ್ಯಗಳಿಂದ ಬಿಡುವು ಸಿಗುತ್ತದೆ ಎಂದು ಅಭಿಪ್ರಾಯಪಟ್ಟರು. ಇಲ್ಲಿ ಅನೇಕ ಆಚರಣೆಗಳ ಬಗ್ಗೆ ಸಂವಾದ ನಡೆಯುವಾಗ ಗಂಡ ಮಾಡಿದ ಧಾರ್ಮಿಕ ಆಚರಣೆಗಳಿಂದ ಬರುವ ಪುಣ್ಯದಲ್ಲಿ (ಹೆಂಡತಿಯು ಭಾಗವಹಿಸಲಿ ಅಥವಾ ಭಾಗವಹಿಸದಿರಲಿ) ಹೆಂಡತಿಗೆ ಅರ್ಧಪಾಲು ಸಿಗುತ್ತದೆ ಎಂದು ತುಂಬಾ ಖುಷಿಯಿಂದ ಹೇಳಿಕೊಂಡ ಗೃಹಿಣಿಯರನ್ನು ನಾವು ಕಂಡೆವು.

ಇದೆಲ್ಲವನ್ನೂ ವಿಮರ್ಶಿಸುವಾಗ ಭಾರತೀಯ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಪಾಶ್ಚಿಮಾತ್ಯ ದೃಷ್ಟಿಕೋನದಿಂದ ನೋಡಿ ಟೀಕೆ, ಟಿಪ್ಪಣಿ ಮಾಡುವುದು ಸರಿಯಲ್ಲ ಎಂದು ತಿಳಿಯುತ್ತದೆ. ಭಾರತೀಯ ನಾರಿ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ, ಅವಳ ಹೋರಾಟದ ಬಗ್ಗೆ ನಾವು ಭಾರತೀಯ ದೃಷ್ಟಿಕೋನದಿಂದಲೇ ನೋಡಿ ವಿಮರ್ಶಿಸಬೇಕಾದದ್ದು ಇಂದು ತುಂಬಾ ಅಗತ್ಯವಾಗಿದೆ.

ಬಡ್ಡಿ ಮನ್ನಾ: ಆರ್ಥಿಕ ಶಿಸ್ತು ತಪ್ಪದಿರಲಿ



ಪತ್ರ ಮಿತ್ರ

ಸರ್ಕಾರಗಳು ಜನಪರ ಕ್ರಮಗಳ ಮೂಲಕ ಜನಮನ ಗೆಲ್ಲುವುದು ಹೊಸದೇನಲ್ಲ, ಇತ್ತೀಚೆಗೆ ಸಂಚಾರ ದಂಡ ಮನ್ನಾ ಮೂಲಕ ಸಾರ್ವಜನಿಕರಿಗೆ ಕೆಲವು ಮಟ್ಟಿನ ನೆರವು ನೀಡಿದ ಸರ್ಕಾರ, ಇದೀಗ ನೀರಿನ ಬಿಲ್ ಬಾಕಿ ಉಳಿಸಿಕೊಂಡಿರುವವರಿಗೆ ಯುಗಾದಿ ಕಾಣಿಕೆಯಾಗಿ ಏಪ್ರಿಲ್‌ನಿಂದ ಮೂರು ತಿಂಗಳ ಅವಧಿಗೆ ಓಟಿಎಸ್ ಜಾರಿಗೊಳಿಸಿ ಬಡ್ಡಿ ಮನ್ನಾ ಘೋಷಿಸಿರುವುದು ಗಮನಾರ್ಹ ಬೆಳವಣಿಗೆ. ಹಬ್ಬದ ಸಂದರ್ಭದಲ್ಲಿ ಇಂತಹ ಸವಲತ್ತುಗಳು ಸಾಮಾನ್ಯ ಜನರಿಗೆ ತಾತ್ಕಾಲಿಕ ಉಸಿರಾಟ ನೀಡುವುದರಲ್ಲಿ ಸಂಶಯವಿಲ್ಲ. ಆದರೆ, ಈ ರೀತಿಯ ನಿರ್ಧಾರಗಳ ದೀರ್ಘಾವಧಿಯ ಪರಿಣಾಮಗಳ ಬಗ್ಗೆ ಚಿಂತನೆ ಅಗತ್ಯವಾಗಿದೆ.

ಒಂದು ಕಡೆ ನೋಡಿದರೆ, ಬಾಕಿ ಬಿಲ್ ಪಾವತಿಸಲು ಅಸಮರ್ಥರಾಗಿದ್ದವರಿಗೆ ಬಡ್ಡಿ ಮನ್ನಾ ಒಂದು ಅವಕಾಶ. ವರ್ಷಗಳ ಕಾಲ ಬಾಕಿ ಉಳಿದಿರುವ ಮೊತ್ತವನ್ನು ಪಾವತಿಸಲು ಇದೊಂದು ಪ್ರೇರಣೆಯಾಗಿ ಪರಿಣಮಿಸಬಹುದು. ಇದರ ಫಲವಾಗಿ ಸರ್ಕಾರಕ್ಕೂ ಮೂಲ ಬಾಕಿ ಮೊತ್ತ ವಾಪಸು ಸಿಗುವ ಸಾಧ್ಯತೆ ಇದೆ. ಹೀಗಾಗಿ, ಇದು ಬಾಕಿ ವಸೂಲಾತಿಗೆ ಸಹಾಯಕವಾಗುವ ಕ್ರಮವೆಂದು ಪರಿಗಣಿಸಬಹುದು.

ಆದರೆ, ಇನ್ನೊಂದು ಮುಖವೂ ಇದೆ. ಪದೇ ಪದೇ ಬಡ್ಡಿ ಮನ್ನಾ ನೀಡುವ ಪದ್ಧತಿ ಬೆಳೆದರೆ, ಅದು ಪಾವತಿ ಶಿಸ್ತಿಗೆ ಧಕ್ಕೆಯಾಗುವ ಸಾಧ್ಯತೆ ಇದೆ. ಸಮಯಕ್ಕೆ ಸರಿಯಾಗಿ ಬಿಲ್ ಪಾವತಿಸುವ ನಾಗರಿಕರಲ್ಲಿ ಅಸಮಾಧಾನ ಮೂಡುವುದು ಸಹಜ. 'ಬಾಕಿ ಇಟ್ಟರೆ ಮನ್ನಾ ಸಿಗುತ್ತದೆ' ಎಂಬ ಮನೋಭಾವ ಬೆಳೆದುಬಂದರೆ, ಅದು ಆಡಳಿತದ ವಿಶ್ವಾಸಾರ್ಹತೆಗೆ ಹಾನಿ ಉಂಟುಮಾಡಬಹುದು. ಸರ್ಕಾರದ ಈ ನಿರ್ಧಾರದಿಂದಾಗಿ ಬಡ್ಡಿ ರೂಪದಲ್ಲಿ ಜಲಮಂಡಳಿಗೆ ಬರಬೇಕಾಗಿದ್ದ ಸುಮಾರು 311 ಕೋಟಿ ರೂ. ಮನ್ನಾ ಆಗಲಿದೆ. ಬಡ್ಡಿ ರೂಪದಲ್ಲಿ ಬರಬೇಕಾಗಿದ್ದ ಆದಾಯ ಕಡಿಮೆಯಾದರೆ, ನೀರು ಸರಬರಾಜು ಮಂಡಳಿಗಳಂತಹ ಸಂಸ್ಥೆಗಳ ಆರ್ಥಿಕ ಸ್ಥಿತಿ ದುರ್ಬಲಗೊಳ್ಳುವ ಸಾಧ್ಯತೆ ಇದೆ. ಇದು ಅಂತಿಮವಾಗಿ ಸಾರ್ವಜನಿಕ ಸೇವೆಗಳ ಗುಣಮಟ್ಟಕ್ಕೂ ಪರಿಣಾಮ ಬೀರುವ ಅಪಾಯವಿದೆ.

ಹೀಗಾಗಿ, ಇಂತಹ ಮನ್ನಾ ಕ್ರಮಗಳನ್ನು ತಾತ್ಕಾಲಿಕ ಮತ್ತು ಅಪರೂಪದ ಕ್ರಮಗಳಾಗಿ ಮಾತ್ರ ಪರಿಗಣಿಸುವುದು ಸೂಕ್ತ. ಬಡ್ಡಿ ಮನ್ನಾವನ್ನು ಎಲ್ಲರಿಗೂ ಸಾಮಾನ್ಯವಾಗಿ ಅನ್ವಯಿಸುವ ಬದಲು, ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಮಾತ್ರ ಸೀಮಿತಗೊಳಿಸುವುದು ಉತ್ತಮ. ಜೊತೆಗೆ, ನಿಯಮಿತವಾಗಿ ಬಿಲ್ ಪಾವತಿಸುವವರಿಗೆ ಪ್ರೋತ್ಸಾಹಕ ರಿಯಾಯಿತಿಗಳನ್ನು ನೀಡುವ ಮೂಲಕ ಪಾವತಿ ಶಿಸ್ತನ್ನು ಉತ್ತೇಜಿಸುವುದು ಅಗತ್ಯ. ಒಟ್ಟಿನಲ್ಲಿ, ಬಡ್ಡಿ ಮನ್ನಾ ಜನಪರ ಕ್ರಮವಾಗಿದ್ದರೂ, ಆರ್ಥಿಕ ಶಿಸ್ತಿನ ಮೌಲ್ಯವನ್ನು ಕುಗ್ಗಿಸದಂತೆ ಸರ್ಕಾರ ಸಮತೋಲನ ಸಾಧಿಸಬೇಕು. ತಾತ್ಕಾಲಿಕ ಸವಲತ್ತು ಮತ್ತು ದೀರ್ಘಾವಧಿಯ ಆರ್ಥಿಕ ಸ್ಥಿರತೆ – ಈ ಎರಡರ ನಡುವಿನ ಸಮನ್ವಯವೇ ಉತ್ತಮ ಆಡಳಿತದ ಲಕ್ಷಣವಾಗುತ್ತದೆ.

-ಜೆ.ನಾಗೇಂದ್ರ ಕಾವೂರು, ಸಂಡೂರು

ಈಗ ಸರಿಯೆ?

ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಈಗಾಗಲೇ ಪ್ರಾರಂಭವಾಗಿದ್ದು ಮಾರ್ಚ್ 31ರಂದು ತೃತೀಯ ಭಾಷೆಯ ಪರೀಕ್ಷೆಗಳು ನಡೆಯಲಿರುವಾಗ ಸರಕಾರವು ಹಿಂದಿ ಭಾಷೆಯ ಪರೀಕ್ಷೆಗಳಿಗೆ ಅಂಕಗಳನ್ನು ನೀಡದೆ ಗ್ರೇಡ್ ನೀಡುವುದಾಗಿ ಪ್ರಕಟಿಸಿದೆ. ವಿದ್ಯಾರ್ಥಿಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುವ ಕಾರಣ ನೀಡಲಾಗಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಯಾವುದೇ ನಿರ್ಣಯ ತೆಗೆದುಕೊಳ್ಳುವುದಿದ್ದರೆ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ತೆಗೆದುಕೊಳ್ಳಬೇಕು. ಈಗ ಪ್ರಕಟಿಸಿದ ನಿರ್ಣಯವನ್ನು ಮುಂದಿನ ವರ್ಷಕ್ಕೆ ಅನ್ವಯಿಸಲಿ, ಈ ವರ್ಷಕ್ಕೆ ಬೇಡ. ಅನೇಕ ವಿದ್ಯಾರ್ಥಿಗಳು ತೃತೀಯ ಭಾಷೆ ವಿಷಯವನ್ನೂ ಕಷ್ಟಪಟ್ಟು ಓದಿರುತ್ತಾರೆ. ಅದರಲ್ಲಿಯೂ ನೂರಕ್ಕೆ ನೂರು ಪಡೆಯಬೇಕೆಂದು ಪ್ರಯತ್ನಿಸಿದವರಿಗೆ ಆಗಬಹುದಾದ ನಿರಾಶೆಯನ್ನು ಸರಕಾರ ಗಮನಿಸಿಲ್ಲ. ವರ್ಷದ ಪ್ರಾರಂಭದಿಂದಲೂ ಎಲ್ಲ ವಿಷಯಗಳಲ್ಲಿ ವಿದ್ಯಾರ್ಥಿಗಳು ಹೆಚ್ಚು ಅಂಕ ಪಡೆಯುವಂತೆ ಶಿಕ್ಷಣ ಕೊಡಲು ಪ್ರಯತ್ನ ಮಾಡುವುದನ್ನು ಬಿಟ್ಟು ಅನ್ಯ ಮಾರ್ಗಕ್ಕಿಳಿಯುವುದು ಸಮಂಜಸವಲ್ಲ. ಜಾಣ ನಾಗರಿಕರನ್ನು, ಅಭ್ಯಾಸದ ಒತ್ತಡ ಸಹಿಸುವಂಥವರನ್ನು ತಯಾರು ಮಾಡುವತ್ತ ಸರಕಾರ ಗಮನಹರಿಸಿದರೆ ನಮ್ಮ ರಾಜ್ಯದ, ದೇಶದ ಭವಿಷ್ಯ ಉಜ್ವಲವಾಗುವುದು.

-ರವೀಂದ್ರ ಸೋ. ಆಕಳವಾಡಿ, ಧಾರವಾಡ

ಅತಿರೇಕದ ಆದೇಶ

ದೆಹಲಿಯ ದೊರೆಯೊಬ್ಬ ತನ್ನ ಅತಿರೇಕ ವರ್ತನೆಯಿಂದ ರಾಜಧಾನಿಯನ್ನು ದೆಹಲಿಯಿಂದ ದೇವಗಿರಿಗೆ ವರ್ಗಾಯಿಸಿ ನಗೆಪಾಟಲಿಗೀಡಾದ ಕಥೆಯನ್ನು ನಾವೆಲ್ಲಾ ಕೇಳಿದ್ದೇವೆ. ನಮ್ಮ ಶಿಕ್ಷಣ ಸಚಿವರೂ ತಮ್ಮ ಅತಿರೇಕ ವರ್ತನೆಯಿಂದ ನಾಗರಿಕರ ಮನವನ್ನು ಕ್ಷೋಭೆಗೀಡು ಮಾಡುತ್ತಿದ್ದಾರೆ.

'ನಮ್ಮ ಶಿಕ್ಷಣ ಸಚಿವರಿಗೆ ಕನ್ನಡದಲ್ಲಿ ಸರಿಯಾಗಿ ಮಾತನಾಡಲು ಬರುತ್ತಿಲ್ಲ' ಎಂದ ವಿದ್ಯಾರ್ಥಿಯೊಬ್ಬನ ವಿರುದ್ಧ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಆದೇಶಿಸಿದ ವಿಚಾರ ನಮಗೆಲ್ಲಾ ನೆನಪಿದೆ. ಮೊನ್ನೆ ಮೊನ್ನೆ ಒಂದನೆಯ ತರಗತಿಗೆ ಪ್ರವೇಶ ಪಡೆಯಲು ಆರು ವರ್ಷಗಳ ವಯಸ್ಸನ್ನು ಕಡ್ಡಾಯ ಮಾಡಿದ್ದ ಶಿಕ್ಷಣ ಸಚಿವರು, ಬಳಿಕ ತಮ್ಮ ಬಣ್ಣ ಬದಲಾಯಿಸಿ 5 ವರ್ಷ 10 ತಿಂಗಳಿಗೇ ಮಕ್ಕಳನ್ನು ಒಂದನೆಯ ತರಗತಿಗೆ ಸೇರಿಸಬಹುದೆಂದು ಆದೇಶ ಮಾಡಿದ್ದಾರೆ. ಒಂದಷ್ಟು ದಿನ ಪೋಷಕರನ್ನು ಚಿಂತೆಗೀಡು ಮಾಡಿ ಏನು ಪುರುಷಾರ್ಥ ಸಾಧಿಸಿದರೋ?!

ಇದೀಗ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಯನ್ನು ಅಂಕಕ್ಕುಂಟು ಲೆಕ್ಕಕ್ಕಿಲ್ಲ ಎಂದು ಪರಿಗಣಿಸಿ ತೀರ್ಪು ನೀಡಿದ್ದಾರೆ. ವಿನಾಕಾರಣ ಹಿಂದಿ ದ್ವೇಷವನ್ನು ಪ್ರದರ್ಶಿಸಿ ಕನ್ನಡದ ಉಟ್ಟು ಓರಾಟಗಾರರಿಗೆ, ಹಿಂದಿ ವಿರೋಧಿಗಳಿಗೆ ಮುದ ನೀಡಿದ್ದಾರೆ.

ಬಾಲ್ಯದಲ್ಲಿ ಭಾಷಾಧ್ಯಯನ ಕ್ರಮವೇ ಅಲ್ಲ, ಬಹಳಕಾಲ ಅಧ್ಯಾಪಕ ವೃತ್ತಿಯಲ್ಲಿದ್ದ ನಾನು ಮಕ್ಕಳು ಕನ್ನಡ- ಸಂಸ್ಕೃತ- ಇಂಗ್ಲಿಷ್- ಹಿಂದಿ ಭಾಷೆಗಳಲ್ಲಿ ಪ್ರಾವೀಣ್ಯ ಪಡೆದುದನ್ನು ನೋಡಿದ್ದೇನೆ.

ಸಚಿವರ ಆದೇಶದಿಂದ ಹೆಚ್ಚಿನ ಶಾಲೆಗಳಲ್ಲಿರುವ ಹಿಂದಿ ಅಧ್ಯಾಪಕರ ಶ್ರಮ, ವಿದ್ಯಾರ್ಥಿಗಳ ಉತ್ಸಾಹ ಕುಗ್ಗಿ ಹೋಗುವುದರಲ್ಲಿ ಸಂಶಯವಿಲ್ಲ.

-ಎಂ. ಸುಬ್ರಹ್ಮಣ್ಯ ಭಟ್, ಮುಡಿಪು

ಕಿರುಸುದ್ದಿ

ಆದರ್ಶ ಪುರುಷರ ಜಯಂತಿ ಮಾದರಿ

• **ದೇವನಹಳ್ಳಿ:** ಶ್ರೀ ಅಗ್ನಿ ಬನ್ನಿರಾಯ ಅವರು ತಿಗಳ ಸಮುದಾಯದ (ಅಗ್ನಿ ವಂಶ ಕ್ಷತ್ರಿಯರು) ಆರಾಧ್ಯದೈವ ಮತ್ತು ವೀರ ಪುರುಷ ಇವರ ಜಯಂತಿಯನ್ನು ತಾಲೂಕು ಆಡಳಿತದಿಂದ ಆಚರಿಸ ಲಾಗುತ್ತದೆ ಎಂದು ತಹಸೀಲ್ದಾರ್ ಎಂ. ಅನಿಲ್ ತಿಳಿಸಿದರು. ತಾಲೂಕು ಆಡಳಿತ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ, ಅಗ್ನಿ ಬನ್ನಿರಾಯರ ತಿಗಳ ಕ್ಷತ್ರಿಯರ ಆರಾಧ್ಯದೈವ ಇವರು ಸಮಾಜದ ಪ್ರಮುಖ ವೀರ ಪುರುಷ, ಇವರ ಜೀವನ ಮತ್ತು ಆದರ್ಶಗಳು ಮನುಕುಲದ ಏಳಿಗೆಗೆ ದಾರಿ ದೀಪ ಎಂದು ಪರಿಗಣಿಸಲಾಗಿದೆ. ಇವರು ಅಗ್ನಿವಂಶದ ಕ್ಷತ್ರಿಯರು ಅಥವಾ ವಹ್ನಿಕುಲ ಕ್ಷತ್ರಿಯ ಸಮುದಾಯಕ್ಕೆ ಸೇರಿದವರೆಂದರು. ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಹನುಮಂತರಾಯಪ್ಪ, ನಾಗೇಶ್, ಬಿಜಾಂಟಿ ಸುಂದರ್, ಮಂಜುಳ್ಳ, ಸುಬ್ಬಣ್ಣ, ನಿರ್ಮಲಾ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಊರಬಾಗಿಲಿನಲ್ಲಿ ಶ್ರೀ ರಾಮನವಮಿ

• **ಹಾವೆರೆಕೆರೆ:** ಹೊಸಕೋಟೆ ತಾಲೂಕು ನಂದಗುಡಿ ಗ್ರಾಮದ ಊರಬಾಗಿಲು 500 .600 ವರ್ಷದ ಇತಿಹಾಸವಿರುವ ಅಭಯ ಆಂಜನೇಯಸ್ವಾಮಿ ಎಂದೇ ಪ್ರಸಿದ್ಧವಾಗಿರುವ ದೇವಸ್ಥಾನದಲ್ಲಿ ಶುಕ್ರವಾರ ನಡೆದ ಶ್ರೀರಾಮನವಮಿ ಹಬ್ಬದ ಪ್ರಯುಕ್ತ ವಿಶೇಷ ಪೂಜೆ ಬೆಣ್ಣೆ ಅಲಂಕಾರ, ಮಹಾಮಂಗಳಾರತಿ, ಮಜ್ಜಿಗೆ, ಕೋಸಂಬರಿ, ಅನ್ನದಾಸೋಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಶುಕ್ರವಾರ ಬೆಳ್ಳಿಗೆ ಬೆಳಗ್ಗೆಯಿಂದಲೇ ನಂದಗುಡಿಯ ಊರ ಬಾಗಿಲ ಆಂಜನೇಯ ಸೇವಾ ಸಮಿತಿ ಮತ್ತು ನಂದಗುಡಿ ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರಿಂದ ಸ್ವಾಮಿಗೆ ವಿಶೇಷ ಪೂಜೆ ಆಯೋಜಿಸಲಾಗಿತ್ತು. ಸುಮಾರು ಮಧ್ಯಾಹ್ನ ಮಹಾಮಂಗಳಾರತಿ ಸಮಯದಲ್ಲಿ ದೇವಾಲಯಕ್ಕೆ ಬಂದ ಎಲ್ಲಾ ಭಕ್ತರು ಅರ್ಚಕರ ಮಹಾ ಮಂಗಳಾರತಿ ನೀಡುವ ಸಮಯದಲ್ಲಿ ...

ಅಸ್ಸಾಂ ಮೂಲದ ಬಾಲಕಿ ಶವ ಪತ್ತೆ: ಅತ್ಯಾಚಾರ

• **ಬೆಂಗಳೂರು:** ...

ಚಹಾ ಕುಡಿಯುತ್ತಿದ್ದ ವ್ಯಕ್ತಿ ನಟನೆಂದು ಅಪಹರಣ: ಹಲ್ಲೆ

• **ಬೆಂಗಳೂರು:** ...

ಕಾಡಿನಲ್ಲಿರುವ ಕೆರೆಕುಂಟೆಯಲ್ಲಿ ಬತ್ತಿದ ಜಲ | ಬಿಸಿಲ ಬೇಗೆಗೆ ನೀರಿಲ್ಲದೆ ಪರದಾಟ | ನಾಗರಿಕರ ಸ್ಪಂದನೆ ಅವಶ್ಯ

ನೀರು ಕೊಟ್ಟು ಪ್ರಾಣಿ-ಪಕ್ಷಿ ಪ್ರಾಣ ಉಳಿಸಿ

▸ ಹಾವೆರೆಕೆರೆ ಟಿ.ನಾಗರಾಜ್

• **ಹಾವೆರೆಕೆರೆ:** ಬೇಸಿಗೆ ಬಿಸಿಲು ಹೆಚ್ಚಾದಂತೆ ನಗರ ಪಟ್ಟಣದಲ್ಲೇ ನೀರಿಗೆ ಅಭಾವ ಉಂಟಾಗುತ್ತಿದೆ. ಈ ನಡುವೆ ಈಗಾಗಲೇ ಕಾಡು, ಅರಣ್ಯ ಪ್ರದೇಶದಲ್ಲಿ ಕೆರೆಕುಂಟೆಗಳಲ್ಲಿ ನೀರು ಬತ್ತಿ ಹೋಗಿರುವುದರಿಂದ ಪ್ರಾಣಿಗಳಿಗೆ ನೀರಿಲ್ಲದೆ ಪ್ರಾಣಕ್ಕೆ ಆಪತ್ತು ಉಂಟಾಗಿದೆ.

ನಗರ ಮತ್ತು ಗ್ರಾಮಗಳಿಗೆ ಕಾಡಿನಿಂದ ನೀರಿಗಾಗಿ ಹುಡುಕಾಟ ನಡೆಸಿಕೊಂಡು ಬರುವ ಪ್ರಾಣಿಗಳಿಗೆ ನೀರು ಒದಗಿಸುವುದು ನಾಗರಿಕರ ಕರ್ತವ್ಯವಾಗಿದೆ. ಇಲ್ಲಿನ ಪ್ರಾಣಿ, ಪಕ್ಷಿ ಪ್ರಿಯರು ಪ್ರಾಣಿಗಳಿಗೆ ನೀರು ಒದಗಿಸುವ ಕಾಯಕವನ್ನು ಇನ್ನಷ್ಟು ಹೆಚ್ಚು ಮಾಡಬೇಕಾಗಿದೆ. ಮಾರ್ಚ್ ತಿಂಗಳಿನಲ್ಲೇ ಬಿಸಿಲಿನ ತಾಪ ತೀವ್ರಗೊಂಡಿದೆ. ಏಪ್ರಿಲ್ , ಜೂನ್, ಜುಲೈ ತಿಂಗಳಲ್ಲಿ ಮಳೆ ಬಾರದೆ ಹೋದಲ್ಲಿ ಜನ ಮತ್ತು ಪ್ರಾಣಿಗಳು ನೀರಿಗಾಗಿ ಹುಡುಕಾಟ ನಡೆಸಬೇಕಾಗುತ್ತದೆ. ಇಂತಹ ಪರಿಸ್ಥಿತಿ ಬರುವ ಮೊದಲೇ ಸರಕಾರ , ಸ್ಥಳೀಯ ಸಂಘಸಂಸ್ಥೆಗಳು ನೀರು ನೀಡುವ, ಒದಗಿಸುವ ಕೆಲಸ ಮಾಡಬೇಕಾಗಿದೆ.

ಆದರೆ, ಬಿಸಿಲಿನ ತಾಪಕ್ಕೆ ಜನ ಹೈರಾಣಾಗಿದ್ದಾರೆ. ಮನುಷ್ಯರು ದಣಿವಾರಿಸಿಕೊಳ್ಳಲು ತಂಪು ಪಾನೀಯ ಎಳನೀರು ಮಜ್ಜಿಗೆ ಹಾಗೂ ಯಾವುದೋ ಒಂದುರೀತಿಯಲ್ಲಿ ದಣಿವಾರಿಸಿಕೊಳ್ಳುತ್ತಾರೆ. ಆದರೆ, ಪ್ರಾಣಿಗಳು ನೀರಿಲ್ಲದೆ ಮೃತವಾಗುತ್ತಿವೆ. ಇಂತಹ ಸ್ಥಿತಿಗೆ ಈಗಾಗಲೇ ತಲುಪಿಯಾಗಿದೆ. ಹಾವೆರೆಕೆರೆ ಗ್ರಾಮದಲ್ಲಿ ಶ್ರೀ ರಾಮಾವಧೂತರ ಆಶ್ರಮದ ಅಂಗಳದಲ್ಲಿರುವ ಅರಳಿಕಟ್ಟೆಯ ಮರದಲ್ಲಿ, ಗುಂಪು ಗುಂಪಾಗಿ ಕೋತಿ ಮಂಗಗಳು ಆಶ್ರಯಪಡೆದಿವೆ. ಆದರೆ, ನೀರಿಲ್ಲದೆ ಪರದಾಡುತ್ತಿವೆ. ರೈತರು ನೀರಿನ ಅಭಾವದಿಂದ ತೋಟದಲ್ಲಿ ಡ್ರಿಪ್ ಮೂಲಕ ತಮ್ಮ ಬೆಳೆಗೆ ನೀರುಣಿಸುತ್ತಿದ್ದಾರೆ. ಇದರಿಂದ ಹೊರಗಡೆ ಪ್ರಾಣಿ ಪಕ್ಷಿಗಳಿಗೆ ನೀರಿಲ್ಲದಂತಾಗಿದೆ. ಕೆರೆ ಕುಂಟೆಗಳಲ್ಲಿ ನೀರಿಲ್ಲದೆ ಬೇಳೆ ಒಣಗಿ ಹೋಗಿದೆ . ಕೆಲವೊಂದು ಭಾರಿ ನೀರು ಕುಡಿಯಲು ಮನೆ ಮೇಲೆ ಇರುವ ಸಿಂಟ್ಯಾಂಕ್‌ಗಳ ಮೊರೆ ಹೋಗುತ್ತವೆ. ನೀರು ಕುಡಿಯಲು ಬಾಯಿಯನ್ನು ಇಟ್ಟು ಯತ್ನಿಸುತ್ತವೆ. ಇಂತಹ ಸಂದರ್ಭದಲ್ಲಿ ಅನೇಕ ಕೋತಿಗಳು ಕಾಲು ಜಾರಿ ಅರ್ಧಕ್ಕೆ ನೀರು ಇರುವ ಸಿಂಟ್ಯಾಂಕ್‌ಗಳಿಗೆ ಬಿದ್ದು ಪ್ರಾಣ ಕಳೆದುಕೊಂಡಿರುವ ಉದಾಹರಣೆಗಳುಂಟು. ತೋಟಗಳಿಗೆ ಹೋದರೆ ಬೆಳೆ ನಾಶವಾಗುತ್ತದೆಂದು ರೈತರು ಪಟಾಕಿ ಹಚ್ಚಿ ಓಡಿಸುವರು. ಆಶ್ರಮದ ಆವರಣದಲ್ಲಿ ಹೆಚ್ಚು ಕೋತಿಗಳು ಬೆಳಗಾದ ತಕ್ಷಣ ಊರಿನ ಕಡೆ ಗುಂಪು ಗುಂಪಾಗಿ ಹೋಗುತ್ತವೆ. ಮನೆಗಳ ಬಳಿ ಏನಾದರೂ ತಿಂಡಿ ಹಾಕಿದರೆ ತೆಗೆದುಕೊಂಡು ಹೋಗುತ್ತವೆ. ಕೆಲವರು ದಿನ ನಿತ್ಯ ಬಾಳೆ ಹಣ್ಣು ಇತರೆ ಪದಾರ್ಥವನ್ನು ತಿನ್ನಲು ನೀಡುವರು. ಆದರೆ, ಕುಡಿಯಲು ಮಾತ್ರ ನೀರು ಇಡುವುದಿಲ್ಲ, ಕೋತಿಗಳು ನೀರಿಗಾಗಿ ಪರದಾಡುವ ದೃಶ್ಯ ಕರುಳು ಹಿಂಡಿದಂತಾಗುತ್ತದೆ. ಕೆಲವೊಮ್ಮೆ ನೀರು ಕುಡಿದು ಬಿಸಾಡಿದ ನೀರಿನ ಬಾಟಲಿಯನ್ನು ತೆಗೆದುಕೊಂಡು ಅದರಲ್ಲಿನ ಅಲ್ಪ ಸ್ವಲ್ಪ ನೀರನ್ನು ಕುಡಿದು ದಣಿವಾರಿಸಿಕೊಳ್ಳುತ್ತವೆ. ಆದರೆ, ಕೆಲವರು ದಯೆ ಕರುಣೆ ಇಲ್ಲದೆ ಕೋತಿಯನ್ನು ಅಟ್ಟಿಸಿಕೊಂಡು ದೂರ ಓಡಿಸುವರು. ಆದರೆ, ಇದೇ ಗ್ರಾಮದಲ್ಲಿ ಕೆಲವರು ಆಶ್ರಮದ ಅರಳಿಕಟ್ಟೆಯ ಬಳಿ ಪ್ರತಿನಿತ್ಯ ನೀರಿಡುವ ಅಭ್ಯಾಸ ಮಾಡಿಕೊಂಡಿದ್ದಾರೆ. ಕೊರೋನಾ ವೇಳೆಯಲ್ಲಿ ಕೋತಿಗಳಿಗೆ ಎಲ್ಲಿಯೂ ಆಹಾರ ಸಿಗದೆ ಪರದಾಡುವ ಸ್ಥಿತಿಯಲ್ಲಿ ಪ್ರತಿ ನಿತ್ಯ ಆಶ್ರಮದಲ್ಲಿ ತಿಂಡಿಯನ್ನು ಹಾಕುತ್ತಿದ್ದರು. ಎಲ್ಲಾ ಸಾರ್ವಜನಿಕರು ಪ್ರಾಣಿಗಳ ಬಗ್ಗೆ ಕನಿಕರ ತೋರಬೇಕಾಗಿದೆ. ಮೂಕ ಪ್ರಾಣಿಗಳಿಗೆ ಒಂದಿಷ್ಟು ಕುಡಿಯಲು ನೀರಿನ ವ್ಯವಸ್ಥೆಯನ್ನು ಮಾಡುವುದರಿಂದ ಮೂಕ ಪ್ರಾಣಿಗಳು ಬದುಕಲು ಸೇವೆ ಮಾಡಿದಂತಾಗುತ್ತದೆ. ಪ್ರಾಣಿ ಪಕ್ಷಿ ಪ್ರಿಯರು ತಮ್ಮ ಕೈಲಾದಷ್ಟು ಮನೆಗಳ ಚಾವಣಿ ಮೇಲೆ ಅಕ್ಕ ಪಕ್ಕದ ಖಾಲಿ ಸ್ಥಳದಲ್ಲಿ ನೀರನ್ನಿಟ್ಟು ಪ್ರಾಣ ಪಕ್ಷಿಗಳು ಬದುಕುವುದಕ್ಕೆ ದಾರಿ ಮಾಡಿ ಕೊಡಬೇಕಾಗಿದೆ.





ದಿಗಂತ ವಿಶೇಷ

ಎಲ್ಲೆಂದರಲ್ಲಿ ನೀರು ಇಟ್ಟು ಪ್ರಾಣಿಗಳ ಜೀವ ರಕ್ಷಿಸಿ

ಎಂದೂ ಕಾಣದ ಬಿಸಿಲಿನ ತಾಪ ಹೆಚ್ಚಾಗಿದೆ. ಪ್ರಾಣಿಗಳು ಪಕ್ಷಿಗಳು ನೀರಿಲ್ಲದೆ ಪರಿತಪಿಸುತ್ತಿವೆ. ಪ್ರಾಣಿ ಪ್ರಿಯರು ದಯವಿಟ್ಟು ತಮ್ಮ ಅಂಗಳದಲ್ಲಿ ಅಥವಾ ಮನೆಯ ಛಾವಣಿ ಮೇಲೆ ಪಾತ್ರೆಯಲ್ಲಿ ನೀರನ್ನು ಇಟ್ಟು ಇವುಗಳ ದಾಹ ತೀರಿಸಿ ಪ್ರಾಣ ಉಳಿಸಿಕೊಳ್ಳಲು ಎಲ್ಲರೂ ಸಹಕರಿಸಬೇಕೆಂದು ಪ್ರಾಣಿಪ್ರಿಯ ರಾಮೇಗೌಡ ನಂದಗುಡಿರ ಮನವಿಯಾಗಿದೆ.

ಮನೆ ಮೇಲಿನ ಟ್ಯಾಂಕ್ ನೀರಿಗೆ ಪಕ್ಷಿಗಳ ಮೊರೆ

ರೈತರು ನೀರಿನ ಅಭಾವದಿಂದ ತೋಟದಲ್ಲಿ ಡ್ರಿಪ್ ಮೂಲಕ ತಮ್ಮ ಬೆಳೆಗೆ ನೀರುಣಿಸಲು ಹಾಯಿಸುತ್ತಿದ್ದಾರೆ. ಇದರಿಂದ ಹೊರಗಡೆ ಪ್ರಾಣಿ ಪಕ್ಷಿಗಳಿಗೆ ನೀರಿಲ್ಲದಂತಾಗಿದೆ. ಕೆರೆ ಕುಂಟೆಗಳಲ್ಲಿ ನೀರಿಲ್ಲದೆ ಬೇಳೆ ಒಣಗಿ ಹೋಗಿದೆ . ಕೆಲವೊಂದು ಭಾರಿ ನೀರು ಕುಡಿಯಲು ಮನೆ ಮೇಲೆ ಇರುವ ಸಿಂಟ್ಯಾಂಕ್ ಗಳ ಮೊರೆ ಹೋಗುತ್ತವೆ.

» ಕೆರೆ-ಕುಂಟೆಗಳು ನೀರಿಲ್ಲದೆ ಒಣಗಿ ಹೋಗಿವೆ. ದನಕರುಗಳು, ಪ್ರಾಣಿ ಪಕ್ಷಿಗಳಿಗೆ ನೀರಿಗಾಗಿ ಪರದಾಡುವ ಸ್ಥಿತಿ ಎದುರಾಗಿದೆ.

ವಾಗಟ ಮುನಿವೆಂಕಟಪ್ಪಗೆ ಪ್ರಶಸ್ತಿ



• **ಹಾವೆರೆಕೆರೆ:** ತಾಲೂಕಿನ ವಾಗಟ ಗ್ರಾಮದ ಮುನಿವೆಂಕಟಪ್ಪನವರು ಯಕ್ಷಗಾನ, ಬಯಲಾಟ, ಭಜನೆ ಕಲಾವಿದರಾದ ಪೆಂಕುರಮಣಪ್ಪ ಅವರಿಗೆ ವರದರಾಜಸ್ವಾಮಿ ಟ್ರಸ್ಟ್ ನೀಡ ಯೋಗಪುರಿ ಕಲಾರತ್ನ ಪ್ರಶಸ್ತಿ ನೀಡಿ ಗೌರವಿಸಿದೆ. ರಾಮಾಯಣ ಕುರುಕ್ಷೇತ್ರ, ಸುಂದರಕಾಂಡ ರಾಮಸಯಣ, ತಾರೆ, ಮಂಡೋದರಿ ಸೀತೆ, ಆಂಜನೇಯ, ಕುಂತಿ, ಅರ್ಜುನ, ಧರ್ಮರಾಯ, ಕರ್ಣ, ನಾರದ, ಸಾರಥಿ ಸೇರಿದಂತೆ, ಕರ್ನಾಟಕ, ಆಂಧ್ರ, ತಮಿಳುನಾಡು, ಅಯೋಧ್ಯೆ, ಮೈಸೂರು ದಸರಾ ಮತ್ತು ನಂಜನಗೂಡು ಶ್ರೀ ಕಂಠೇಶ್ವರ ಜಾತ್ರಾಮಹೋತ್ಸವ ಸೇರಿದಂತೆ ನೂರಾರು ನಾಟಕಗಳಲ್ಲಿ ಅಭಿನಯಿಸಿ ಜನಮೆಚ್ಚುಗೆ ಗಳಿಸಿದ್ದಾರೆ. ಹೊಸಕೋಟೆ ತಾಲೂಕು ಕಲಾವಿದರ ಕ್ಷೇಮಾಭಿವೃದ್ಧಿ ಸಂಘದಿಂದ ಸನ್ಮಾನಿಸಲಾಯಿತು. ಕಲಾವಿದರ ಸಂಘದ ಕಾರ್ಯದರ್ಶಿ ಡಿ.ಮಂಜುನಾಥ, ಮುಖ್ಯಸಲಹೆಗಾರರಾದ ಮುನಿರಾಜು, ಭಾಗವತರು ನಿರ್ದೇಶಕರಾದ ಶಂಭುಲಿಂಗಪ್ಪ, ಸೀಮೆಹಸು ನಾಗರಾಜ್, ಹಿರಿಯಕಲಾವಿದರಾದ ವೀಣಾ ಮತ್ತು ಚಂದ್ರಶೇಖರ್ ಇದ್ದರು.

ಚಿರತೆ ಮರಿ ದಾಳಿ: ಇಬ್ಬರಿಗೆ ಗಾಯ



• **ಹುಣಸೂರು:** ಚಿರತೆ ಮರಿ ದಾಳಿ ನಡೆಸಿದ ಪರಿಣಾಮ ಇಬ್ಬರು ಗಾಯಗೊಂಡು ವಿವಿಧ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮತ್ತಷ್ಟು ಜನರ ಮೇಲೆರಗಲು ಯತ್ನಿಸಿದ ಚಿರತೆ ಮರಿಯನ್ನು ಗ್ರಾಮಸ್ಥರೇ ಬಲೆ ಬೀಸಿ ಬಂಧಿಸಿರುವ ಘಟನೆ ತಾಲೂಕಿನ ಹುಲ್ಯಾಳು ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಗಾವಡಗೆರೆ ಹೋಬಳಿಯ ಹುಲ್ಯಾಳು ಗ್ರಾಮದ ನಾಗಣ್ಣರ ಪುತ್ರ ಅಜಯ್ ಹಾಗೂ ಕೋಳಿ ಫಾರಂ ಮಾಲೀಕ ಕೆ.ಆರ್.ನಗರದ ನಿವಾಸಿ ...

ಬ್ರಹ್ಮರಥೋತ್ಸವಕ್ಕೆ ಅದ್ದೂರಿ ಸ್ವಾಗತ



• ... ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೈರೇಗೌಡ, ರಾಜ್ಯ ಒಕ್ಕಲಿಗ ಸಂಘದ ನಿರ್ದೇಶಕ ಬಿ.ವಿ.ರಾಜಶೇಖರಗೌಡ, ಸಹಕಾರ ಬ್ಯಾಂಕ್ ಅಧ್ಯಕ್ಷ ಬಿ.ವಿ.ಸತೀಶಗೌಡ, ಯುವ ಮುಖಂಡ ನಾರಾಯಣಗೌಡ, ನಿವೃತ್ತ ಐ.ಜಿ.ಡಾ. ನಾರಾಯಣ ಸ್ವಾಮಿ, ಸುಭಾಷಗೌಡ, ಇತರರು ಇದ್ದರು.

ಮಾದಿಗ ಸಮುದಾಯದ ಬಗ್ಗೆ ಅವಹೇಳನಾಕಾರಿ ಹೇಳಿಕೆ

ಕ್ಷಮೆಯಾಚಿಸದಿದ್ದರೆ ಹೋರಾಟ: ಎಚ್ಚರಿಕೆ



• **ಹೊಸಕೋಟೆ:** ಮೀಸಲಾತಿ ವರ್ಗೀಕರಣದ ವಿಚಾರವಾಗಿ ಇತ್ತೀಚೆಗೆ ನಡೆದ ಸಭೆಯಲ್ಲಿ ನಮ್ಮ ಮಾದಿಗ ಸಮುದಾಯದ ಬಗ್ಗೆ ಅವಹೇಳನಕಾರಿ ಪದಬಳಕೆ ಸರಿಯಲ್ಲ, ಎಡ್ಗೆ ಬಲಗೈ ಪದಬಳಕೆ ಹಾಗೂ ಎಡಗೈ ಕೆಲವೇ ಕೆಲಸಕ್ಕೆ ಸೀಮಿತ ಎಂಬ ಅವಹೇಳನಕಾರಿ ಹೇಳಿಕೆ ಯಾರಿಗೂ ಶೋಭೆತರುವಂತಹುದಲ್ಲ, ಕೂಡಲೆ ಕ್ಷಮೆ ಕೇಳಬೇಕು ಇಲ್ಲವೇ ಕಾನೂನು ಹೋರಾಟಕ್ಕೆ ಸಿದ್ಧರಾಗಿ ಸಮುದಾಯದ ಹಿರಿಯ ಮುಖಂಡ ವೆಂಕಟಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನಾವು ಯಾವ ಸಮುದಾಯವನ್ನೂ ವಿರೋಧಿಸಲ್ಲ, ಹೊಲೆಯ ಮಾದಿಗ ಎಂಬ ಭೇದ ಮಾಡದೆ ಎಲ್ಲಾ ಸಂದರ್ಭದಲ್ಲೂ ಒಂದಾಗಿ ಹೋರಾಟ ಮಾಡಿಕೊಂಡು ಬಂದಿದ್ದೇವೆಂದರು.

ವರ್ಗೀಕರಣ ಯಾರೊಬ್ಬರ ಪಕ್ಕವನ್ನು ಕಿತ್ತುಕೊ ಳ್ಳುವುದಲ್ಲ, ಡಾ. ಅಂಬೇಡ್ಕರ್ ರೂಪಿಸಿದ ಮೀಸಲಾತಿ ವ್ಯವಸ್ಥೆಯೊಳಗೆ ನ್ಯಾಯಯುತ ಹಂಚಿಕೆ ಮಾಡುವ ಪ್ರಕ್ರಿಯೆಯಾಗಿದೆ. ನಮ್ಮ ಹಕ್ಕಿನ ಪಾಲನ್ನು ಕೇಳುವ ವಿಚಾರವಾಗಿದೆ. ಜನಸಂಖ್ಯೆ ಮತ್ತು ಹಿಂದುಳಿದ ಆಧಾರದ ಮೇಲೆ ಸಮಾನ ಅವಕಾಶ ದೊರಕಬೇಕು ಎಂಬುದು ನಮ್ಮ ಬೇಡಿಕೆಯಾಗಿದೆ. ನಾವು ಅಂಬೇಡ್ಕರ್ ಅವರ ತತ್ವವನ್ನು ಅನುಸರಿಸುವವರು. ಕಾನೂನುಬದ್ಧ ಮತ್ತು ಶಾಂತಿಯುತ ಹೋರಾಟವೇ ನಮ್ಮ ಮಾರ್ಗ ಎಂದು ಹೇಳಿದರು. ಡಿ.ಎಂ. ಮುನಿರಾಜು ಮಾತನಾಡಿ, ಮಾದಿಗ ಸಮುದಾಯದ ಬಗ್ಗೆ ಅವಹೇಳನಕಾರಿ ಹೇಳಿಕೆ ಇಡೀ ಸಮಾಜದಲ್ಲಿ ಆಕ್ರೋಶ ಉಂಟಾಗಿದೆ. ರಾಜ್ಯದ ವಿವಿಧ ಭಾಗದಿಂದ ಕರೆಗಳು ಬರುತ್ತಿವೆ. ನಮ್ಮ ಸಮುದಾಯ ಕಳೆದ 35 ವರ್ಷದಿಂದ ಒಳಮೀಸಲಾತಿಗೆ ಹೋರಾಟ ಮಾಡಿಕೊಂಡು ಬಂದಿದೆಂದರು. ಈ ನಿಟ್ಟಿನಲ್ಲಿ ಹಲವಾರು ಮಹಾನಿಯರ ಆಯೋಗ ರಚಿಸಿ ಸರ್ಕಾರ ವರದಿ ಪಡೆದಿದೆ, ಎಲ್ಲರ ಸಮ್ಮತಿ ಪಡೆದು ಜಾರಿಗೆ ಮುಂದಾಗುವ ಸಂದರ್ಭದಲ್ಲಿ ಮತ್ತೆ ಅದೇ ಹಳೆಯ ಬ್ಯಾಕ ತೆಗೆಯುವ ಮೂಲಕ ಮತ್ತೆ ವರದಿಯನ್ನು ಮೂಲೆ ಗುಂಪು ಮಾಡಲಾಗುತ್ತಿದೆ. ಇದರ ಬಗ್ಗೆ ಸಮುದಾಯದವರು ಒಮ್ಮತಕ್ಕೆ ಬಂದು ಒಳಮೀಸಲಾತಿ ಜಾರಿಗೆ ಸಹಕಾರ ನೀಡಬೇಕು. ನಮ್ಮ ಸಮುದಾಯದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವುದನ್ನು ಕೂಡಲೇ ಹಿಂಪಡೆದು ನಮ್ಮ ಮಾದಿಗ ಸಮುದಾಯದವರಲ್ಲಿ ಕ್ಷಮೆ ಕೇಳುವ ಮೂಲಕ ತಮ್ಮ ಘನತೆಯನ್ನು ಉಳಿಸಿಕೊಳ್ಳಬೇಕು ಎಚ್ಚರಿಕೆ ನೀಡಿದರು. ಮಾದರ ಮಹಾ ಸಭಾದ ಜಿಲ್ಲಾಧ್ಯಕ್ಷ ಡಾ. ಎಚ್. ಎಂ .ಸುಬ್ಬರಾಜ್ ಮಾತನಾಡಿ, ಸರ್ಕಾರದ ಆದೇಶದ ಪ್ರಕಾರ ಡಾ. ಬಾಬಾಸಾಹೇಬ ಅಂಬೇಡ್ಕರ್ ಜಯಂತಿಯನ್ನು ಏಪ್ರಿಲ್ 14ರಂದು ಹಾಗೂ ಬಾಬು ಜಗಜೀವನ್ ರಾಮ್ ಜಯಂತಿಯನ್ನು ಪ್ರತ್ಯೇಕ ದಿನಾಂಕದಲ್ಲಿ ಆಚರಿಸಲಾಗುತ್ತದೆ. ಆದರೆ, ನಮ್ಮ ತಾಲೂಕಿನಲ್ಲಿ ಹಲವು ದಶಕದಿಂದ ಎರಡೂ ಜಯಂತಿಯನ್ನು ಒಗ್ಗಟ್ಟಿನಿಂದ ಒಂದೇ ವೇದಿಕೆಯಲ್ಲಿ ಆಚರಿಸುತ್ತಾ ಬಂದಿದೆವೆ. ಇಬ್ಬರೂ ನಾಯಕರು ನಮ್ಮ ಎರಡು ಕಣ್ಣುಗಳು. ಇದು ಸಮಾಜದ ಸೌಹಾರ್ದತೆಯ ಸಂಕೇತ ಎಂದರು. ಈ ವರ್ಷ ಕೆಲವರೆ ಮೊದಲ ಬಾರಿಗೆ ಜಯಂತಿಯನ್ನು ಪ್ರತ್ಯೇಕವಾಗಿ ಆಚರಿಸುವ ಪ್ರಯತ್ನ ನಡೆಯುತ್ತಿರುವುದಾಗಿ ಆತಂಕ ವ್ಯಕ್ತಪಡಿಸಿದ ಅವರು, ಸುಮಾರು ಐವತ್ತು ವರ್ಷದಿಂದ ಆಚರಿಸಿಕೊಂಡು ಬರಲಾಗಿರುವುದನ್ನು ಬದಲಾಯಿಸುವುದು ಸರಿಯಲ್ಲ, ಈ ಕುರಿತು ಸಭೆ ನಡೆಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಪುರಸಭೆಸ್ಥಾಯಿಸಮಿತಿಮಾಜಿಅಧ್ಯಕ್ಷವಿಜಯ್ ಕುಮಾರ್, ಮಾದರ ಮಹಾ ಸಭಾದ ಅಧ್ಯಕ್ಷ ಗುಟ್ಟಹಳ್ಳಿ ನಾಗರಾಜ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್ ಎಂ ಮುನಿರಾಜ್, ನರಸಿಂಹಯ್ಯ, ಹರೀಶ್ ಚಕ್ರವರ್ತಿ, ಎ ನಾರಾಯಣ ಸ್ವಾಮಿ, ಮಂಜು ಸೂರ್ಯ, ಸೋಮಶೇಖರ್, ಕೆಆರ್‌ಬಿ ಶಿವಾನಂದ, ವೆಂಕಟೇಶ್, ಗುರಪ್ಪ ಸೇರಿ ಹಲವಾರು ಮುಖಂಡರು ಹಾಜರಿದ್ದರು.

ಛಾಯಾಗ್ರಾಹಕನ ಮೇಲೆ ಹಲ್ಲೆ: ಕಠಿಣ ಕ್ರಮಕ್ಕೆ ಆಗ್ರಹ



• **ಹಾಸನ:** ...

... ಶಾಂತಿಯುತ ಧರಣಿ ಪ್ರತಿಭಟನೆ ನಡೆಸಲಿದ್ದಾರೆ ಎಂದರು. ರಾಜ್ಯದ ಎಲ್ಲಾ ಛಾಯಾ ಚಿತ್ರಗ್ರಾಹಕರು, ಸಂಘದ ಎಲ್ಲ ಪದಾಧಿಕಾರಿಗಳು ಭಾಗಿಯಾಗಲಿದ್ದಾರೆ. ಮೆರವಣಿಗೆ ನಂತರ ಡಿ.ಸಿ, ಎಸ್ಪಿ ಅವರಿಗೆ ಮನವಿ ಸಲ್ಲಿಸಲಾಗುವುದೆಂದರು. ... ಗೋಷ್ಠಿಯಲ್ಲಿ ಜಿಲ್ಲಾ ಸಂಘದ ಅಧ್ಯಕ್ಷ ಎಸ್.ಜಿ.ನಾಗರಾಜ್, ಮಾಜಿ ಅಧ್ಯಕ್ಷ ನಿಂಗರಾಜು ಎನ್(ಸ್ವಾಮಿ), ಪ್ರಧಾನ ಕಾರ್ಯದರ್ಶಿ ಬಿ.ಕೆ.ಧರ್ಮಶೆಟ್ಟಿ, ಕಾರ್ಯದರ್ಶಿ ಟಿ.ಸಿ.ನಾಗರಾಜ್ , ಅನಿಲ್‌ಕುಮಾರ್ ಇದ್ದರು.

ಡಿಜೆ ಬಳಸಲು ಅವಕಾಶಕ್ಕೆ ಮನವಿ| ಪೊಲೀಸರಿಂದ ಕಾನೂನು ಕ್ರಮದ ಎಚ್ಚರಿಕೆ

ಹಿಂದುಪರ ಸಂಘಟನೆಗಳಿಂದ ಪ್ರತಿಭಟನೆ



• **ದೊಡ್ಡಬಳ್ಳಾಪುರ:** ಇದೇ ತಿಂಗಳು 29 ರ ಭಾನುವಾರ ಆಯೋಜಿಸಲಾಗಿದ್ದ ಬೃಹತ್ ಶ್ರೀರಾಮ ಶೋಭಾಯಾತ್ರೆಗೆ ಪೊಲೀಸ್ ಇಲಾಖೆಯಿಂದ ಡಿಜೆ ಬಳಕೆಗೆ ಅನುಮತಿ ನೀಡದಿರುವ ಕಾರಣ ಭಜರಂಗದಳ, ವಿಶ್ವ ಹಿಂದೂ ಪರಿಷತ್ತು ಸೇರಿದಂತೆ ಹಿಂದುಪರ ಸಂಘಟನೆಗಳು ನಗರದ ಡಿವೈಎಸ್ಪಿ ಕಚೇರಿ ಮುಂದೆ ಧರಣಿ ನಡೆಸಿದರು.

ಕಳೆದ 11 ವರ್ಷದಿಂದ ಯಾವುದೇ ಅಹಿತಕರ ಘಟನೆ ನಡೆಯದಂತೆ ಯಾತ್ರೆ ಮಾಡಿದ್ದೇವೆ. ಇಷ್ಟು ವರ್ಷದಿಂದ ಇಲ್ಲದಿರುವ ಕಾನೂನು ಕ್ರಮಗಳು ಈಗ ಯಾಕೆ..? ಡಿಜೆಗೆ ಅನುಮತಿ ಕೊಡಿ, ಸೌಂಡ್ ಕಡಿಮೆ ಇಟ್ಟು ಯಾತ್ರೆ ಮಾಡ್ತೀವಿ ಎಂದು ಹಿಂದೂ ಸಂಘಟನೆಗಳ ಮುಖಂಡರು ಪೊಲೀಸರಲ್ಲಿ ಮನವಿ ಮಾಡಿದರು. ಹಿಂದೂ ಸಂಘಟನೆಗಳ ಮನವಿಗೆ ಒಪ್ಪದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸರು ಹೆಚ್ಚಿನ ಡೆಸಿಬಲ್ ಶಬ್ದ ವೃದ್ಧಿ ಮಾಡುವ ಡಿಜೆಗೆ ಅವಕಾಶ ಇಲ್ಲ, ಈಗ ಮಕ್ಕಳಿಗೆ ಪರೀಕ್ಷೆಯ ಸಮಯ. ಸುವ್ಯವಸ್ಥೆಸಾರ್ವಜನಿಕಹಿತದೃಷ್ಟಿಯಿಂದ ಅನುಮತಿ ಕೊಡಲು ಆಗಲ್ಲ, ಒಂದು ವೇಳೆ ಡಿಜೆ ಬಳಸಿದ್ದೇ ಆದರೆ, ಡಿಜೆ ಉಪಕರಣಗಳನ್ನು ಜಪ್ತಿ ಮಾಡಲಾಗುವುದು. ನಿಯಮವನ್ನು ಪಾಲಿಸದಿರುವ ಕಾರ್ಯಕ್ರಮ ಆಯೋಜಕರ ಮೇಲೆ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳ ಆದೇಶದಂತೆ ಕ್ರಮ ಜರುಗಿಸುತ್ತೇವೆ ಎಂದು ಪೊಲೀಸರು ಎಚ್ಚರಿಸಿದರು.

ಈ ಸಂಬಂಧ ಜಿಲ್ಲಾಧಿಕಾರಿ ಡಾ. ಅನುರಾಧ ಕೆ.ಎನ್ ಅವರು ಹೊರಡಿಸಿರುವ ಆದೇಶದಲ್ಲಿ ಮಾ. 29ರಂದು ದೊಡ್ಡಬಳ್ಳಾಪುರ ನಗರದಲ್ಲಿ ನಡೆಯುವ ಬೃಹತ್ ಶ್ರೀರಾಮ ಶೋಭಾಯಾತ್ರೆ ಹಿನ್ನೆಲೆಯಲ್ಲಿ ಸಾರ್ವಜನಿಕ ಸುವ್ಯವಸ್ಥೆಯ ಹಿತದೃಷ್ಟಿಯಿಂದ ನಗರದಲ್ಲಿ ಡಿಜೆ ವ್ಯವಸ್ಥೆ ಮತ್ತು ಹೆಚ್ಚಿನ ಡೆಸಿಬಲ್ ಶಬ್ದ ವೃದ್ಧಿ ಸಾಧನ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಈ ಆದೇಶವನ್ನು ಉಲ್ಲಂಘಿಸಿದಲ್ಲಿ, ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ಎಚ್ಚರಿಸಿದರು.

ರಕ್ತಸ್ರಾವದಿಂದ ರೋಗಿ ಸಾವು| ಜನಪ್ರಿಯ ಆಸ್ಪತ್ರೆಗೆ 13.40 ಲಕ್ಷ ರೂ. ದಂಡ

ಸಂತ್ರಸ್ತ ಕುಟುಂಬಕ್ಕೆ ಪರಿಹಾರದ ಮೊತ್ತ



• **ಹಾಸನ:** ವೈದ್ಯನ ನಿರ್ಲಕ್ಷ್ಯದಿಂದ ಶಸ್ತ್ರಚಿಕಿತ್ಸೆ ವೇಳೆ ರಕ್ತಸ್ರಾವದಿಂದ ರೋಗಿ ಸಾವನಪ್ಪಿರುವುದು ಸಾಬೀತಾದ ಹಿನ್ನೆಲೆಯಲ್ಲಿ ಹಾಸನದ ಜನಪ್ರಿಯ ಆಸ್ಪತ್ರೆ ಹಾಗೂ ವೈದ್ಯ ಡಾ. ಅಮೋಘ್‌ಗೌಡಗೆ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು 13.40 ಲಕ್ಷ ರೂ. ದಂಡ ವಿಧಿಸಿದೆ.

ಜನಪ್ರಿಯ ಆಸ್ಪತ್ರೆಯ ವೈದ್ಯ ಡಾ. ಅಮೋಘ್ ಗೌಡ ಅವರ ನಿರ್ಲಕ್ಷ್ಯದಿಂದಾಗಿ ರೋಗಿ ಸಾವನಪ್ಪಿದ್ದು ರೋಗಿಯ ಪತಿಗೆ ಪರಿಹಾರ ರೂಪದಲ್ಲಿ ಹಣ ನೀಡುವಂತೆಆಯೋಗವುಆದೇಶಿಸಿದೆ. ಬೆನ್ನುನೋವಿನ ಸಮಸ್ಯೆಯಿಂದ ಬಳಲುತ್ತಿದ್ದ ಶೋಭಾ (41) ಸಾವಿಗೀಡಾದ ಮಹಿಳೆ. ನ್ಯೂರೋ ಸರ್ಜನ್ ಡಾ. ಅಮೋಘಗೌಡ ಲ್ಯಾಮಿನೆಕ್ಟಮಿ ಮತ್ತು ಡಿಸ್ಕೆಕ್ಟಮಿ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ. ಈ ವೇಳೆ ರೋಗಿಯ ಇಲಿಯಾಕ್ ಆರ್ಟರಿಯನ್ನು ಹಾನಿಗೊಳಿಸಿದ್ದಾರೆ. ಅದಕ್ಕೆ ಸೂಕ್ತ ಮುನ್ನೆಚ್ಚರಿಕೆ ಹಾಗು ತಕ್ಷಣ ಚಿಕಿತ್ಸೆ ಸಿಗದೆ ವೈದ್ಯರ ನಿರ್ಲಕ್ಷ್ಯದಿಂದ ರೋಗಿ ಸಾವನಪ್ಪಿದ್ದಾರೆ.

ಹಿನ್ನೆಲೆ: 2024ರ ಜು.10 ರಂದು ಬೆನ್ನು ನೋವೆಂದು ಜನಪ್ರಿಯ ಆಸ್ಪತ್ರೆಗೆ ದಾಖಲಾಗಿದ್ದರು. ಅದೇ ದಿನ ಸಂಜೆ ನ್ಯೂರೋ ಸರ್ಜನ್ ಡಾ. ಅಮೋಘಗೌಡ ಶೋಭಾ ರವರಿಗೆ ಲ್ಯಾಮಿನೆಕ್ಟಮಿ ಮತ್ತು ಡಿಸ್ಕೆಕ್ಟಮಿ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ. ಈ ವೇಳೆ ವೈದ್ಯನ ನಿರ್ಲಕ್ಷ್ಯದಿಂದ ಇಲಿಯಾಕ್ ಆರ್ಟರಿ ಹಾನಿಗೊಳಿಸಿದ್ದು ಅತೀವ ರಕ್ತಸ್ರಾವಗೊಂಡಿದೆ. ರೋಗಿಯ ಸ್ಥಿತಿ ಗಂಭೀರವಾಗಿದ್ದರಿಂದ 2024 ರ ಜು.11 ರಂದು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ಸೂಕ್ತ ಚಿಕಿತ್ಸೆ ಸೂಚಿಸಿ ಕಳುಹಿಸಿಕೊಡಲಾಗಿದೆ.

ಮಣಿಪಾಲ್ ಆಸ್ಪತ್ರೆಯಲ್ಲಿ ಪ್ರಾಥಮಿಕ ಪರೀಕ್ಷೆ ನಡೆಸುವಾಗ ರೋಗಿ ರಕ್ತಸ್ರಾವದಿಂದ ಉಂಟಾದ ಹೆಮರೇಜಿಕ್ ಶಾಕ್‌ನಿಂದ ಮೃತಪಟ್ಟರು. ರೋಗಿಯ ಪತಿ ಹೊನ್ನೇಗೌಡ/ಹೇಮಂತಕುಮಾರ ನಗರದ ರಾಮಚಂದ್ರ ಎಂ. ರವರು ಪರಿಹಾರ ಕೋರಿ ನಗರದ ಜನಪ್ರಿಯ ಆಸ್ಪತ್ರೆ ಹಾಗೂ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆ ವಿರುದ್ಧ ಅರ್ಜಿ ಸಲ್ಲಿಸಿದ್ದರು. ದೂರನ್ನು ಪರಿಶೀಲಿಸಿದ ಆಯೋಗವು ರಕ್ತಸ್ರಾವ ಗಂಭೀರತೆಯಿದ್ದರೂ ವಾಸ್ಕುಲರ್ ತಜ್ಞರನ್ನು ಸಂಪರ್ಕಿಸದಿರುವುದು ಮತ್ತು ತಡವಾಗಿ ಉನ್ನತ ಚಿಕಿತ್ಸೆ ಗೆ ರವಾನಿಸಿರುವುದು ವೈದ್ಯಕೀಯ ನಿರ್ಲಕ್ಷ್ಯ, ಸರಿಯಾದ ಚಿಕಿತ್ಸೆ ವಿಧಾನ ಅನುಸರಿಸದೆ, ಅವಸರವಾಗಿ ಶಸ್ತ್ರಚಿಕಿತ್ಸೆ ಮಾಡಿ, ಸೂಕ್ತ ಚಿಕಿತ್ಸೆ ನೀಡುವಲ್ಲಿ ವಿಳಂಬ ಮಾಡಿದೆ ಎಂದು ತೀರ್ಪಿನಲ್ಲಿ ಉಲ್ಲೇಖಿಸಿದೆ. ಆಸ್ಪತ್ರೆ ನಿರ್ದೇಶಕ ಹಾಗೂ ಡಾ. ಅಮೋಘ ಗೌಡ ವೈದ್ಯಕೀಯ ನಿರ್ಲಕ್ಷ್ಯತೆ ಪರಿಹಾರವಾಗಿ 13,40,189 ರೂ ಹಾಗೂ ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ 2,45,000 ರೂ. 50 ಸಾವಿರ ರೂ. ಪ್ರತ್ಯಾದಿನ ವಿಚಾರಣೆ ಯ ರೋಗಿ ಪತಿಗೆ ಪಾವತಿಸುವಂತೆ ಆದೇಶಿಸಿದೆ.

ಪಡಿತರ ಕುಟುಂಬಗಳಿಗೆ ರಾಗಿ ವಿತರಿಸಲು ರೈತರ ಆಗ್ರಹ | ಪ್ರತಿ ಕುಟುಂಬಕ್ಕೆ 100 ಕೆಜಿ ರಾಗಿ ನೀಡಿ

ಬೇರೆ ರಾಜ್ಯಕ್ಕೆ ರಾಗಿ ಮಾರಾಟ ಬೇಡ



• **ಬಂಗಾರಪೇಟೆ:** ರೈತರಿಂದ ಬೆಂಬಲ ಬೆಲೆ ಯೋಜನೆಯಲ್ಲಿ ಖರೀದಿ ಮಾಡಿರುವ ರಾಗಿಯನ್ನು ಹೊರ ರಾಜ್ಯಗಳಿಗೆ ಮಾರಾಟ ಮಾಡುವ ಬದಲು ಬಡ ರೈತ ಕೂಲಿ ಕಾರ್ಮಿಕರ ಕುಟುಂಬಗಳಿಗೆ ನ್ಯಾಯಬೆಲೆ ಅಂಗಡಿಗಳ ಮೂಲಕ ಪ್ರತಿ ಕುಟುಂಬಕ್ಕೆ 100 ಕೆಜಿ ರಾಗಿಯನ್ನು ವಿತರಣೆ ಮಾಡಬೇಕೆಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರನ್ನು ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಸರ್ಕಾರದ ಬೆಂಬಲ ಯೋಜನೆಯ ಮೂಲಕ ರಾಗಿಯನ್ನು ಉತ್ತಮ ಬೆಲೆಗೆ ಖರೀದಿ ಮಾಡಿರುವುದರಿಂದ ಮೂರು ತಿಂಗಳು ಕಷ್ಟಪಟ್ಟು ಬೆಳೆದ ರಾಗಿ ಬೆಳೆಗಾರರಿಗೆ ಕೇಂದ್ರ ಸರ್ಕಾರ 4886 ರೂಪಾಯಿ ಬೆಲೆ ನೀಡಿ ಖರೀದಿ ಮಾಡಿ ರೈತರಿಗೆ ಆರ್ಥಿಕ ಬೆಂಬಲವಾಗಿ ನಿಂತಿರುವುದಕ್ಕೆ ಸರ್ಕಾರಕ್ಕೆ ಧನ್ಯವಾದ ಹೇಳಿದರು.

ಆದರೆ, ಖರೀದಿ ಮಾಡಿರುವ ಲಕ್ಷಟನ್‌ಗಳ ರಾಗಿಯನ್ನು ಸರ್ಕಾರ ಭಾರತ ಆಹಾರ ನಿಗಮದ ಮೂಲಕ ಆಂಧ್ರ ತೆಲಂಗಾಣ, ತಮಿಳುನಾಡಿಗೆ ರಾಜ್ಯದ ರಾಗಿಯನ್ನು ಮಾರಾಟ ಮಾಡಲು ಮುಂದಾಗಿರುವುದು ನ್ಯಾಯವೇ? ಎಂದು ಆಹಾರ ಸಚಿವರನ್ನು ಪ್ರಶ್ನೆ ಮಾಡಿದರು.

ಹೊರರಾಜ್ಯದ ಅಧಿಕಾರಿಗಳ ತಂಡ ಕೋಲಾರ ಜಿಲ್ಲೆಯ ನಾನಾ ತಾಲೂಕುಗಳಿಗೆ ಭೇಟಿ ನೀಡಿ ರಾಗಿಯನ್ನು ಖರೀದಿ ಕೇಂದ್ರದಲ್ಲಿ ಪರಿಶೀಲನೆ ಮಾಡಿ ಗುಣಮಟ್ಟದ ಬಗ್ಗೆ ಖಾತ್ರಿ ಮಾಡಿಕೊಂಡು ಸರ್ಕಾರಕ್ಕೆ ವರದಿ ನೀಡಿ ರಾಜ್ಯದ ರಾಗಿಯನ್ನು ಖರೀದಿ ಮಾಡಲು ಮುಂದಾಗಿದ್ದು, ಯುದ್ಧ ಹಾಗೂ ದುಡಿಯುವ ಕೈಗೆ ಕೆಲಸವಿಲ್ಲದ ಗ್ರಾಮೀಣ ಪ್ರದೇಶದ ರೈತ ಕೂಲಿ ಕಾರ್ಮಿಕರ ಹೊಟ್ಟೆಗೆ ಮಣ್ಣು ತಿನ್ನಬೇಕೇ? ಎಂದು ಸರ್ಕಾರವನ್ನು ಬಡವರು ಪ್ರಶ್ನೆ ಮಾಡುವ ಜೊತೆಗೆ ನಮ್ಮ ಬದುಕಿನ ಹಸಿವಿಗಾಗಿ ರಾಗಿಯನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ನಮಗೆ ವಿತರಣೆ ಮಾಡಿ ಎಂದು ಆಗ್ರಹಿಸಿದರು.

ತಾಲೂಕು ಅಧ್ಯಕ್ಷ ಕದರಿನತ್ತ ಅಪ್ಪೋಜಿರಾವ್, ಗೋವಿಂದಪ್ಪ, ಮುನಿಕೃಷ್ಣ, ವಿಶ್ವ, ಮುನಿರಾಜು, ಪುತ್ತೇರಿ ರಾಜು, ಗಿರೀಶ್, ಮಂಗಸಂದ್ರ ತಿಮ್ಮಣ್ಣ, ಚಂದ್ರಪ್ಪ ಸುಪ್ರಿಂ ಚಲ ಮುಂತಾದವರು ಹಾಜರಿದ್ದರು.

ಬಡವರ ಹೆಸರಲ್ಲಿ ಲೂಟಿ: ಆರೋಪ

ಕೂಲಿ ಕಾರ್ಮಿಕರ ಜೀವನಕ್ಕಾಗಿ ಸರ್ಕಾರ ನೀಡುತ್ತಿರುವ ಪಡಿತರ ಅಕ್ಕಿ ಜೊತೆಗೆ ಪ್ರತಿ ಕುಟುಂಬದ ಸದಸ್ಯರಿಗೆ ಹತ್ತು ಕೆಜಿ ರಾಗಿಯನ್ನು ವಿತರಣೆ ಮಾಡಿದರೆ ಬರಗಾಲದಲ್ಲೂ ಕೈ ಹಿಡಿಯುವ ಜೊತೆಗೆ ಹಸಿವಿನಿಂದ ಬಡವರನ್ನು ರಕ್ಷಣೆ ಮಾಡಬಹುದೆಂದು ಸಲಹೆ ನೀಡುವ ಜೊತೆಗೆ ಯಾವುದೇ ಕಾರಣಕ್ಕೂ ರಾಜ್ಯದಲ್ಲಿರುವ ಪಡಿತರ ರಾಗಿಯನ್ನು ಹೊರ ರಾಜ್ಯಕ್ಕೆ ಮಾರಾಟ ಮಾಡಬಾರದೆಂದು ರೈತ ಸಂಘದ ಜಿಲ್ಲಾಧ್ಯಕ್ಷ ಈಕಂಬಳ್ಳಿ ಮಂಜುನಾಥ ಒತ್ತಾಯಿಸಿದರು.

ಕಿರುಸುದ್ದಿ

ವೈರಮುಡಿ ಉತ್ಸವಕ್ಕೂ ಮುನ್ನ ವರುಣ ಸಿಂಚನ



• **ಮಂಡ್ಯ:** ಮೇಲುಕೋಟೆಯಲ್ಲಿ ನಡೆದ ಶ್ರೀದೇವಿ, ಭೂದೇವಿ ಸಮೇತ ಗರುಡಾರೂಢನಾದ ಶ್ರೀ ಚೆಲುವರಾಯಸ್ವಾಮಿಯನ್ನು ಕಣ್ತುಂಬಿಕೊಳ್ಳಲು ಸ್ವತಃ ವರುಣದೇವನೆ ಬಂದಿದ್ದಾನೆ. ಮೇಲುಕೋಟೆಯಾದ್ಯಂತ ವರುಣ ಸಿಂಚನವಾಗಿದೆ. ಚೆಲುವನಾರಾಯಣಸ್ವಾಮಿಯ ವೈರಮುಡಿ ಉತ್ಸವದಲ್ಲಿ ಕೆಲವೊಮ್ಮೆ ವರುಣ ಸಿಂಚನವಾಗುವುದು ಸಾಮಾನ್ಯ. ಅದರಂತೆ ಈ ಬಾರಿಯೂ ವರುಣ ಸಿಂಚನವಾಗಿದೆ. ನೆರೆದಿದ್ದ ಭಕ್ತಾದಿಗಳು ಮಳೆಯಿಂದಾಗಿ ಪುಳಕಗೊಂಡರು. ಮೇಲುಕೋಟೆಯ ವೈರಮುಡಿ ಬ್ರಹ್ಮೋತ್ಸವದಲ್ಲಿ ಗಣ್ಯಾತಿ ಗಣ್ಯರೂ ಸಹ ಭಾಗವಹಿಸಿ ಸ್ವಾಮಿಯ ದರ್ಶನ ಪಡೆದರು. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ, ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ, ಎಚ್.ಡಿ. ರೇವಣ್ಣ, ರಮೇಶ್ ಬಂಡಿಸಿದ್ದೇಗೌಡ, ಪಿ.ಎಂ. ನರೇಂದ್ರಸ್ವಾಮಿ, ಮಾಜಿ ಶಾಸಕ ಅಪ್ಪಾಜಿಗೌಡ, ಆಹಾರ ಆಯೋಗದ ಅಧ್ಯಕ್ಷ ಡಾ. ಎಚ್. ಕೃಷ್ಣ ಸೇರಿದಂತೆ ನೂರಾರು ಮಂದಿ ಗಣ್ಯಾತಿ ಗಣ್ಯರು, ಶ್ರೀಗಳು ಭಾಗವಹಿಸಿದ್ದು ವಿಶೇಷವಾಗಿತ್ತು.

ವ್ಯಕ್ತಿ ನಾಪತ್ತೆ: ದೂರು

• **ಮದ್ದೂರು:** ತಾಲೂಕಿನ ಅರುವನಹಳ್ಳಿ ಗ್ರಾಮದ ವ್ಯಕ್ತಿಯೋರ್ವ ಕಾಣೆಯಾಗಿರುವ ಬಗ್ಗೆ ಮದ್ದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತಾಲೂಕಿನ ಅರುವನಹಳ್ಳಿ ಗ್ರಾಮದ ಶಿವರಾಮು(52) ಕಾಣೆಯಾಗಿರುವ ವ್ಯಕ್ತಿಯಾದವರು. ಈತನು ಮದ್ಯವ್ಯಸನಿಯಾಗಿದ್ದು ದೀಪಾವಳಿ ಹಬ್ಬದ ದಿನದಂದು ಬೆಂಗಳೂರಿಗೆ ಹೋಗಿ ಬರುತ್ತೇನೆಂದು ಹೇಳಿ ಹೋದವರು ಇಲ್ಲಿಯವರೆಗೂ ವಾಪಸ್ ಆಗದೆ ಕಾಣೆಯಾಗಿದ್ದು ಈ ಸಂಬಂಧ ಪತ್ನಿ ಕೆಂಪಾಜಮ್ಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಶಿವರಾಮು(52), 5.7 ಅಡಿ, ಕೋಲುಮುಖ, ಎಣ್ಣೆಗೆಂಪು ಬಣ್ಣ, ಸಾದಾರಣ ಮೈಕಟ್ಟು, ಎಡಗಾಲಿನ ಮುಂಗಾಲಿನ ಬಳಿ ಗಂಟುಯಿದ್ದು ನೀಲಿ ಬಣ್ಣದ ಶರ್ಟ್ ಮತ್ತು ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿದ್ದು ಈತನ ಬಗ್ಗೆ ಯಾವುದಾದರೂ ಮಾಹಿತಿಗಳಿದ್ದಲ್ಲಿ ಮದ್ದೂರು ಪೊಲೀಸ್ ಠಾಣೆ 08232-232170, ಸಿ.ಪಿ.ಐ-9480804869, ಕಂಟ್ರೋಲ್ ರೂಂ-08023-224888 ಸಂಪರ್ಕಿಸುವಂತೆ ಕೋರಿದ್ದಾರೆ.

ರಾಮನವಮಿ ಸಂಭ್ರಮ: ಪೂಜೆ, ಪಾನಕ ವಿತರಣೆ

• **ಹೊಳೆನರಸೀಪುರ:** ಪಟ್ಟಣದಾದ್ಯಂತ ಶ್ರೀರಾಮನವಮಿ ಹಬ್ಬವನ್ನು ಶುಕ್ರವಾರ ಅತ್ಯಂತ ಸಡಗರ-ಸಂಭ್ರಮದಿಂದ ಆಚರಿಸಲಾಯಿತು. ವಿವಿಧ ದೇವಾಲಯಗಳು ಹಾಗೂ ಸಂಘ-ಸಂಸ್ಥೆಗಳ ವತಿಯಿಂದ ವಿಶೇಷ ಪೂಜೆ ಹಾಗೂ ಭಕ್ತಾದಿಗಳಿಗೆ ಪಾನಕ, ಮಜ್ಜಿಗೆ ಮತ್ತು ಪ್ರಸಾದ ವಿನಿಯೋಗ ಮಾಡಲಾಯಿತು.

ಶಾಸಕ ಎಚ್.ಡಿ. ರೇವಣ್ಣ ಅವರಿಂದ ಚಾಲನೆ: ಪುರಸಭೆ ಮುಂಭಾಗದಲ್ಲಿ ಹನುಮೋತ್ಸವ ಸಮಿತಿಯಿಂದ ಆಯೋಜಿಸಲಾಗಿದ್ದ ರಾಮನವಮಿ ಕಾರ್ಯಕ್ರಮಕ್ಕೆ ಶಾಸಕ ಎಚ್.ಡಿ. ರೇವಣ್ಣ ಅವರು ಚಾಲನೆ ನೀಡಿದರು. ಶ್ರೀರಾಮಚಂದ್ರನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ವಿಶೇಷ ಪೂಜೆ ಸಲ್ಲಿಸಿದ ಅವರು ಭಕ್ತಿ ಶ್ರದ್ಧೆಯಿಂದ ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ನೆರೆದಿದ್ದ ಭಕ್ತಾದಿಗಳಿಗೆ ಪ್ರಸಾದ ಹಾಗೂ ಪಾನಕ ವಿತರಿಸಲಾಯಿತು. ಸಮಿತಿಯ ಪ್ರಮುಖರಾದ ರಂಗನಾಥ್, ಗೋವಿಂದ, ಸಮಾಜಸೇವಕ ಗಿರೀಶ್ ಯಾದವ್, ಬ್ರಾಡ್ ವೇ ದಯಾನಂದ, ಪ್ರದೀಪ್, ಶಂಕರ ಜತಾಳ್, ನಾಗೇಂದ್ರ, ಗಿರಿ, ಹೇಮಂತ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಶ್ರೀ ವೀರಾಂಜನೇಯ ಬಲಜಿಗರ ಸಂಘದಿಂದ ಪೂಜೆ ತಾಲೂಕು ಕಚೇರಿ ಹಿಂಭಾಗದ ರಸ್ತೆಯಲ್ಲಿರುವ ಪ್ರಸಿದ್ಧ ಶ್ರೀ ವೀರಾಂಜನೇಯ ಸ್ವಾಮಿ ದೇವಾಲಯದಲ್ಲಿ ಶ್ರೀ ವೀರಾಂಜನೇಯ ಬಣಜಿಗರ ಸಂಘದ ವತಿಯಿಂದ ವಿಜೃಂಭಣೆಯ ಪೂಜೆ ಆಯೋಜಿಸಲಾಗಿತ್ತು. ಸಂಘದ ಅಧ್ಯಕ್ಷರಾದ ವೆಂಕಟೇಶ್, ಗೋವಿಂದರಾಜಣ್ಣ, ರಾಧಮ್ಮ,ಜಯ ಶ್ರೀ ಜಗನ್ನಾಥ್ ನಾರಾಯಣಸ್ವಾಮಿ,ಧನ್ಯ ಕುಮಾರ್, ಯಜಮಾನ್ ಕೃಷ್ಣಮೂರ್ತಿ, ಸಮಾಜ ಸೇವಕ ರೂಪಾ ಹರೀಶ್, ಶಂಕರ್ ಹಾಗೂ ಎಚ್.ಕೆ. ನರಸಿಂಹ, ಅಶೋಕ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು. ದೇವಸ್ಥಾನಕ್ಕೆ ಬಂದ ಭಕ್ತರಿಗೆ ಪಾನಕ ಮತ್ತು ಪ್ರಸಾದವನ್ನು ವ್ಯವಸ್ಥಿತವಾಗಿ ವಿತರಿಸಲಾಯಿತು. ವಿವಿಧ ಮಂದಿರಗಳಲ್ಲಿ ರಾಮೋತ್ಸವ ಪಟ್ಟಣದ ವಿವಿಧ ಬಡಾವಣೆಗಳಲ್ಲಿರುವ ದೇವಾಲಯಗಳಲ್ಲಿ ಭಕ್ತರು ರಾಮನಾಮ ಸ್ಮರಣೆಯಲ್ಲಿ ಲೀನರಾಗಿದ್ದರು.

ಮಹಿಳಾ ದಿನಾಚರಣೆ, ವಂದೇ ಪ್ರಕೃತಿ ಮಾತರಂ ಕಾರ್ಯಕ್ರಮ

ಹೆಣ್ಣು ಅಬಲೆಯಲ್ಲ ಸಬಲೆ



• **ಬೆಂಗಳೂರು:** ಮಹಿಳೆ ಎಂದರೆ ಅಬಲೆಯಲ್ಲ, ಅವಳು ಸ್ತ್ರೀ ಶಕ್ತಿ ಎಂದು ಆಕಾಶವಾಣಿ ಮತ್ತು ದೂರದರ್ಶನ ನಿವೃತ್ತ ನಿರ್ದೇಶಕಿ ನಿರ್ಮಲಾ ಸಿ. ಯಲಿಗಾರ್ ತಿಳಿಸಿದರು.

ಬಸವನಗುಡಿಯಲ್ಲಿರುವ ಅಬಲಾಶ್ರಮದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಬೆಂಗಳೂರು ದಕ್ಷಿಣ ಮಹಿಳಾ ಪ್ರಕಾರದಿಂದ ಆಯೋಜಿಸಲಾಗಿದ್ದ ಮಹಿಳಾ ದಿನಾಚರಣೆ ಹಾಗೂ ವಂದೇ ಪ್ರಕೃತಿ ಮಾತರಂ ಕಾರ್ಯಕ್ರಮದಲ್ಲಿ ಮಾತನಾಡಿ, ಮಹಿಳಾ ದಿನಾಚರಣೆ ಕೇವಲ ಒಂದು ದಿನದ ಆಚರಣೆಯಲ್ಲ, ಮಾರ್ಚ್ ತಿಂಗಳ ಮಾತ್ರವಲ್ಲದೆ ವರ್ಷ ಪೂರ್ತಿ ಮಹಿಳಾ ದಿನವೆ. ಹೆಣ್ಣು ಅಬಲೆಯಲ್ಲ, ಅಬಲೆ ಎನ್ನುವುದು ಹೆಣ್ಣು ಮಕ್ಕಳಿಗೆ ಸಲ್ಲದ ಪದ. ಧೈರ್ಯ ನಮ್ಮಲ್ಲಿಯಿದ್ದರೆ ಹೆಣ್ಣು ಅಬಲೆಯಾಗಲಾರಳು. ಇರುವಂಥ ಅವಕಾಶಗಳನ್ನು ಸದುಪಯೋಗಿಸಿಕೊಂಡು, ತಮ್ಮ ಜೀವನವನ್ನು ಕಟ್ಟಿಕೊಳ್ಳುವ ಜವಾಬ್ದಾರಿ ಮಹಿಳೆಯರದು ಎಂದು ಕಿವಿ ಮಾತು ಹೇಳಿದರು.

ಭಾರತದಲ್ಲಿ ಹುಟ್ಟಿರುವ ಸ್ತ್ರೀಯರು ನಿಜಕ್ಕೂ ಅದೃಷ್ಟವಂತರು. ಭಾರತದಲ್ಲಿ ಹೆಣ್ಣನ್ನು ದೇವತಾ ರೂಪದಲ್ಲಿ ನೋಡಲಾಗುತ್ತದೆ. ಇಂದಿನ ದಿನಗಳಲ್ಲಿ ತಂತ್ರಜ್ಞಾನಗಳಿಗೆ ಪ್ರತಿಯೊಬ್ಬರು ಮಾರುಹೋಗಿದ್ದಾರೆ. ಇಂದಿನ ಮಕ್ಕಳಲ್ಲಿ ಸನಾತನ ಅಂಶಗಳನ್ನು ಬೆಳಸಿ, ನಮ್ಮ ಸಂಸ್ಕೃತಿಯ ಅಂಶಗಳನ್ನು ತಮ್ಮ ಮಕ್ಕಳಲ್ಲಿ ಮೈಗೂಡಿಸುವುದು ಇಂದಿನ ಆಧುನಿಕ ತಾಯಿಯರ ಜವಾಬ್ದಾರಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಮಹಿಳಾ ಪ್ರಕಾರ ಬೆಂಗಳೂರು ದಕ್ಷಿಣ ಅಧ್ಯಕ್ಷೆ ಶೀಲಾ ಅರಕಲಗೋಡು ಸೇರಿದಂತೆ ಇತರರಿದ್ದರು.

ನೂತನ ಆಸ್ಪತ್ರೆ ಲೋಕಾರ್ಪಣೆಗೊಳಿಸಿದ ಸಚಿವ

450 ಹಾಸಿಗೆಯ ಮಕ್ಕಳ ಆಸ್ಪತ್ರೆ



• **ಬೆಂಗಳೂರು:** ದೇಶದಲ್ಲಿ ಆರೋಗ್ಯ ಸೇವೆಯಲ್ಲಿ ಕರ್ನಾಟಕ ಸದಾ ಮುಂಚೂಣಿಯಲ್ಲಿದೆ. ಈ ನಿಟ್ಟಿನಲ್ಲಿ ನಮ್ಮ ಕಾಂಗ್ರೆಸ್ ಸರ್ಕಾರ ಮಕ್ಕಳಿಗಾಗಿ 450 ಹಾಸಿಗೆಯುಳ್ಳ ಬೃಹತ್, ಅತ್ಯಾಧುನಿಕ ಹಾಗೂ ಸುಸಜ್ಜಿತ ಆಸ್ಪತ್ರೆಯನ್ನು ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ನಿರ್ಮಾಣ ಮಾಡಿದೆ ಎಂದು ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಜೀವನೋಪಾಯ ಸಚಿವ ಡಾ.ಶರಣಪ್ರಕಾಶ್ ಆರ್. ಪಾಟೀಲ್ ತಿಳಿಸಿದರು.

ನೂತನ ಆಸ್ಪತ್ರೆ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಮಕ್ಕಳಿಗೆ ಉತ್ತರ ಆರೈಕೆ, ಚಿಕಿತ್ಸೆ ಒದಗಿಸಲು ಈ ಆಸ್ಪತ್ರೆ ನಿರ್ಮಿಸಲಾಗಿದೆ. ಸರ್ಕಾರದಿಂದಲೇ ಇಷ್ಟೊಂದು ಬೃಹತ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಇಷ್ಟು ದೊಡ್ಡಮಟ್ಟದ ಕಾರ್ಯ ನಿರ್ವಹಿಸುತ್ತಿರುವುದು ದೇಶದಲ್ಲಿ ಮೊದಲು. ಬೇರೆ ರಾಜ್ಯಗಳಿಂದ ಬರುವ ರೋಗಿಗಳಿಗೂ ಇಲ್ಲಿ ಒಂದೇ ತರಹದ ಚಿಕಿತ್ಸೆ ಒದಗಿಸಲಾಗುತ್ತದೆ. ಶೇ. 100ರಷ್ಟು ಗುಣಮಟ್ಟದ ಆರೋಗ್ಯ ಚಿಕಿತ್ಸೆ ಕೊಡುವುದು ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಮಾತ್ರ. ಸಾರ್ವಜನಿಕರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಚಿವರು ಕರೆ ನೀಡಿದರು.

ಪ್ರಸ್ತುತ ಸಂಸ್ಥೆಯು 450 ಹಾಸಿಗೆಗಳನ್ನು ಹೊಂದಿದ್ದು, ವಾರ್ಷಿಕ ವಾಗಿ ಸುಮಾರು 1,78,000 ಹೊರರೋಗಿಗಳು, 21,000 ಒಳರೋಗಿಗಳಿಗೆ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಅಲ್ಲದೇ, ಸುಮಾರು 5,000 ಶಸ್ತ್ರಚಿಕಿತ್ಸೆಯನ್ನು ಜರುಗಿಸಲಾಗುತ್ತಿದೆ ಎಂದು ವಿವರಿಸಿದರು.

ಜಿಲ್ಲೆಗಳಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಎಲ್ಲ ಜಿಲ್ಲೆಗಳಲ್ಲೂ ಮೆಡಿಕಲ್ ಕಾಲೇಜು ಸ್ಥಾಪನೆ ಮಾಡುತ್ತಿದೆ. ಈಗಾಗಲೇ ಶೇ.90ರಷ್ಟು ಗುರಿ ಮುಟ್ಟಿದ್ದೇವೆ. ಇನ್ನು ನಾಲ್ಕೈದು ಜಿಲ್ಲೆಗಳಲ್ಲಿ ಮಾತ್ರ ಬಾಕಿ ಉಳಿದಿದೆ. ಅತಿ ಶೀಘ್ರದಲ್ಲೇ ಎಲ್ಲೆಡೆ ಪೂರ್ಣಗೊಳ್ಳಲಿದೆ. ಎಲ್ಲ ಜಿಲ್ಲೆಗಳಲ್ಲೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಕ್ಯಾನ್ಸರ್ ಆಸ್ಪತ್ರೆ ಮತ್ತು ಟ್ರಾಮಾ ಕೇರ್ ಸೆಂಟರ್ ನಿರ್ಮಾಣ ಮಾಡಲು ಮುಂದಾಗುವ ಮೂಲಕ ಸರ್ವರಿಗೂ ಉತ್ತಮ ಆರೋಗ್ಯ ಸೇವೆ ಒದಗಿಸಲು ನಾವು ಬದ್ಧರಾಗಿದ್ದೇವೆ ಎಂದು ಡಾ. ಪಾಟೀಲ್ ಸ್ಪಷ್ಟಪಡಿಸಿದರು.

ಕ್ರೀಡೆ ಜತೆಗೆ ಚಟುವಟಿಕೆಯೂ ಇರಲಿ

• **ಬಂಗಾರಪೇಟೆ:** ಕ್ರೀಡೆ ಜೀವನವನ್ನು ರೂಪಿಸುವ ಚಟುವಟಿಕೆಯಾಗಿದೆ ಹಾಗಾಗಿ ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಪ್ರಾಂಶುಪಾಲರಾದ ಪ್ರೊ. ಶಕುಂತಲಾ ಸಲಹೆ ನೀಡಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಪುರುಷರ ಮತ್ತು ಮಹಿಳೆಯರ ಪವರ್ ಲಿಫ್ಟಿಂಗ್ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿ, ಪುರುಷರ ವಿಭಾಗದಲ್ಲಿ ಓವರ್ ಆಲ್ ಚಾಂಪಿಯನ್ ಶಿಪ್ ಪ್ರಥಮ ಸ್ಥಾನವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಂಗಾರಪೇಟೆ ಮತ್ತು ಮಹಿಳೆಯರ ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಾಲೂರು ಮತ್ತು ದ್ವಿತೀಯ ಸ್ಥಾನವನ್ನು ಪ್ರಥಮ ಸ್ಥಾನವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಂಗಾರಪೇಟೆ ಪಡೆದಿರುತ್ತಾರೆಂದರು.

ವೇದಿಕೆಯಲ್ಲಿ ಹಿರಿಯ ಪ್ರಾಧ್ಯಾಪಕ ಡಾ. ಶ್ರೀಕಾಂತ್, ಡಾ.ದೇವರಾಜಪ್ಪ, ಡಾ. ಶ್ರೀನಿವಾಸಗೌಡ, ಮುನಿಸ್ವಾಮಿಗೌಡ, ಡಾ.ಲಕ್ಷ್ಮೀ, ಡಾ.ಕೌಸರ್ ಉನ್ನಿಸಾ, ಡಾ. ಕುಸ್ರಾ, ಶ್ರೀನಿವಾಸ್, ಕೆ.ವಿ. ಮಂಜುನಾಥ್,ಎ.ಎಂ.ಡಾ.ಮಹೇಂದ್ರಕುಮಾರ್, ಡಾ.ಗಂಗರಾಜು, ಡಾ.ಬಾಲಾಜಿ, ವಿದ್ಯಾ, ಪ್ರೇಮಾವತಿ, ಟಿಪ್ಪು ಸುಲ್ತಾನ್, ನಾಗರಾಜು, ಮತ್ತು ವಿವಿಧ ಕಾಲೇಜುಗಳ ದೈಹಿಕ ಶಿಕ್ಷಣ ನಿರ್ದೇಶಕ ರವಿಚಂದ್ರ, ಡಾ.ರವೀಂದ್ರನಾಥ, ಡಾ. ಸೋಮಪ್ಪ ಬಡಿಗೇರ್, ಡಾ.ರಾಕೇಶ್, ಹೆಬ್ಬಗ, ರಾಜೇಂದ್ರ ಸಹಾಯಕ ಪ್ರಾಧ್ಯಾಪಕ ಅನು, ದೈಹಿಕ ಶಿಕ್ಷಣ ನಿರ್ದೇಶಕ ಬಿ.ಪಿ.ಸತೀಶ್ ಹಾಜರಿದ್ದರು.



ಸಿಡಿಲು ಬಡಿದು ಐವರು ಮಹಿಳಾ ಕಾರ್ಮಿಕರಿಗೆ ಗಾಯ



• **ಸಕಲೇಶಪುರ:** ತಾಲೂಕಿನ ಹರಗರಹಳ್ಳಿ ಗ್ರಾಮದ ದೀಣಹಳ್ಳಿ ಕಾಫಿ ಎಸ್ಟೇಟ್‌ನಲ್ಲಿ ಕೆಲಸ ಮಾಡುತ್ತಿದ್ದ ಐವರು ಮಹಿಳಾ ಕಾರ್ಮಿಕರು ಸಿಡಿಲು ಬಡಿದು ಗಾಯಗೊಂಡ ಘಟನೆ ಶನಿವಾರ ಮಧ್ಯಾಹ್ನ ನಡೆದಿದೆ.


ಕಾಫಿ ತೋಟದಲ್ಲಿ ಔಷಧಿ ಸಿಂಪಡಿಸುತ್ತಿದ್ದ ವೇಳೆ ಕುದರಂಗಿ ಗ್ರಾಮದ ರೂಪ, ಸತ್ತಿಗಾಲ್ ಗ್ರಾಮದ ಜಯಮ್ಮ, ಸುಳ್ಳಕ್ಕಿ ಗ್ರಾಮದ ಸುಮಿತ್ರಾ, ಹಾಗೂ ಕುದರಂಗಿ ಗ್ರಾಮದ ಲಕ್ಷ್ಮಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ತಕ್ಷಣ ಪಟ್ಟಣದ ಕ್ರಾಫರ್ಡ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಈ ಪೈಕಿ ರೂಪ ಅವರಿಗೆ ಗಂಭೀರ ಗಾಯಗಳಾಗಿರುವುದಾಗಿ ತಿಳಿದು ಬಂದಿದೆ.



ಡಾ.ಅರುಣ್ ಸೋಮಣ್ಣನವರ ಅಭಿಮಾನಿ ಬಳಗದಿಂದ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಪ್ರಶಾಂತ್ ನಗರ ಸರ್ಕಲ್‌ನಲ್ಲಿ ಶ್ರೀರಾಮನವಮಿ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಡಾ.ಅರುಣ್ ಸೋಮಣ್ಣ, ಎಂ. ಚೆನ್ನಪ್ಪ, ದಾಸೇಗೌಡ, ವಿಶ್ವನಾಥಗೌಡ, ಎಚ್. ರಮೇಶ್ ಸೇರಿದಂತೆ ಇತರರಿದ್ದರು.

ಶ್ರೀರಾಮ ಮಂದಿರ ಧಾರ್ಮಿಕ, ಭಾವೈಕ್ಯತಾ ಕೇಂದ್ರ



• **ಕೆ.ಆರ್.ನಗರ:** ಮರ್ಯಾದ ಪುರುಷೋತ್ತಮ ಶ್ರೀರಾಮಚಂದ್ರ ಮನುಕುಲಕ್ಕೆ ಆದರ್ಶಪ್ರಾಯರಾಗಿದ್ದಾರೆ ತಂದೆ-ತಾಯಿ ಮಾತನ್ನು ಸಾಕಾರಗೊಳಿಸಲು ಅಧಿಕಾರ, ಅಶ್ವರ್ಯ ರಾಜ ವೈಭೋಗವನ್ನೆಲ್ಲಾ ಬಿಟ್ಟು 14 ವರ್ಷಗಳ ಕಾಲ ವನವಾಸ ಮಾಡಿ ಪ್ರಜಾ ಪರಿಪಾಲಕ ಶ್ರೀರಾಮಚಂದ್ರ ಭಾರತೀಯರ ಪಾಲಿಗೆ ಆರಾಧ್ಯ ದೈವರಾಗಿದ್ದಾರೆ ಎಂದು ವೈ.ಕೆ.ದಯಾನಂದ ಹೇಳಿದರು.

ಪಟ್ಟಣದ ಉಪ್ಪಾರರ ಶ್ರೀರಾಮಮಂದಿರದಲ್ಲಿ 80ನೇ ವರ್ಷದ ಶ್ರೀರಾಮ ನವಮಿ ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶ್ರೀರಾಮ ಮಂದಿರ ಧಾರ್ಮಿಕ ಶ್ರೇಷ್ಠ ಭಾವೈಕ್ಯತ ಕೇಂದ್ರವಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಹಳ ಇತಿಹಾಸವುಳ್ಳ ಈ ರಾಮಮಂದಿರದಲ್ಲಿ ಪ್ರತಿ ವರ್ಷ ಶ್ರೀರಾಮನವಮಿ ದಿನ ಶ್ರೀರಾಮ ದೇವರ ಭಾವಚಿತ್ರದೊಂದಿಗೆ ಬಡಾವಣೆಯ ಪ್ರಮುಖ ರಸ್ತೆಗಳಲ್ಲಿ ಶ್ರೀರಾಮ ಭಜನೆ ನಡೆಸಿ ನಂತರ ರಾಮಮಂದಿರದಲ್ಲಿ ವಿಗ್ರಹಮೂರ್ತಿಗೆ ಪಂಚಾಮೃತ ಅಭಿಷೇಕ, ರಾಮತಾರಕ ಹೋಮ್ ಪೂಜಾ ಕೈಂಕರ್ಯಗಳನ್ನು ನಡೆಸಿಕೊಂಡು ಬರುತ್ತಿರುವುದಾಗಿ ತಿಳಿಸಿದ ಅವರು 10 ದಿನಗಳ ಕಾಲ ಶ್ರೀರಾಮಯಣ ಕಥಾ ಪರಾಯಣವನ್ನು ಪ್ರತಿ ದಿನ ರಾತ್ರಿ 6.30 ರಿಂದ 7.30ರವರೆಗೆ ಪಠಿಸಿ ನಂತರ ಶ್ರೀರಾಮ ಭಜನೆ ಮಾಡಿಕೊಂಡು ಬರುತ್ತಿರುವುದಾಗಿ ತಿಳಿಸಿದರು.

10ನೇ ದಿನ ಶ್ರೀರಾಮ ಪಟ್ಟಾಭಿಷೇಕ ದಿನದಂದು ಶ್ರೀರಾಮ ಕಲ್ಯಾಣೋತ್ಸವ ಪೂಜಾ ಕಾರ್ಯಕ್ರಮ ಏರ್ಪಡಿಸಿ ನಂತರ ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗವನ್ನು ಸುಮಾರು 80 ವರ್ಷಗಳಿಂದ ನಮ್ಮ ಹಿರಿಯರು ನಡೆಸಿಕೊಂಡು ಬರುತ್ತಿರುದನ್ನು ಮುಂದುವರಿಸಿಕೊಂಡು ಬರುತ್ತಿರುವುದಾಗಿ ಸಂಘದ ಅಧ್ಯಕ್ಷ ಟಿ.ಕೃಷ್ಣ ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಯಜಮಾನರಾದ ಕೇಶವಮೂರ್ತಿ ಕಾರ್ಯದರ್ಶಿ ರಂಗರಾಜು, ಸಮಾಜದ ಮುಖಂಡರಾದ ದಯಾನಂದ, ರಾಜಣ್ಣ, ಜಗದೀಶ್, ಕೆ.ಪಿ.ಅಶ್ವತನಾರಾಯಣ್, ಆನಂದ್, ಎಸ್.ಯೋಗಾನಂದ, ರಾಘವೇಂದ್ರ, ರವಿ, ಶ್ರೀನಿವಾಸ್, ಶಿವಲಿಂಗಯ್ಯ, ರಾಮಚಂದ್ರಯ್ಯ, ಗುರುಪ್ರಸಾದ್, ನವೀನ್, ಪ್ರಭಾಕರ್, ಜಗದೀಶ್‌ಮಾಸ್ಟರ್, ಕೆ.ವಿ.ಆನಂದ, ಅಂಬುಜಮ್ಮ, ಸುಲೋಚನ, ಭಾಗ್ಯರಮೇಶ್, ರಾಣಿ, ಶರಾವತಿ, ಶೋಭಾ, ತ್ರಿವೇಣಿ ಮತ್ತು ಅರ್ಚಕರಾದ ಸತೀಶ್, ಪ್ರಧಾನ ಅರ್ಚಕರಾದ ಡಾ.ಶ್ರೀನಿವಾಸ್‌ಭಟ್ಟರು ಧಾರ್ಮಿಕ ಪೂಜಾ ಕಾರ್ಯಕ್ರಮ ಉಸ್ತುವಾರಿ ನಡೆಸಿದರು.

ವಿದ್ಯಾರ್ಥಿಗಳಿಗೆ ಶಿಕ್ಷೆ ನೀಡಿದ ಆರೋಪ

ಪ್ರಕರಣಕ್ಕೆ ಹೈಕೋರ್ಟ್ ತಡೆ

• **ಬೆಂಗಳೂರು:** ವಿದ್ಯಾರ್ಥಿಗಳು ಶಾಲೆಗೆ ತಡವಾಗಿ ಬಂದಿದ್ದಕ್ಕೆ ಬ್ಯಾಗ್ ಹೊರೆಸುವ ಮತ್ತು ಶಾಲೆಯ ಆವರಣ ಸುತ್ತು ಹಾಕುವ ಶಿಕ್ಷೆ ನೀಡಿದ ಆರೋಪದ ಮೇಲೆ ಪ್ರಾಂಶುಪಾಲೆ ಮತ್ತು ಇತರೆ ಮೂವರ ವಿರುದ್ಧ ದಾಖಲಾಗಿದ್ದ ಪ್ರಕರಣಕ್ಕೆ ಹೈಕೋರ್ಟ್ ಶುಕ್ರವಾರ ತಡೆ ನೀಡಿದೆ.

ಒಂದೊಮ್ಮೆ ಬೇರೆ ವಿದ್ಯಾರ್ಥಿಗಳು ದೂರಿದರೆ ಮಧ್ಯಂತರ ಆದೇಶ ತೆರವು ಮಾಡಲಾಗುವುದು ಎಂದು ನ್ಯಾಯಾಲಯ ಮೌಖಿಕವಾಗಿ ಹೇಳಿತು. ಬೆಂಗಳೂರಿನ ಟೆಕ್ನೋ ಶಾಲೆಯ ಪ್ರಾಂಶುಪಾಲೆ ಮೀನಾಕ್ಷಿ ವಿನೋದಿನಿ, ಶಿಕ್ಷಕರಾದ ರಾಯಚೋಟಿ ನರೇಶ್, ಕೆ.ಭರತ್ ಕುಮಾರ್ ಮತ್ತು ಎಸ್. ಶ್ರೀನಿವಾಸ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ನಡೆಸಿತು.

ಅರ್ಜಿದಾರರ ಪರ ವಕೀಲ ಅರ್ನವ್ ಬಾಗಲವಾಡಿ ಕೆಲವು ವಿದ್ಯಾರ್ಥಿಗಳು ಶಾಲೆಗೆ ತಡವಾಗಿ ಬಂದಿದ್ದಾರೆ ಎಂಬುದಕ್ಕೆ ಸಂಬಂಧಿಸಿದ ಪ್ರಾಂಶುಪಾಲೆ-ಪೋಷಕರ ನಡುವಿನ ಸಂಭಾಷಣೆಯ ವಿಡಿಯೊ ವೈರಲ್ ಆಗಿದೆ. ಶಿಕ್ಷಕರ ವಿರುದ್ಧ ಮಕ್ಕಳು ದೂರು ನೀಡುವಂತೆ ಬಲವಂತ ಮಾಡಲಾಗಿದೆ ಎಂದು ಹೇಳಲಾಗುತ್ತಿದೆ. ಮಕ್ಕಳಿಗೆ ಯಾವುದೇ ಶಿಕ್ಷೆ ನೀಡಿಲ್ಲ, ಪೋಷಕರನ್ನು ಕರೆದುಕೊಂಡು ಬರುವಂತೆ ಶಿಕ್ಷಕರು ಸೂಚಿಸಿದ್ದರು. ಇದು ಹಾನಿ ಮಾಡುವ ಉದ್ದೇಶ ಹೇಗಾಗುತ್ತದೆ? ಎಂದರು.

ಆಗ ಪೀಠವು ಮಕ್ಕಳಿಗೆ ಹೊಡೆದಿದ್ದಾರೆ ಎಂದು ಹೇಳಲಾಗಿದೆ. ಎರಡು ನಿಮಿಷ ತಡವಾಗಿದ್ದಕ್ಕೆ ಎರಡು ಗಂಟೆ ಬಿಸಿಲಿನಲ್ಲಿ ನಿಲ್ಲಿಸಿದ್ದಾರೆ ಎನ್ನುವುದು ಆರೋಪ ಎಂದಿತು. ರಾಜ್ಯ ಹೆಚ್ಚುವರಿ ಸರ್ಕಾರಿ ಅಭಿಯೋಜಕ ಬಿ.ಎನ್.ಜಗದೀಶ್ ಅವರು ಶಿಕ್ಷಕರ ವಿರುದ್ಧ ಕ್ರಮಕೈಗೊಳ್ಳದಂತೆ ಪೊಲೀಸರಿಗೆ ಸೂಚಿಸಲಾಗುವುದು ಎಂದರು. ಇದನ್ನು ಆಲಿಸಿದ ಪೀಠವು ಪ್ರಕರಣಕ್ಕೆ ತಡೆ ನೀಡಲಾಗಿದೆ ಎಂದಿತು. ಅಲ್ಲದೇ, ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿ ವಿಚಾರಣೆ ಮುಂದೂಡಿತು.

ಎಚ್‌ಪಿವಿ ಲಸಿಕಾ ಅಭಿಯಾನದಲ್ಲಿ ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿಕೆ

ಗರ್ಭಕಂಠ ಕ್ಯಾನ್ಸರ್ ತಡೆಗೆ ಲಸಿಕಾ ಅಭಿಯಾನ



• **ಚನ್ನರಾಯಪಟ್ಟಣ:** ಗರ್ಭಕಂಠ ಕ್ಯಾನ್ಸರ್ ತಡೆಗಟ್ಟುವ ಸಾರ್ವಜನಿಕ ಆರೋಗ್ಯದ ಪಯಣದಲ್ಲಿ, ಲಸಿಕಾ ಅಭಿಯಾನ ಮಹತ್ವದ ಮೈಲಿಗಲ್ಲಾಗಿದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಆರೋಗ್ಯ ಅಧಿಕಾರಿಗಳ ಕಚೇರಿ ವತಿಯಿಂದ ಆಯೋಜಿಸಿದ್ದ ಎಚ್‌ಪಿವಿ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸುಯೋಜಿತ ಮತ್ತು ವ್ಯವಸ್ಥಿತ ಅಭಿಯಾನಗಳ ಮೂಲಕ ಗಂಭೀರ ಕಾಯಿಲೆಗಳ ಹೊರೆಯನ್ನು ಹೊಡೆದು ಹಾಕಿದ ಸುದೀರ್ಘ ಇತಿಹಾಸ ಭಾರತಕ್ಕಿದೆ ಎಂದರು.

1950ರದಶಕದಕಾಯಿಲೆಗಳಿಂದಹಿಡಿದುಇತ್ತೀಚಿನ ಕೋವಿಡ್ ಲಸಿಕಾ ಅಭಿಯಾನಗಳವರೆಗೆ ಇವೆಲ್ಲವನ್ನೂ ಯಶಸ್ಸಿನ ಗುರಿಯೊಂದಿಗೆ ರೂಪಿಸಲಾಗಿತ್ತು. ಅದೇ ಶಿಸ್ತು ಮತ್ತು ಸಾರ್ವಜನಿಕ ನಂಬಿಕೆ ಈಗ ಎಚ್‌ಪಿವಿ ಲಸಿಕಾ ಕಾರ್ಯಕ್ರಮದ ಯಶಸ್ಸನ್ನು ನಿರ್ಧರಿಸಲಿದೆ. ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವ ಉದ್ದೇಶದಿಂದ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯವು ಮತ್ತು ರಾಜ್ಯ ಸರ್ಕಾರಕ್ಕೆ ಜೋಡಿಸಿ ಕಾರ್ಯಕ್ರಮವನ್ನು ಅಭಿಯಾನದ ಮಾದರಿಯಲ್ಲಿ ಮುನ್ನಡೆಸುತ್ತಿರುವುದು ಶ್ಲಾಘನೀಯ ಎಂದರು.

ತಾಲೂಕಿನಾದ್ಯಂತ 14 ವರ್ಷ ತುಂಬಿದ 15ವರ್ಷ ದೊಳಗಿನ ಹೆಣ್ಣು ಮಕ್ಕಳಿಗೆ ಗರ್ಭಕಂಠದ ಕ್ಯಾನ್ಸರ್ ಬಾರದಂತೆ ತಡೆಗಟ್ಟಲು ಲಸಿಕಾ ಅಭಿಯಾನ ಪ್ರಾರಂಭಿಸಲಾಗಿದ್ದು, ಈ ಸಂಬಂಧವಾಗಿ ಅರ್ಹ ಹೆಣ್ಣು ಮಕ್ಕಳ ತಂದೆ ತಾಯಿಯವರಿಗೆ ಸದರಿ ಲಸಿಕೆಯ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು ರೂಪಿಸಿಕೊಂಡು ಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಹಾಗೂ ಸಾರ್ವಜನಿಕ ಆಸ್ಪತ್ರೆಗಳಿಗೆ ಮಕ್ಕಳನ್ನು ಕರೆಯಿಸಿ ಸುರಕ್ಷಿತವಾಗಿ ಲಸಿಕೆ ನೀಡಬೇಕು ಎಂದು ತಿಳಿಸಿದರು.

ಎಚ್‌ಪಿವಿ ಲಸಿಕೆ ಉಚಿತ

ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಯು.ಆರ್.ಯುವರಾಜ್ ಮಾತನಾಡಿ, ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ತಾಲೂಕಿನಲ್ಲಿ ಎಚ್‌ಪಿವಿ ಲಸಿಕಾಕರಣ ಕೈಗೊಳ್ಳಲಾಗಿದೆ. ದಿನ ನಿತ್ಯದ ರೋಗ ನಿರೋಧಕ ಶಕ್ತಿ ವೃದ್ಧಿ, ಎಂಆರ್ ನಿರ್ಮೂಲನೆ ಹಾಗು ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವ ಮೂಲಕ ಹೆಣ್ಣು ಮಕ್ಕಳ ಭವಿಷ್ಯವನ್ನು ಸುರಕ್ಷಿತಗೊಳಿಸಲು ಸುರಕ್ಷಿತ ಲಸಿಕೆ ಅಭಿಯಾನ ಕೈಗೊಳ್ಳಲಾಗಿದೆ. ಎಚ್‌ಪಿವಿ ಲಸಿಕೆಯು ಹೆಣ್ಣು ಮಕ್ಕಳಲ್ಲಿ ಗರ್ಭಕಂಠದ ಕ್ಯಾನ್ಸರ್ ಅನ್ನು ತಡೆಗಟ್ಟುವಲ್ಲಿ ಪರಿಣಾಮಕಾರಿ ಎಂದರು.

ಹೊಳೆನರಸೀಪುರ ಪುರಸಭೆ ಉಳಿತಾಯ ಬಜೆಟ್ ಮಂಡನೆ

ಅಭಿವೃದ್ಧಿಗೆ ಶಾಸಕರ ಖಡಕ್ ಸೂಚನೆ



• **ಹೊಳೆನರಸೀಪುರ:** ಪಟ್ಟಣದ ಸರ್ವತೋಮುಖ ಅಭಿವೃದ್ಧಿ ಹಾಗೂ ಮೂಲಭೂತ ಸೌಕರ್ಯಗಳ ವೃದ್ಧಿಗೆ ಒತ್ತು ನೀಡುವ 2026-27ನೇ ಸಾಲಿನ ಅಂದಾಜು ಆಯ-ವ್ಯಯವನ್ನು ಪುರಸಭೆ ಮಂಡಿಸಿದೆ. ಪುರಸಭಾ ಆಡಳಿತಾಧಿಕಾರಿ ಹಾಗೂ ಉಪವಿಭಾಗಾಧಿಕಾರಿಗಳಾದ ಜಗದೀಶ್ ಗಂಗಣ್ಣನವರು ಬಜೆಟ್ ಪ್ರತಿಯನ್ನು ಓದಿದರು.

ಬಜೆಟ್ ಮುಖ್ಯಾಂಶಗಳು (ಲಕ್ಷಗಳಲ್ಲಿ): ಪುರಸಭೆಯು ಈ ಬಾರಿ ಸಣ್ಣ ಪ್ರಮಾಣದ ಉಳಿತಾಯದೊಂದಿಗೆ ಆಶಾದಾಯಕ ಬಜೆಟ್ ಮಂಡಿಸಿದೆ.

ಒಟ್ಟು ನಿರೀಕ್ಷಿತ ಆದಾಯ: 305.77 ಕೋಟಿ, ಒಟ್ಟು ಅಂದಾಜು ವೆಚ್ಚ: 305.48 ಕೋಟಿ, ನಿರೀಕ್ಷಿತ ಉಳಿತಾಯ: 29.74 ಲಕ್ಷ.

ವಾಟ್ಸಾಪ್ ಮೂಲಕ ನಿಗಾ: ಪ್ರತಿ ವಾರ್ಡ್‌ಗಳಲ್ಲಿ ವಾಟ್ಸಾಪ್ ಗ್ರೂಪ್ ರಚಿಸಿ, ಕಸದ ವಾಹನ ಬರುವ ಸಮಯ ಮತ್ತು ಸ್ವಚ್ಛತೆಯ ಬಗ್ಗೆ ಸಾರ್ವಜನಿಕರ ಸಹಿ ಪಡೆಯಬೇಕು. ಆರೋಗ್ಯ ಅಧಿಕಾರಿಗಳ ಕಾರ್ಯಕ್ಷಮತೆಯ ಮೇಲೆ ನಗರದ ಸ್ವಚ್ಛತೆ ಅವಲಂಬಿತವಾಗಿದೆ ಎಂದು ಎಚ್ಚರಿಸಿದರು.

ಗಣ್ಯರ ಮಾರ್ಗದರ್ಶನ

ಈ ಎಲ್ಲಾ ಅಭಿವೃದ್ಧಿ ಕಾರ್ಯಗಳು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು, ಶಾಸಕ ಎಚ್.ಡಿ. ರೇವಣ್ಣ ಹಾಗೂ ಸಂಸದ ಶ್ರೇಯಸ್ ಪಟೇಲ್ ಅವರ ಮಾರ್ಗದರ್ಶನದಲ್ಲಿ ನಡೆಯುತ್ತಿವೆ ಎಂದು ಪುರಸಭೆ ತಿಳಿಸಿದೆ.

ತೆರಿಗೆ ವಸೂಲಿ ಟಾರ್ಗೆಟ್: ನೀರಿನ ತೆರಿಗೆ, ಆಸ್ತಿ ತೆರಿಗೆ, ಮಳಿಗೆ ಬಾಡಿಗೆ ಮತ್ತು ವ್ಯಾಪಾರ ತೆರಿಗೆಯನ್ನು ಕಡ್ಡಾಯವಾಗಿ ವಸೂಲಿ ಮಾಡಬೇಕು. ಪ್ರತಿ 15 ದಿನಕ್ಕೊಮ್ಮೆ ಸಭೆ ನಡೆಸಿ ಪ್ರಗತಿ ಪರಿಶೀಲಿಸಲಾಗುವುದು. ಟಾರ್ಗೆಟ್ ಮುಟ್ಟದಿದ್ದರೆ ಶಿಸ್ತು ಕ್ರಮ ಅನಿವಾರ್ಯ ಎಂದರು.

ಪಾರ್ಕ್‌ಗಳ ನಿರ್ವಹಣೆ: ಪಟ್ಟಣದ ಸೌಂದರ್ಯಕ್ಕಾಗಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ನಿರ್ಮಿಸಿರುವ ಪಾರ್ಕ್‌ಗಳು ನಿರ್ಲಕ್ಷ್ಯಕ್ಕೊಳಗಾಗಿವೆ. ಪೌರ ಸಿಬ್ಬಂದಿ ಇವುಗಳನ್ನು ಸರಿಯಾಗಿ ನಿರ್ವಹಿಸಬೇಕು. ಹೊಸದಾಗಿ ಹಸಿರು ಗಿಡಗಳು, ಆಟಿಕೆಗಳು ಹಾಗೂ ನೆರಳಿನ ವ್ಯವಸ್ಥೆ ಇರುವಂತೆ ವಿನೂತನ ಡಿಪಿಆರ್ ಸಿದ್ಧಪಡಿಸಲು ಸೂಚಿಸಿದರು.

ಸಾರ್ವಜನಿಕರಿಗೆ ಕಿರುಕುಳ ನೀಡಿದರೆ ಕ್ರಮ: ತೆರಿಗೆ ಪಾವತಿಸಲು ಬರುವ ಜನರಿಗೆ ಸತಾಯಿಸಿದರೆ ಅಥವಾ ಭ್ರಷ್ಟಾಚಾರದ ದೂರು ಬಂದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಪ್ರಮುಖ ಅಭಿವೃದ್ಧಿ ಯೋಜನೆಗಳು: ಒಳಚರಂಡಿ ಯೋಜನೆ: ಸಮಗ್ರ ಒಳಚರಂಡಿ ವ್ಯವಸ್ಥೆಗಾಗಿ 12,600 ಲಕ್ಷ ಮೀಸಲು., ವಾರ್ಡ್ ಅಭಿವೃದ್ಧಿ: ವಿವಿಧ ವಾರ್ಡ್‌ಗಳ ಕಾಮಗಾರಿಗಳಿಗೆ 1000 ಲಕ್ಷ ಅನುದಾನ, ಮಾರುಕಟ್ಟೆ ಅಭಿವೃದ್ಧಿ: ತರಕಾರಿ ಮಾರುಕಟ್ಟೆ ಮತ್ತು ವಾಣಿಜ್ಯ ಮಳಿಗೆಗಳಿಗಾಗಿ ಸುಮಾರು 1364 ಲಕ್ಷ ವಿನಿಯೋಗ, ಡಿಜಿಟಲ್ ಸೇವೆ: ಇ-ಆಸ್ತಿ, ಇ-ಜನ್ಮ ಮತ್ತು 'ವ್ಯಾಪಾರ' ತಂತ್ರಾಂಶದ ಮೂಲಕ ಪಾರದರ್ಶಕ ಆಡಳಿತಕ್ಕೆ ಆದ್ಯತೆ ನೀಡಲಾಗಿದೆ.

ಪ್ರದೀಪ್ ವಿರುದ್ಧ ಪ್ರತಿಭಟನೆ



• ದಾವಣಗೆರೆ: ಮಾಜಿ ಮೇಯರ್ ಬಿ.ಜಿ.ಅಜಯಕುಮಾರ್ ಸವಾಲು ಸ್ವೀಕರಿಸಿದ್ದ ಶಾಸಕ ಪ್ರದೀಪ್ ಈಶ್ವರ್ ಶನಿವಾರ ನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಎಂ.ಶಾಮನೂರು ಪರ ಪ್ರಚಾರಕ್ಕೆ ಆಗಮಿಸಿದ ವೇಳೆ ಹೈಡ್ರಾಮಾ ನಡೆಯಿತು.

ನಗರದ ಕೆ.ಬಿ. ಬಡಾವಣೆಯಲ್ಲಿ ರಾಘವೇಂದ್ರ ಸ್ವಾಮಿ ಮಠದಲ್ಲಿ ಪೂಜೆ ಸಲ್ಲಿಸಿದ ನಂತರ ತೆರೆದ ವಾಹನದಲ್ಲಿ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ರೋಡ್ ಶೋ ಆರಂಭಿಸಿದರು.

ಬಿಜೆಪಿ ಕಚೇರಿಗೆ ಸಾಗುವ ಮಾರ್ಗದಲ್ಲಿ ಪ್ರದೀಪ್ ಈಶ್ವರ್ ಕಾರಿನ ಮೇಲೆ ನಿಂತು ಬರುತ್ತಿದ್ದಂತೆ ಬಿಜೆಪಿ ಮತ್ತು ಕಾಂಗ್ರೆಸ್ ಗುಂಪುಗಳು ಮುಖಾಮುಖಿಯಾಗಿ, ಪರಸ್ಪರರ ವಿರುದ್ಧ ಘೋಷಣೆ ಕೂಗತೊಡಗಿದರು.

ಶಾಸಕ ಪ್ರದೀಪ್ ಈಶ್ವರ್ ಕಾಂಗ್ರೆಸ್ ಬಾವುಟ ಹಿಡಿದು, ತೊಡೆ ತಟ್ಟುತ್ತಾ, ತಲೆಗೂದಲನ್ನು ಸವರಿಕೊಂಡವರಂತೆ ತಮ್ಮ ಕೂದಲನ್ನೂ ಅಲುಗಾಡಿಸಲು ನಿಮ್ಮಿಂದ ಆಗುವುದಿಲ್ಲವೆಂಬಂತೆ ವರ್ತಿಸಿದರು. ಇದರಿಂದ ಆಕ್ರೋಶಗೊಂಡ ಬಿಜೆಪಿ ಮುಖಂಡರು, ಕಾರ್ಯಕರ್ತರು ಕೈಯಲ್ಲಿ ಚಪ್ಪಲಿ ಹಿಡಿದು ನಿಂದಿಸಿದರೆ, ಬಿಜೆಪಿ ಮಹಿಳಾ ಮೋರ್ಚಾದವರು ಕೈಯಲ್ಲಿ ಪೊರಕೆ ಹಿಡಿದು, ತಮ್ಮ ಕೈಯಲ್ಲಿದ್ದ ಬಳೆಗಳನ್ನು ಬಿಚ್ಚಿ ಪ್ರದೀಪ್ ಈಶ್ವರಗೆ ತೋರಿಸಿದರು. ಕೆಲವರು ಅವಾಚ್ಯ ಶಬ್ದಗಳಿಂದ ನಿಂದಿಸಿದರೆ, ಇನ್ನೂ ಕೆಲವರು ಹುಚ್ಚ ಎಂದು ಕೂಗುತ್ತಾ ಪ್ರತಿಭಟನೆ ನಡೆಸಿದರು. ಮತ್ತೆ ಕೆಲವರು ಪೊರಕೆ, ಚಪ್ಪಲಿ, ಬಳೆಗಳನ್ನು ಎಸೆಯಲು ಪ್ರಯತ್ನಿಸಿದರು. ಎರಡೂ ಕಡೆಯವರು ಪರಸ್ಪರರಿಗೆ ಘೋಷಣೆ ಕೂಗುತ್ತಾ, ಮುನ್ನುಗ್ಗಲು ಪ್ರಯತ್ನಿಸುತ್ತಿದ್ದಂತೆ ಪೊಲೀಸ್ ಅಧಿಕಾರಿ, ಸಿಬ್ಬಂದಿ ಎರಡೂ ಕಡೆಯವರಿಗೆ ಸಮಾಧಾನಪಡಿಸಲು ಪ್ರಯತ್ನಿಸುತ್ತಿದ್ದರು. ಮತ್ತೊಂದು ಕಡೆ ಪರಿಸ್ಥಿತಿ ಕೈಮೀರಿದರೆ ತಾವು ಫೀಲ್ಡಿಗೆ ಇಳಿಯಲು ಸಿಆರ್‌ಪಿಎಸ್ ಅಧಿಕಾರಿ, ಸಿಬ್ಬಂದಿ ಸಹ ಸನ್ನದ್ಧರಾಗಿದ್ದರು. ಎರಡೂ ಕಡೆಯವರು ಕೈಕೈ ಮಿಲಾಯಿಸುವುದನ್ನು ತಪ್ಪಿಸಲು ಪೊಲೀಸರು ಮಧ್ಯ ಬ್ಯಾರಿಕೇಡ್‌ಗಳನ್ನು ಇಟ್ಟು, ಪರಿಸ್ಥಿತಿ ನಿಯಂತ್ರಿಸಲು ಹರಸಾಹಸಪಟ್ಟರು.

ವ್ಯಾಸ ಆಂಜನೇಯ ರಥೋತ್ಸವ

• ದಾವಣಗೆರೆ: ತಾಲೂಕಿನ ಲೋಕಿಕೆರೆ ಗ್ರಾಮದಲ್ಲಿ ವ್ಯಾಸ ಆಂಜನೇಯ ದೇವಾಲಯದ ರಥೋತ್ಸವ ಕಾರ್ಯಕ್ರಮಗಳು ಮಾ.29ರಂದು ನಡೆಯಲಿವೆ. ಬೆಳಗ್ಗೆ 10:30ಕ್ಕೆ ಗ್ರಾಮದ ಮುಖ್ಯ ವೃತ್ತದಲ್ಲಿ ಡೊಳ್ಳು ಕುಣಿತ, ವೀರಗಾಸೆ, ಭಜನೆ, ಬ್ಯಾಂಡ್ ಸೆಟ್ ಸಹಿತ ಜಾನಪದ ಕಲಾ ಪ್ರಕಾರಗಳ ಪ್ರದರ್ಶನ ಇರುತ್ತದೆ. ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಆಂಜನೇಯಸ್ವಾಮಿ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ಸಮಿತಿ ಕೋರಿದೆ.

ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿದ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ

ತಂತ್ರಜ್ಞಾನದಿಂದ ಆರ್ಥಿಕಾಭಿವೃದ್ಧಿ

• ಶಿಕಾರಿಪುರ : ಪ್ರಸ್ತುತ ಜಗತ್ತು ವಿವಿಧ ರೀತಿಯ ಸವಾಲುಗಳನ್ನು ಎದುರಿಸ ಬೇಕಾದ ಸಂದಿಗ್ಧ ಪರಿಸ್ಥಿತಿಯಲ್ಲಿದೆ. ತಂತ್ರಜ್ಞಾನ ಮತ್ತು ವಿವೇಚನೆಗಳು ಮಾತ್ರ ಜಗತ್ತನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಸಾಧ್ಯ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಖಜಾಂಚಿ ಬಿ.ವೈ. ವಿಜಯೇಂದ್ರ ಹೇಳಿದರು.

ಪಟ್ಟಣದ ಕುಮದ್ವತಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಬಹು ಶಿಸ್ತಿನ ಮತ್ತು ಸಮಕಾಲೀನ ವಿಧಾನಗಳಲ್ಲಿನ ನಾವೀನ್ಯತೆ ಹಾಗೂ ಸುಸ್ಥಿರತೆಯನ್ನು ಕಂಡುಕೊಳ್ಳುವಲ್ಲಿನ ಸವಾಲುಗಳ ಕುರಿತ ಒಂದು ದಿನದ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿ, ದೇಶದ ಬೆಳವಣಿಗೆಗೆ ಹೊಸ ಭರವಸೆ ಹಾಗೂ ಸ್ವರೂಪವನ್ನು ನೀಡುವಲ್ಲಿ ಶೈಕ್ಷಣಿಕ ಸಮ್ಮೇಳನಗಳು ಅಗತ್ಯವಾಗಿದ್ದು, ಇವುಗಳು ಹೊಸ ಹೊಸ ಸಂಶೋಧನೆ ಆವಿಷ್ಕಾರಗಳ ಮಾಹಿತಿ ವಿನಿಮಯ ವೇದಿಕೆಗಳಾಗಿವೆ ಎಂದು ಅಭಿಪ್ರಾಯಪಟ್ಟರು.

ಪ್ರಧಾನಿ ಮೋದಿ ಸಂಶೋಧನೆಗೆ ಹೆಚ್ಚು ಹೆಚ್ಚು ಅವಕಾಶಗಳನ್ನು ಹಾಗೂ ಅನುದಾನಗಳನ್ನು ನೀಡುತ್ತಿದ್ದಾರೆ. ಪ್ರಸಕ್ತ ಸಾಲಿನಲ್ಲಿ ರೂ.1 ಲಕ್ಷ ಕೋಟಿ ಸಹಾಯಧನವನ್ನು ಸಂಶೋಧನಾ ಕ್ಷೇತ್ರಕ್ಕೆ ನೀಡಲಾಗಿದೆ. 2047 ರಲ್ಲಿ ಸಂಪೂರ್ಣ ಅಭಿವೃದ್ಧಿಶೀಲ ಭಾರತ ಆಗಬೇಕೆಂಬ ಕನಸು ಮೋದಿಜಿ ಹೊಂದಿದ್ದು, ಅತಿ ಹೆಚ್ಚು ಯುವ ಜನಾಂಗವನ್ನು ಹೊಂದಿರುವ ದೇಶದ ಯುವ ಪೀಳಿಗೆ ಮೋದಿರವರ ಕಳಕಳಿ ಅರ್ಥೈಸಿಕೊಂಡು ತಂದೆ ತಾಯಿಗಳ



ಕನಸುಗಳೊಂದಿಗೆ ಸನ್ಮಾರ್ಗದ ಮೂಲಕ ಸದೃಢ ರಾಷ್ಟ್ರ ನಿರ್ಮಾಣಕ್ಕೆ ಕೈಜೋಡಿಸುವಂತೆ ಕರೆ ನೀಡಿದರು.

ವಿಜ್ಞಾನ ತಂತ್ರಜ್ಞಾನಾಧಾರಿತ ಶೈಕ್ಷಣಿಕ ಸಮ್ಮೇಳನಗಳು ಮಾತ್ರ ಶಿಕ್ಷಣ ಕ್ಷೇತ್ರದ ಮೂಲಕ ದೇಶವನ್ನು ಅಭಿವೃದ್ಧಿ ಪಥದತ್ತ ಸಾಗಲು ಸಹಾಯಕವಾಗಿವೆ. ಈ ದಿಸೆಯಲ್ಲಿ ಶೈಕ್ಷಣಿಕ ಸಮ್ಮೇಳನಗಳು,ಕಾರ್ಯಾಗಾರಗಳು ಹೆಚ್ಚು ಹೆಚ್ಚು ಆಯೋಜನೆಯಿಂದ ಸಂಶೋಧನೆ ಆವಿಷ್ಕಾರಗಳಿಗೆ ವೇದಿಕೆ ಕಲ್ಪಿಸಿ ಕೊಡಬೇಕಾಗಿದೆ ಎಂದು ತಿಳಿಸಿದರು.

ಸಮ್ಮೇಳನ ಉದ್ದೇಶಿಸಿ ಕುವೆಂಪು ವಿಶ್ವವಿದ್ಯಾಲಯದ ಗಣಕಶಾಸ್ತ್ರ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷ ಡಾ.ಬಿ.ಜೆ ಗಿರೀಶ್ ಮಾತನಾಡಿ, ಸಂಶೋಧನೆಗಳು ಜ್ಞಾನದ ಅನ್ವೇಷಣೆ, ಸಮಸ್ಯೆಗಳಿಗೆ ಪರಿಹಾರ ಮತ್ತು ಹೊಸ ಆವಿಷ್ಕಾರಗಳಿಗೆ ಅಡಿಪಾಯವಾಗಿದೆ. ಸಂಶೋಧನೆ ಕ್ಷೇತ್ರದಲ್ಲಿ ಮಾಹಿತಿಯನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ, ವಿಶ್ಲೇಷಿಸಿ, ಅಸ್ತಿತ್ವದಲ್ಲಿರುವ ಸಿದ್ಧಾಂತಗಳನ್ನು ಪರಿಷ್ಕರಿಸುವ ಅಗತ್ಯವಿದೆ ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ, ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯ ಪ್ರತಿನಿಧಿ ಡಾ.ಶಿವಕುಮಾರ್ ಜಿ.ಎಸ್ ಮಾತನಾಡಿ, ಸಂಶೋಧನೆಗಳು ಹೊಸ ಜ್ಞಾನದ ಅನ್ವೇಷಣೆಯ ಉದ್ದೇಶವನ್ನು ಹೊಂದಿದೆ. ಶಿಕ್ಷಣ ವಿಜ್ಞಾನ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಬದಲಾವಣೆಯಲ್ಲಿ ಸಂಶೋಧನೆಗಳು ಪ್ರಮುಖ ಪಾತ್ರ ವಹಿಸುತ್ತದೆ. ಇಂದಿನ ದಿನಗಳಲ್ಲಿ ಇಂತಹ ಸಮ್ಮೇಳನಗಳು ಅತಿ ಅಗತ್ಯವಾಗಿದೆ ಎಂದು ಹೇಳಿದರು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಅಧ್ಯಕ್ಷ ಶಿವಕುಮಾರ ಎಂ ಬಿ, ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದಲ್ಲಿ ಸಂಪನ್ಮೂಲ ವ್ಯಕ್ತಿಗಳು ವಿಶೇಷ ಉಪನ್ಯಾಸಗಳನ್ನು ನೀಡಿದರು. ರಾಜ್ಯದ ವಿವಿಧ ಜಿಲ್ಲೆಗಳ ಹಾಗೂ ಅಂತರ್ ರಾಜ್ಯದ ಹಲವು ಅಧ್ಯಾಪಕರು, ಸಂಶೋಧನಾರ್ಥಿಗಳು, ವಿದ್ಯಾರ್ಥಿಗಳು ತಮ್ಮ ವಿದ್ವತ್ಪೂರ್ಣ ಲೇಖನಗಳನ್ನು ಮಂಡಿಸಿದರು.

ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಡಾ.ರವೀಂದ್ರ ಕೆ.ಸಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪನ್ಯಾಸಕಿ ದಾನೇಶ್ವರಿ ನಿರೂಪಿಸಿ ಅತಿಥಿ ವಂದಿಸಿದರು. ಸಂಸ್ಥೆಯ ಅಧ್ಯಾಪಕ ವರ್ಗದವರು, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಹಾಜರಿದ್ದರು.



ದಾವಣಗೆರೆ ತಾಲೂಕು ಅತ್ತಿಗೆರೆ ಗ್ರಾಮದ ಶ್ರೀ ನಂದಿ ಬಸವೇಶ್ವರ ರಥೋತ್ಸವ ಶನಿವಾರ ವೈಭವದಿಂದ ಜರುಗಿತು. ವಿವಿಧ ಧಾರ್ಮಿಕ ಕಾರ್ಯಗಳು ಜರುಗಿದವು. ಭಕ್ತರು ರಥಕ್ಕೆ ಬಾಳೆಹಣ್ಣು, ಮೆಣಸು ಹಾಕಿ ಭಕ್ತಿ ಸಮರ್ಪಿಸಿದರು.

ತಪ್ಪುಗಳೇ ಜೀವನ ಸುಧಾರಣೆಗೆ ಮೆಟ್ಟಿಲು

• ಶಿವಮೊಗ್ಗ : ಜೀವನದಲ್ಲಿ ಎಲ್ಲರೂ ಒಂದಲ್ಲ ಒಂದು ತಪ್ಪು ಮಾಡಿರುತ್ತಾರೆ. ಆದರೆ ಆ ತಪ್ಪುಗಳೇ ಜೀವನ ಸುಧಾರಣೆಗೆ ಮೆಟ್ಟಿಲುಗಳಾಗಬೇಕೆಂದು ಲೇಖಕಿ ಹಾಗೂ ಮನ್ವಂತರ ಮಹಿಳಾ ಮಂಡಳಿಯ ಶ್ರೀರಂಜನಿ ದತ್ತಾತ್ರಿ ಹೇಳಿದರು.

ಯುಗಾದಿ ಹಬ್ಬ ಸಂಭ್ರಮ ಮತ್ತು ಮಹಿಳೆ-ಜೀವನ ಮೌಲ್ಯ ಎಂಬ ವಿಷಯವಾಗಿ ಜಿಲ್ಲಾ ಕೇಂದ್ರ ಕಾರಾಗೃಹ ಮಹಿಳಾ ಬಂದಿಗಳಿಗಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ, ತಪ್ಪು ಎನ್ನುವುದು ಕತ್ತಲೆಯ ಕೂಪದಂತೆ. ಅಸೂಯೆ, ಮಹತ್ವಾಕಾಂಕ್ಷೆ, ದುರಾಸೆ, ಕಾಮುಕತೆ, ಅಸುರಕ್ಷಾ ಭಾವ, ಅಂಕಾರದ ಅಪೇಕ್ಷೆ, ಕ್ರೋಧ, ಲೋಭ ಇತ್ಯಾದಿ ನಕಾರಾತ್ಮಕ ನಡವಳಿಕೆಗಳಿಂದಾಗಿ ತಪ್ಪುಗಳು ನಡೆದು ಹೋಗುತ್ತವೆ. ಬದುಕು ಬಂಧಿಲಾಗಬಾರದು. ನಗುವ ಹೂಬನ ಆಗಿರಬೇಕು ಎಂದರು.

ಎಲ್ಲವನ್ನು ಅನುಭವದಿಂದಲೇ ಪಡೆದು ಈ ಜಗತ್ತಿನ ಭವವನ್ನು ನೀಗಬೇಕು. ತಪ್ಪಿನ ನಂತರದಲ್ಲಿಯೂ ಆತ್ಮಾವಲೋಕನ ಗೈದಾಗ ಒಂದಷ್ಟು ನಿರುಮ್ಮಳತೆ ಆವರಿಸುವುದು ಜೀವನ ಸಾಕ್ಷಿ ಆಗಬೇಕು ಎಂದರು.

ಆತ್ಮ ಶಾಶ್ವತವಾದದ್ದು, ಅಚಲವಾದ ಚೈತನ್ಯ ಮತ್ತು ಜಾಗೃತ ಸ್ಥಿತಿ ಆದರೆ ಮನಸ್ಸು ಚಪಲವಿದ್ದು ಆಲೋಚನೆಗಳು, ಭಾವನೆಗಳು, ತರ್ಕಗಳಿಗೆ ಸಿಲುಕಿ ಬದಲಾಗುವ ಆಗರ. ಆತ್ಮ ಹುಟ್ಟಿದಾಗಲೂ ಇರುತ್ತದೆ ಸಾವಿನ ನಂತರವೂ ಇರುತ್ತದೆ. ಮನಸ್ಸು ನಮ್ಮ ಹುಟ್ಟಿನೊಂದಿಗೆ ರೂಪುಗೊಂಡು ಸತ್ತಾಗ ಅದು ಸಾಯುತ್ತದೆ.



ಹಾಗಾಗಿ ಆತ್ಮ ಮತ್ತು ಮನಸ್ಸು ಶಾಂತ, ಶುದ್ಧ ಹಾಗೂ ಸಮತೋಲನ ಸ್ಥಿತಿಯಲ್ಲಿರಬೇಕೆಂದರು.

ಮಹಿಳಾ ಕೇಂದ್ರಕಾರಾಗೃಹದ ಅಧೀಕ್ಷಕಿ ಭವ್ಯ ಪಿ. ಮಾತನಾಡಿ, ಮನಸ್ಸು, ತಪ್ಪಿತಸ್ಥ ಭಾವನೆಯಿಂದ ಹೊರಬರಲು ಆತ್ಮಾವಲೋಕನ, ಸ್ವ-ಸಹಾನುಭೂತಿ, ನಡವಳಿಕೆಗಳಲ್ಲಿ ಬದಲಾವಣೆ, ಸೂಕ್ತ ಚಿಕಿತ್ಸಕ ಮುಕ್ತಾಸ್ತಿ ಪಡೆಯಬೇಕಿದೆ ಎಂದರು.

ಮನ್ವಂತರ ಕಾರ್ಯದರ್ಶಿ ಆಶಾ ಪ್ರಕಾಶ್, ಸದಸ್ಯರಾದ ವಾಣಿ ಜಾನಕಿರಾಮಚಾರ್, ರಾಣಿಕಾ ಜೋಯ್ಸ್, ನೇತ್ರಾವತಿ ಮಂಜುನಾಥ್, ಗಂಗಾಂಬಿಕಾ, ಪ್ರವೀಣಾ, ನವನೀತಾ, ಜೈಲು ಶಿಕ್ಷಕಿ ಅಂಬಿಕಾ ಇದ್ದರು. ಈ ಸಂದರ್ಭದಲ್ಲಿ ಬಂದಿಗಳಿಗೆ ವಿನೋದ ಆಟಗಳನ್ನು ಆಡಿಸಿ, ರಸಪ್ರಶ್ನೆ ಸ್ಪರ್ಧೆ ನಡೆಸಲಾಯಿತು.

ಆದರ್ಶ ಬದುಕು ನಮ್ಮದಾಗಲಿ

• ಚನ್ನಗಿರಿ: ಕಾಯಕ ನಿಷ್ಠೆಯಿಂದ ಗಳಿಸಿ ಆದರ್ಶವಾದ ಬದುಕನ್ನು ಸಾಗಿಸಬೇಕು. ಇದರಿಂದ ಜೀವನ ಸಾರ್ಥಕ ಎಂದು ಪಾಂಡೋಮಟ್ಟಿ ವಿರಕ್ತ ಮಠದ ಡಾ.ಶ್ರೀಗುರುಬಸವ ಸ್ವಾಮೀಜಿ ಹೇಳಿದರು. ತಣಿಗೆರೆ ಗ್ರಾಮದಲ್ಲಿ ಶುಕ್ರವಾರ ನೌಕರರು ಮತ್ತು ಉದ್ಯಮಿದಾರರ ಸ್ನೇಹ ಬಳಗದ ವತಿಯಿಂದ ಏರ್ಪಡಿಸಿದ್ದ ಗೌರವ ಸಮರ್ಪಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯೆ ಸಾಧನೆ ಸ್ವತ್ತು, ಉತ್ತಮ ಆಲೋಚನೆ ನಮಗೆ ಯಶಸ್ಸು ತಂದುಕೊಡುತ್ತದೆ. ಕೂಡಿ ಬಾಳುವ ಪರಿ ಹಳ್ಳಿಗಳಲ್ಲಿ ನೆಲೆಯೂರಿದೆ. ಇಂದು ವಿಶ್ವದ ಜನರು ಯಾವ ಸಮಯದಲ್ಲಿ ಏನು ಆಪಾಯ ಬರುತ್ತೋ ಎಂಬ ಭಯದಲ್ಲಿದ್ದಾರೆ. ಅದಕ್ಕಾಗಿ ಜಗತ್ತು ಶಾಂತಿ ಬಯಸುತ್ತಿದೆ. ಮನುಷ್ಯನಿಗೆ ಸೌಕರ್ಯ ಮತ್ತು ಸವಲತ್ತು ಹೆಚ್ಚಾದರೆ ಉದಾಸೀನ ಹೆಚ್ಚಾಗುತ್ತದೆ. ದುಡಿಮೆಯ ಒಂದು ಭಾಗವನ್ನು ಸಮಾಜಕ್ಕೆ, ದೇವಾಲಯಕ್ಕೆ, ದಾಸೋಹಕ್ಕೆ, ಶಾಲೆಗೆ ಹಾಗೂ ಮಠಕ್ಕೆ ಕೊಡಬೇಕು. ಸಂಸ್ಕಾರ ಮತ್ತು ಸಂಸ್ಕೃತಿ ಅಳವಡಿಸಿ ಕೊಳ್ಳಬೇಕು ಎಂದು ಹೇಳಿದರು. ಡಿಎಸ್‌ಬಿ ಅಜ್ಜಯ್ಯ ಮಾತನಾಡಿ ನಮ್ಮ ಗ್ರಾಮದಲ್ಲಿ ಇತ್ತೀಚೆಗೆ ಕೃಷಿ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಲಾಗುತ್ತಿದೆ. ರೈತರು ಪ್ರಗತಿ ಪರತೆಯನ್ನು ಮೈಗೂಡಿಸಿ ಕೊಂಡಿದ್ದಾರೆ ಮತ್ತು ಶೈಕ್ಷಣಿಕವಾಗಿ ರ್‍ಯಾಂಕ್‌ಗಳು ಬಂದಿವೆ ಎನ್ನುವ ವಿಚಾರ ಶ್ಲಾಘನೀಯ ಎಂದು ಹೇಳಿದರು. ಪಿಸಿಪಿ ಅಧ್ಯಕ್ಷ ಡಾ.ಎಂ.ಜಯಪ್ಪ ಇದ್ದರು.

:: ಓದುಗರ ಗಮನಕ್ಕೆ :: ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

BEFORE THE DEPUTY COMMISSIONER, BENGALURU URBAN DISTRICT AT BENGALURU

SC/ST (A) NO : 68/2021-22

BETWEEN : Smt. Muniyamma and others ...Appellants

AND : The Assistant Commissioner Bengaluru North & Others ...Respondents

NOTICE / SUMMONS TO RESPONDENT'S NOS 6 to 86

To, 6) Sri. Changaiah, Aged about 97 years, S/o. late Narasaiah, R/at Sy. No.57, Byrasandra, Uttarahalli Hobli, Bengaluru South Taluk, Bengaluru Urban District.

7) Sri. Sidda Shetty, Aged about 82 years, No.134, 4th Cross, West of Chord Road, Rajaji Nagar, Bengaluru -560 010 8) Sri. Sanjeeva Murthy, Major, S/o. Venkataramana Shetty, No.134, 4th Cross, West of Chord Road, Rajaji Nagar, Bengaluru 560 013. 9) Smt. Yashodamma, Aged about 59 years, ...

IN THE COURT OF THE HON'BLE XLV ADDL. CITY CIVIL AND SESSIONS JUDGE (CCH-42) AT BANGALORE

O.S. NO. 3702 OF 2020

BETWEEN : KISHORE KUMAR S
101, Brindavan Garden, Haldenahalli, Anekal Bengaluru 562 106 PLAINTIFF

AND : 855TRIALLAWYERS.COM KPO SERVICES PVT. LTD & OTHERS
DEFENDANTS

SUMMONS / NOTICE TO DEFENDANT NO.1

855TRIALLAWYERS.COM KPO SERVICES PVT. LTD. PLOT NO.S 501-507 HM GENEVA HOUSE, #14, CUNNINGHAM ROAD BENGALURU-560052

WHEREAS, the plaintiff hereby instituted the above suit against the defendants including you for the relief of declaration and for other consequential reliefs. You are hereby summoned to appear before this Hon'ble court in person or by a pleader on 15/4/26 at 11.00 A.M. to answer the same, failing which the above suit will be disposed off ex-parte.

Given under my hand and the seal of the court on this the 27th day of March 2026.

By Order of the Court
Sd/- Senior Sheristedar
City Civil Court, Bengaluru

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ

IN THE COURT OF THE I ADDL. SENIOR CIVIL JUDGE AND CJM AT CHICKBALLAPUR.

O.S. No.731/2024.

Plaintiffs : Smt. Venkatalakshmamma & others.

V/s

Defendants : Smt. Thimmakka & others. D-8 : Smt. Sandya, D/o Late. Muniraju & Smt. Byamma, W/o Murthy, Aged about 23 years, R/at Vadanayakanahalli village, Kasaba Hobli, Sidlaghatta Taluk, Chickballapur District. D-10 Sri. Doddappaiah, S/o Late Munishamaiah Aged about 79 years, R/at Mirugurte Village, ...

IN THE COURT OF THE HON'BLE IIIrd ADDL SENIOR CIVIL JUDGE AT KOLAR

Ex.No. 65/2023

Decree Holder : Sri. Vijayakumar

-Vs-

Judgment Debtors :

Sri. Syed Ahmed dead by LR's & other,

1st JDR (h) legal heirs

1. Smt. Nageena W/o. Syed Shabbeer, Aged about 38 years.

2.Sri. Syed Reyhan S/o. Syed Shabbeer, Aged about 9 years.

3. Syed Zeefan S/o. Syed Shabbeer, Aged about 15 years, minor.

4. Aleeha D/o. Syed Shabbeer, Aged about 12 years minor.

5. Mirha D/o. Syed Shabbeer, Aged abpt 4 years, minor.

The minors are represented by their mother Smt. Nagheena.

All are residing at No.940, Rahamath Nagar, Kolar-563101.

SUIT SUMMONS TO FIRST JDR LEGAL HEIR(h) ABOVE NAMED THROUGH PAPER PUBLICATION UNDER ORDER 5 RULE 20 CPC:

The DHR filed the above petition to enforce the decree passed for specific performance of an agreement of sale executed by JDR's in favor of DHR in respect of petition schedule property the first JDR died during pendency of this petition, his legal heirs were brought on records, among the legal heirs, legal heir(h) also died, an application to bring the legal heirs of the said 1st JDR(h) is filed in the above case, but the said legal heirs named above are evading to receive notice on the said legal heir application inspite of sent the said notices, through court and also through RPAD. The above petition is now posted to 30/4/2026 at 11-00 AM before this Hon'ble court, the first JDR legal heir(h) legal heirs above named are hereby called upon to appear before this Hon'ble court in the above petition on the above said date and time either in person or through an Advocate to oppose the above suit, failing which the above appeal will be decided as per law, which please note.

24/03/2026

IN THE COURT OF THE CIVIL JUDGE & JMFC AT GUDIBANDE.

Crl Misc No.701/2025.

PETITIONERS : 1. Smt. V. Gayathri W/o Late V.Srinivasalu Aged about 36 years, 2. Sri. Vinith S/o Late V.Srinivasalu Aged about 10 years, Both are R/at Nakkalahalli village, Nagargere Hobli, Gowribidanur Taluk, Chickballapur District. And also R/at #5-89, Bayonapalli, Kanchisamudram, Anantapur, Andrapradesh-515331.

V/S

RESPONDENT : The Tahsildar, Gowribidanur Taluk, Gowribidanur.

PAPER PUBLICATION

The petitioners has filed this petition for grant of death certificate of the husband of the petitioner No.1 and father of petitioner No.2 by name Sri. V.Srinivasalu S/o Late Venkataramanappa, who died on 10.12.2012 at Nakkalahalli Village, Nagargere Hobli, Gowribidanur Taluk, Chickballapur District. The respondent has given non availability certificate in respect of the death of Sri. V.Srinivasalu. If any persons have any objections regarding the issue of death certificate, they can appear before the Hon'ble Court in person or duly instructed by his advocate on : 06/05/2026 at 11 'O' clock. If they failed to appear, the Hon'ble Court has proceed and decide the matter according to law. Given under my hand and seal of the court, this 25th Day March 2026.

By Order Of the Court, Sheristhadar,
Civil Judge & JMFC at Gudibande.
Advocate for Petitioners : Babajan, Advocate, Gudibande.

IN THE COURT OF THE PRL JUDGE AND J.M.F.C At KUNIGAL

Crl. Mis.No.391/2025.

Petitioner : 1. Ramesha Naik S/o Late Lacha Naik, Aged about 34, Advocate, R/o Panchavati Tandya, Kasaba Hobli, Kunigal taluk, Tumkur Dist. 2. Shoba Bai D/o Late Lacha Naik, Aged about 29 years, R/o Panchavti Padya, Kasaba Hobli, Kunigal taluk, Tumkur Dist. Now R/o #32/2, 6th Cross, Agrahara Dasarahalli, Bengalore South.

V/S

Respondent : The Thashildar Kunigal Taluk Office, Kunigal.

DRAFT PAPER PUBLICATION

Whereas the petitioner is filed the above petition Under Section 13(3) of birth and death Registration Act., Against the respondent for obtaining death certificate of petitioner Mother by name Smt. Nagi Bai W/o Late Lacha Naik was died on 20.02.2010 at petitioner house, Panchavati Tandya, Kasaba Hobli, Kunigal Taluk, Tumkur Dist. Hence the persons who are interested in the above case come and participate in the above proceedings. Hence this paper publication.

Take this notices that you are hereby called upon to appear before the Principal Civil Judge at Kuniga on : 30.04.2026 at 11.00 a.m. Therefore you are herby informed to appear on the said date. Failing which the case shall be heard and determined in your absence.

Given under my hand and the seal of the court on this day of 06.03.2026 at Kunigal.

By Order Of The Court Sheristedar (Admin.)
Prl Civil Judge & JMFC Kunigal.
Advocates for Plaintiff : Parvathi Bai
Advocate, Kunigal.

ಸಾರ್ವಜನಿಕ ಪ್ರಕಟಣೆ

...

ಹೌತಿ ದಾಳಿಯಿಂದ ಸಂಘರ್ಷ ಮತ್ತಷ್ಟು ಸಂಕೀರ್ಣ: ಹೌತಿ ಸೇನೆಯ ಬ್ರಿಗೇಡಿಯರ್ ಜನರಲ್ ಯಹ್ಯಾ ಸರೀ, ಇಸ್ರೇಲ್‌ನ ದಕ್ಷಿಣ ಭಾಗದಲ್ಲಿರುವ ಸೈನಿಕ ನೆಲೆಗಳನ್ನು ಗುರಿಯಾಗಿಸಿಕೊಂಡು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹಾರಿಸಲಾಗಿದೆ ಎಂದು ಹೇಳಿದ್ದಾರೆ. ಈ ವೇಳೆ ಇಸ್ರೇಲ್‌ನ ಬೀರ್ ಶೆಬಾ ನಗರ ಮತ್ತು ಪ್ರಮುಖ ಅಣು ಸಂಶೋಧನಾ ಕೇಂದ್ರದ ಸುತ್ತಮುತ್ತ ಸೈರನ್‌ಗಳು ಮೊಳಗಿವೆ.

ಟೆಲ್ ಅವೀವ್‌ನಲ್ಲಿ ಸ್ಫೋಟಗಳ ಸದ್ದು ಕೇಳಿಬಂದಿದ್ದು, ಅಗ್ನಿಶಾಮಕ ದಳವು 11 ಸ್ಥಳಗಳಲ್ಲಿ ರಕ್ಷಣಾಕಾರ್ಯ ನಡೆಸಿ ದೆ. ಹೌತಿ ದಾಳಿಗಳು ಮುಂದುವರಿದರೆ ಕೆಂಪು ಸಮುದ್ರ ಮಾರ್ಗದ ವಾಣಿಜ್ಯ ಸಾಗಣೆಗೂ ಅಪಾಯ ಎದುರಾಗುವ ಸಾಧ್ಯತೆ ಇದೆ.

ಇರಾನ್ ಅಣು ಸೌಕರ್ಯಗಳ ಮೇಲೆ ಇಸ್ರೇಲ್ ದಾಳಿ: ಇಸ್ರೇಲ್ ತನ್ನ ದಾಳಿಗಳನ್ನು ಟೆಹ್ರಾನ್‌ನ ಹೃದಯ ಭಾಗದಲ್ಲಿರುವ ಕ್ಷಿಪಣಿ ಉತ್ಪಾದನಾ ಕೇಂದ್ರಗಳ ಮೇಲೆ ಕೇಂದ್ರೀಕರಿಸಿದೆ. ಇರಾನ್‌ನ ಅಣುಶಕ್ತಿ ಸಂಸ್ಥೆ ಪ್ರಕಾರ, ಅರಾಕ್‌ನ ಶಹೀದ್ ಖೊಂಡಾಬ್ ಹೆವಿ ವಾಟರ್ ಸಂಕೀರ್ಣ ಮತ್ತು ಯಜ್ದ್ ಪ್ರಾಂತ್ಯದ ಯೆಲ್ಲೋಕೇಕ್ ಉತ್ಪಾದನಾ ಘಟಕ ಗುರಿಯಾಗಿವೆ. ಈ ದಾಳಿಯಿಂದ ಯಾವುದೇ ಹಾನಿಯಾಗಿಲ್ಲ ಎಂದು ಇರಾನ್ ಹೇಳಿದರೂ, ಇಸ್ರೇಲ್ ಇದನ್ನು ತನ್ನ ಅಣು ಕಾರ್ಯಕ್ರಮದ ಮೇಲೆ ದೊಡ್ಡ ಹೊಡೆತವೆಂದು ಹೇಳಿದೆ. ಇರಾನ್ ಇದಕ್ಕೆ ಪ್ರತಿದಾಳಿ ಮಾಡುವುದಾಗಿ ಎಚ್ಚರಿಸಿದೆ.

ಹಾರ್ಮುಜ್ ಮಹತ್ವ, ಜಾಗತಿಕ ಪರಿಣಾಮ: ಹಾರ್ಮುಜ್ ಜಲಸಂಧಿ ಜಗತ್ತಿನ ತೈಲ ಸಾಗಣೆಯನ್ನು ನಿರ್ವಹಿಸುವ ಪ್ರಮುಖ ಮಾರ್ಗವಾಗಿದೆ. ಯುದ್ಧದಿಂದ ಈ ಮಾರ್ಗದ ನಿಯಂತ್ರಣ ಗಂಭೀರ ಪರಿಣಾಮಗಳನ್ನು ಉಂಟುಮಾಡಿದೆ. ತೈಲ ಮಾತ್ರವಲ್ಲದೆ, ರಸಗೊಬ್ಬರ ವ್ಯಾಪಾರಕ್ಕೂ ಇದು ಪ್ರಮುಖವಾಗಿದೆ. ಇದರ ಪರಿಣಾಮವಾಗಿ ಕೃಷಿ ಮತ್ತು ಆಹಾರ ಭದ್ರತೆಯ ಮೇಲೆ ಜಾಗತಿಕ ಮಟ್ಟದಲ್ಲಿ ಒತ್ತಡ ಹೆಚ್ಚಾಗಿದೆ.

ರಾಜತಾಂತ್ರಿಕ ಪ್ರಯತ್ನ, ಸೈನಿಕ ಚಟುವಟಿಕೆ: ಅಮೆರಿಕ ಅಧ್ಯಕ್ಷರು ಯುದ್ಧ ಅಂತ್ಯಕ್ಕೆ ಮಾತುಕತೆ ಉತ್ತಮವಾಗಿ ಸಾಗುತ್ತಿವೆ ಎಂದು ಹೇಳಿದರೂ, ಇರಾನ್ ಇದನ್ನು ತಳ್ಳಿಹಾಕಿದೆ. ಅಮೆರಿಕ ನೀಡಿದ 15 ಅಂಶಗಳ ಪ್ರಸ್ತಾವವನ್ನು ಇರಾನ್ ತಿರಸ್ಕರಿಸಿ, ತನ್ನದೇ ಐದು ಅಂಶಗಳ ಯೋಜನೆಯನ್ನು ಮುಂದಿಟ್ಟಿದೆ. ಇದರಲ್ಲಿ ಪರಿಹಾರ ಹಣ ಮತ್ತು ಜಲಸಂಧಿಯ ಮೇಲಿನ ಸ್ವಾಯತ್ತತೆಯ ಮಾನ್ಯತೆ ಸೇರಿವೆ. ಈ ನಡುವೆ ಅಮೆರಿಕ ಸುಮಾರು 2,500 ಮೆರೈನ್ಸ್ ಮತ್ತು 1,000 ಪ್ಯಾರಾಟ್ರೂಪರ್‌ಗಳನ್ನು ಮಧ್ಯಪ್ರಾಚ್ಯಕ್ಕೆ ಕಳುಹಿಸಿದೆ.

ಸಾವಿನ ಸಂಖ್ಯೆ ಹೆಚ್ಚಳ: ಇರಾನ್‌ನಲ್ಲಿ 1,900ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಇಸ್ರೇಲ್‌ನಲ್ಲಿ 19 ಮಂದಿ ಸಾವಿಗೀಡಾಗಿದ್ದಾರೆ. ಲೆಬನಾನ್‌ನಲ್ಲಿ 1,100ಕ್ಕೂ ಹೆಚ್ಚು ಜನರು ಮೃತರಾಗಿದ್ದಾರೆ. ಅಮೆರಿಕದ 13 ಸೈನಿಕರು ಮೃತಪಟ್ಟಿದ್ದು, ಇರಾಕ್‌ನಲ್ಲಿ 80 ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದಾರೆ. ಗಲ್ಫ್ ರಾಷ್ಟ್ರಗಳಲ್ಲಿ 20 ಜನರು ಮೃತಪಟ್ಟಿದ್ದಾರೆ. ಇದರ ಜತೆಗೆ ಇರಾನ್‌ನಲ್ಲಿ 82,000 ಕಟ್ಟಡಗಳು ಹಾನಿಗೊಳಗಾಗಿದ್ದು, ಲಕ್ಷಾಂತರ ಜನರು ವಾಸಸ್ಥಳ ಕಳೆದುಕೊಂಡಿದ್ದಾರೆ.

ಮಾನವೀಯ ನೆರವು: ಸಂಯುಕ್ತ ರಾಷ್ಟ್ರಗಳ ವಿನಂತಿಯ ಮೇರೆಗೆ ಇರಾನ್ ಹಾರ್ಮುಜ್ ಜಲಸಂಧಿ ಮೂಲಕ ಮಾನವೀಯ ಸಹಾಯ ಮತ್ತು ಕೃಷಿ ಸರಕುಗಳ ಸಾಗಣೆಗೆ ಅನುಮತಿ ನೀಡಲು ಒಪ್ಪಿದೆ. ಇದು ಯುದ್ಧದ ನಡುವೆ ಒಂದು ಸಣ್ಣ ಸಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗಿದೆ. ಆದರೆ, ಒಟ್ಟಾರೆ ಪರಿಸ್ಥಿತಿ ಇನ್ನೂ ಗಂಭೀರವಾಗಿದ್ದು, ಯುದ್ಧ ಇನ್ನಷ್ಟು ವಿಸ್ತಾರಗೊಳ್ಳುವ ಭೀತಿ ಇದೆ.



ಸುಮಾರು 47,000 ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತ ಹಡಗು ಜಗ್ ವಸಂತ್ ಪಶ್ಚಿಮ ಏಷ್ಯಾದ ಉದ್ವಿಗ್ನತೆಯ ನಡುವೆ ಹಾರ್ಮುಜ್ ಜಲಸಂಧಿ ದಾಟಿ ಗುಜರಾತಿನ ವದಿನಾರ್ ಬಂದರಿಗೆ ತಲುಪಿದೆ.



ಯುಎಇಯಲ್ಲಿ ಐವರು ಭಾರತೀಯರಿಗೆ ಗಾಯ

• **ದುಬೈ:** ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಅಲ್ಲಿನ ಸೇನೆ ಬ್ಯಾಲಿಸ್ಟಿಕ್ ಕ್ಷಿಪಣಿಯೊಂದನ್ನು ಹೊಡೆದುರುಳಿಸಿದಾಗ ಅದರ ಅವಶೇಷಗಳು ಬಿದ್ದು ಐವರು ಭಾರತೀಯರು ಗಾಯಗೊಂಡಿದ್ದಾರೆ ಎಂದು ಶುಕ್ರವಾರ ಅಧಿಕೃತ ವರದಿಗಳು ತಿಳಿಸಿವೆ. ಕ್ಷಿಪಣಿಯನ್ನು ತಡೆದಾಗ ಅದರ ಚೂರುಗಳು ವಸತಿ ಪ್ರದೇಶದ ಮೇಲೆ ಬಿದ್ದಿದ್ದರಿಂದ ಈ ಘಟನೆ ಸಂಭವಿಸಿದೆ ಎಂದು ತಿಳಿದುಬಂದಿದೆ. ಸ್ಥಳೀಯ ತುರ್ತು ಸೇವಾ ಸಿಬ್ಬಂದಿ ಸಂತ್ರಸ್ತರನ್ನು ಹತ್ತಿರದ ಆಸ್ಪತ್ರೆಗಳಿಗೆ ದಾಖಲಿಸಿದ್ದು, ಸಣ್ಣಪುಟ್ಟ ಗಾಯಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಐವರೂ ಪ್ರಸ್ತುತ ಅಪಾಯದಿಂದ ಪಾರಾಗಿದ್ದಾರೆ ಎಂದು ವರದಿಗಳು ತಿಳಿಸಿವೆ. ಕ್ಷಿಪಣಿ ನಿಗದಿತ ಗುರಿಯನ್ನು ತಲುಪುವ ಮೊದಲೇ ಅದನ್ನು ವಾಯು ರಕ್ಷಣಾ ವ್ಯವಸ್ಥೆಯ ಮೂಲಕ ಯಶಸ್ವಿಯಾಗಿ ನಾಶಪಡಿಸಿರುವುದಾಗಿ ಯುಎಇ ರಕ್ಷಣಾ ಸಚಿವಾಲಯ ಖಚಿತಪಡಿಸಿದೆ. ಈ ಕ್ಷಿಪಣಿಯ ಮೂಲದ ಬಗ್ಗೆ ಅಧಿಕಾರಿಗಳು ಪೂರ್ಣ ಪ್ರಮಾಣದ ತನಿಖೆ ಪ್ರಾರಂಭಿಸಿದ್ದಾರೆ.

20 ಅಮೆರಿಕ ಸೈನಿಕರಿಗೆ ಗಾಯ, ಹಲವಾರು ವಿಮಾನಗಳಿಗೆ ಹಾನಿ

ಸೌದಿ ಅರೇಬಿಯಾದ ಪ್ರಿನ್ಸ್ ಸುಲ್ತಾನ್ ಏರ್ ಬೇಸ್ ಮೇಲೆ ಇರಾನ್ ನಡೆಸಿದ ದಾಳಿಯಲ್ಲಿ ಅಮೆರಿಕದ 20ಕ್ಕೂ ಹೆಚ್ಚು ಸೈನಿಕರು ಗಾಯಗೊಂಡಿದ್ದಾರೆ, ಹಲವಾರು ವಿಮಾನಗಳು ಹಾನಿಗೊಳಗಾಗಿವೆ ಎಂದು ಮೂಲಗಳು ತಿಳಿಸಿವೆ.

ಶುಕ್ರವಾರ ಮಾತ್ರವೇ ಆರು ಕ್ಷಿಪಣಿಗಳು ಮತ್ತು 29 ಡ್ರೋನ್‌ಗಳ ಮೂಲಕ ದಾಳಿ ನಡೆದಿದ್ದು, ಕನಿಷ್ಠ 15 ಸೈನಿಕರು ಗಾಯಗೊಂಡಿದ್ದಾರೆ. ಈ ತಾಣವು ಸೌದಿ ವಾಯುಪಡೆಯ ನಿಯಂತ್ರಣದಲ್ಲಿದ್ದರೂ, ಅಮೆರಿಕದ ಪಡೆಗಳು ಕೂಡ ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ದಾಳಿಯಲ್ಲಿ ಇಬ್ಬರು ಸೈನಿಕರು ತೀವ್ರವಾಗಿ ಗಾಯಗೊಂಡಿದ್ದು, ಅಮೆರಿಕದ ಇಂಧನ ಮರುಪೂರಣ ವಿಮಾನಗಳನ್ನು ಗುರಿಯಾಗಿಸಲಾಗಿದೆ. ಘಟನೆಯ ನಂತರ ವಿಮಾನಗಳಿಗೆ ಆಗಿರುವ ಹಾನಿಯನ್ನು ತೋರಿಸುವ ಉಪಗ್ರಹ ಚಿತ್ರಗಳು ಅಂತರ್ಜಾಲದಲ್ಲಿ ಪ್ರಕಟವಾಗಿವೆ. ಹೆಸರು ಹೇಳಲು ಬಯಸದ ಇಬ್ಬರು ಅಧಿಕಾರಿಗಳು, ಸಾವುನೋವು ಮತ್ತು ಹಾನಿಯನ್ನು ಖಚಿತಪಡಿಸಿದ್ದಾರೆ. ತಿಂಗಳ ಕಾಲ ನಡೆದ ಈ ಸಂಘರ್ಷದಲ್ಲಿ 300ಕ್ಕೂ ಹೆಚ್ಚು ಸೈನಿಕರು ಗಾಯಗೊಂಡಿದ್ದಾರೆ ಎಂದು ಯುಎಸ್ ಸೆಂಟ್ರಲ್ ಕಮಾಂಡ್ ವರದಿ ಮಾಡಿದೆ. ಹೆಚ್ಚಿನವರು ಕರ್ತವ್ಯಕ್ಕೆ ಮರಳಿದ್ದರೂ, 30 ಮಂದಿ ಇನ್ನೂ ಚೇತರಿಸಿಕೊಳ್ಳುತ್ತಿದ್ದಾರೆ ಮತ್ತು 10 ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ ಎಂದು ತಿಳಿದುಬಂದಿದೆ.

ಈ ಹಿಂದೆ ಮಾ.1ರಂದು ಇದೇ ವಾಯುನೆಲೆಯ ಮೇಲೆ ಇರಾನ್ ದಾಳಿ ನಡೆಸಿತ್ತು. ಅದರಲ್ಲಿ ಆರ್ಮಿ ಸಾರ್ಜೆಂಟ್ ಬೆಂಜಮಿನ್ ಎನ್. ಪೆನ್ನಿಂಗ್ಟನ್ ಸಾವನ್ನಪ್ಪಿದ್ದರು. ಇರಾನ್ ಸೇನೆಯನ್ನು ಸಂಪೂರ್ಣವಾಗಿ ನಾಶಪಡಿಸಲಾಗಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಹೇಳಿಕೆ ನೀಡಿದ ಮರುದಿನವೇ ಈ ದಾಳಿ ನಡೆದಿದೆ. ಈ ಯುದ್ಧದಲ್ಲಿ ಒಟ್ಟು 13 ಸೈನಿಕರು ಮೃತಪಟ್ಟಿದ್ದಾರೆ.

ಅಮೆರಿಕದ ಟೊಮಾಹಾಕ್ ಕ್ಷಿಪಣಿಗಳ ದಾಸ್ತಾನು ಇಳಿಕೆ

• **ವಾಷಿಂಗ್ಟನ್:** ಇರಾನ್ ವಿರುದ್ಧದ ಯುದ್ಧದ ಮೊದಲ ನಾಲ್ಕು ವಾರಗಳಲ್ಲಿ ಅಮೆರಿಕದ ಮಿಲಿಟರಿ 850ಕ್ಕೂ ಹೆಚ್ಚು ಟೊಮಾಹಾಕ್ ಕ್ರೂಸ್ ಕ್ಷಿಪಣಿಗಳನ್ನು ಪ್ರಯೋಗಿಸಿದ್ದು, ಇದರಿಂದ ಶಸ್ತ್ರಾಸ್ತ್ರ ದಾಸ್ತಾನು ಕ್ಷೀಣಿಸುವ ಕಳವಳ ಉಂಟಾಗಿದೆ. ಕ್ಷಿಪಣಿಗಳ ಹೆಚ್ಚಿನ ಬಳಕೆಯ ನಂತರ ಮಧ್ಯಪ್ರಾಚ್ಯದಲ್ಲಿ ಪ್ರಸ್ತುತ ಕ್ಷಿಪಣಿಗಳ ಮಟ್ಟ ಆತಂಕಕಾರಿ ಅನ್ನುವಷ್ಟು ಕಡಿಮೆಯಿದೆ ಎಂದು ಪೆಂಟಗನ್ ಅಧಿಕಾರಿಗಳು ವಿವರಿಸಿದ್ದಾರೆ. ಅಮೆರಿಕ ಮತ್ತು ಇಸ್ರೇಲಿ ಪಡೆಗಳನ್ನು ಒಳಗೊಂಡ ಜಂಟಿ ಮಿಲಿಟರಿ ಕಾರ್ಯಾಚರಣೆಯಾದ ಆಪರೇಷನ್ ಎಪಿಕ್ ಫ್ಯೂರಿ ಸಮಯದಲ್ಲಿ ಈ ನಿಖರ-ನಿರ್ದೇಶಿತ ಶಸ್ತ್ರಾಸ್ತ್ರಗಳನ್ನು ಹೆಚ್ಚು ಬಳಸಲಾಗಿತ್ತು. ಟೊಮಾಹಾಕ್‌ಗಳ ಭಾರಿ ಬಳಕೆ, ಇತರ ಪ್ರದೇಶಗಳಿಂದ ಶಸ್ತ್ರಾಸ್ತ್ರಗಳನ್ನು ತರಿಸುವ ಮತ್ತು ಉತ್ಪಾದನೆಯನ್ನು ಹೆಚ್ಚಿಸುವ ಬಗ್ಗೆ ಆಂತರಿಕ ಚರ್ಚೆಗಳಿಗೆ ಕಾರಣವಾಗಿದೆ. ಪ್ರಸ್ತುತ ಉತ್ಪಾದನಾ ಸಾಮರ್ಥ್ಯ, ವರ್ಷಕ್ಕೆ ಸುಮಾರು 600 ಕ್ಷಿಪಣಿಗಳನ್ನು ತಯಾರಿಸಲು ಅವಕಾಶ ನೀಡುತ್ತದೆ. ಆದರೆ ಕಳೆದ ರಕ್ಷಣಾ ಬಜೆಟ್‌ನಲ್ಲಿ ಕೇವಲ 57 ಘಟಕಗಳಿಗೆ ಮಾತ್ರ ಅನುಮೋದನೆ ನೀಡಲಾಗಿತ್ತು. ಪ್ರತಿ ಕ್ಷಿಪಣಿಯ ವೆಚ್ಚ ಸುಮಾರು 3.6 ಮಿಲಿಯನ್ ಯುಎಸ್ ಡಾಲರ್ ಆಗಿದ್ದು, ಇದನ್ನು ನಿರ್ಮಿಸಲು ಎರಡು ವರ್ಷಗಳವರೆಗೆ ಸಮಯ ಬೇಕಾಗುತ್ತದೆ. ತನ್ನ ಕಾರ್ಯತಂತ್ರದ ಗುರಿಗಳನ್ನು ಸಾಧಿಸಲು ಮಿಲಿಟರಿ ಬಳಿ ಸಾಕಷ್ಟು ಯುದ್ಧಸಾಮಗ್ರಿಗಳಿವೆ, ಎಂದು ಪೆಂಟಗನ್ ವಕ್ತಾರರು ತಿಳಿಸಿದ್ದಾರೆ. ಆದರೂ, ಈ ಬಾರಿ ಅಮೆರಿಕ ದಾಸ್ತಾನಿನ ಸುಮಾರು ನಾಲ್ಕನೇ ಒಂದು ಭಾಗದಷ್ಟು ಕ್ಷಿಪಣಿಗಳನ್ನು ಬಳಸಿದೆ ಎಂದು ವಿಶ್ಲೇಷಕರು ಅಂದಾಜಿಸಿದ್ದಾರೆ.

ಕ್ಷಿಪಣಿಗಳ ಮೇಲೆ ಭಾರತದ ಜನತೆಗೆ ಧನ್ಯವಾದ ಎಂದು ಉಲ್ಲೇಖ

ಇಸ್ರೇಲ್ ಮೇಲೆ ಇರಾನ್ ಮತ್ತೆ ದಾಳಿ

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧ ಪರಿಸ್ಥಿತಿ ಜಗತ್ತಿನ ಗಮನ ಸೆಳೆದಿದೆ. ಇಸ್ರೇಲ್ ಮೇಲೆ ಇರಾನ್ ಮತ್ತೆ ದಾಳಿ ಆರಂಭಿಸಿದ್ದು, ಇಸ್ರೇಲಿ ಸೈನಿಕ ನೆಲೆಗಳನ್ನು ಗುರಿಯಾಗಿಸಿಕೊಂಡಿದೆ. ಇರಾನ್ ಹಲವು ಹಂತಗಳಲ್ಲಿ ಕ್ಷಿಪಣಿಗಳು ಮತ್ತು ಡ್ರೋನ್‌ಗಳ ಮೂಲಕ ದಾಳಿಗಳನ್ನು ಮುಂದುವರಿಸುತ್ತಿದೆ. ಇತ್ತೀಚಿನ ದಾಳಿಗಳಲ್ಲಿ ಅಶ್ಡೋಡ್ ಪ್ರದೇಶದ ತೈಲ ಸಂಗ್ರಹಣಾ ಟ್ಯಾಂಕ್‌ಗಳು ಮತ್ತು ಡಿಪೋಗಳು, ಮೋದಿಯಿನ್ ಪ್ರದೇಶದ ಸೈನಿಕ ನೆಲೆಗಳು ಸೇರಿದಂತೆ ಪ್ರಮುಖ ತಂತ್ರಜ್ಞಾನ ಕೇಂದ್ರಗಳನ್ನು ಗುರಿಯಾಗಿಸಲಾಗಿದೆ. ಜತೆಗೆ, ಅಲ್-ಧಫ್ರಾ, ಅಲ್-ಉದೈದ್ ಮತ್ತು ಅಲಿ ಅಲ್-ಸೇಲಂ ವಾಯುನೆಲೆಗಳಲ್ಲಿರುವ ಅಮೆರಿಕನ್ ಸೈನಿಕ ಮೂಲಸೌಕರ್ಯಗಳ ಮೇಲೆಯೂ ದಾಳಿ ನಡೆದಿದೆ. ಈ ಪ್ರದೇಶಗಳಲ್ಲಿ ಸಾರಿಗೆ ವಿಮಾನಗಳು ಹಾಗೂ ಡ್ರೋನ್‌ಗಳ ನಿರ್ವಹಣೆಗಾಗಿ ಬಳಸುವ ಹ್ಯಾಂಗರ್‌ಗಳಿಗೂ ಹಾನಿಯಾಗಿದೆ ಎಂದು ವರದಿಯಾಗಿದೆ.

ಗಮನ ಸೆಳೆದ ವಿಚಿತ್ರ ಸಂಗತಿ: ಈ ದಾಳಿಗಳ ನಡುವೆ ಒಂದು ವಿಚಿತ್ರ ಸಂಗತಿ ಗಮನ ಸೆಳೆದಿದೆ. ಇರಾನ್ ತನ್ನ ಕ್ಷಿಪಣಿಗಳ ಮೇಲೆ ''ಭಾರತದ ಜನತೆಗೆ ಧನ್ಯವಾದ'' ಮತ್ತು ''ಜರ್ಮನ್ ಜನತೆಗೆ ಧನ್ಯವಾದ'' ಎಂಬ ಸಂದೇಶಗಳನ್ನು ಬರೆದಿದೆ. ಭಾರತಕ್ಕೆ ಧನ್ಯವಾದ ಹೇಳಿರುವುದು ಇದೇ ಮೊದಲ ಬಾರಿಯಲ್ಲ ಎಂದು ಹೇಳಲಾಗುತ್ತಿದೆ. ಇದಕ್ಕೂ ಮೊದಲು, ಭಾರತದಲ್ಲಿನ ಇರಾನ್ ರಾಯಭಾರಿ ಕಚೇರಿ ಕಾಶ್ಮೀರ ಜನರ ಬೆಂಬಲವನ್ನು ಉಲ್ಲೇಖಿಸಿ ಕೃತಜ್ಞತೆ ವ್ಯಕ್ತಪಡಿಸಿತ್ತು.

ಕಾಶ್ಮೀರ ಪ್ರದೇಶದಲ್ಲಿ ಇರಾನ್‌ಗೆ ಬೆಂಬಲವಾಗಿ ಜನರು ದೇಣಿಗೆ ಸಂಗ್ರಹಿಸಿರುವುದಾಗಿ ವರದಿಯಾಗಿದೆ. ಈ ದೇಣಿಗೆಗಳಲ್ಲಿ ಹಣ ಮಾತ್ರವಲ್ಲದೆ, ಚಿನ್ನ, ಬೆಳ್ಳಿ ಮತ್ತು ಇತರ ಬೆಲೆಬಾಳುವ ವಸ್ತುಗಳೂ ಸೇರಿವೆ. ವೃದ್ಧರು, ಮಹಿಳೆಯರು ಮತ್ತು ಮಕ್ಕಳು ಸಹ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಕೊಡುಗೆ ನೀಡಿದ್ದಾರೆ. ಕೆಲ ಮಕ್ಕಳು ತಮ್ಮ ಉಳಿತಾಯ ಹಣವನ್ನು ನೀಡಿದರೆ, ಕೆಲವು ಯುವತಿಯರು ತಮ್ಮ ಆಭರಣಗಳನ್ನು ದಾನ ಮಾಡಿದ್ದಾರೆ. ಈ ಬೆಂಬಲದ ಹಿನ್ನೆಲೆ ಇರಾನ್ ಭಾರತೀಯರಿಗೆ ಧನ್ಯವಾದ ಹೇಳುತ್ತಿರುವುದಾಗಿ ವಿಶ್ಲೇಷಿಸಲಾಗುತ್ತಿದೆ.

ಕಿರುಸುದ್ದಿ

ಛತ್ತೀಸ್‌ಗಢ: ಮೂವರು ಮಾವೋಗಳ ಶರಣಾಗತಿ

• **ಕಂಕೇರ್:** ಓರ್ವ ಮಹಿಳಾ ನಕ್ಸಲ್ ಸಹಿತ ಮೂವರು ನಕ್ಸಲರು ಶನಿವಾರ ಛತ್ತೀಸ್‌ಗಢದ ಕಂಕೇರ್ ಜಿಲ್ಲೆಯಲ್ಲಿ ಶರಣಾಗತರಾಗಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ. ರಾಧಿಕಾ ಕುಂಜಮ್, ಸಂದೀಪ್ ಕಡಿಯಮ್ ಮತ್ತು ರೈನು ಪಡ್ಡಾ ಶರಣಾದ ನಕ್ಸಲರು. ಕುಂಜಮ್ ಮತ್ತು ಕಡಿಯಮ್ ನಿಷೇಧಿತ ನಕ್ಸಲ್ ಸಂಘಟನೆಯ ಪ್ರದೇಶ ಸಮಿತಿ ಸದಸ್ಯರಾಗಿದ್ದು, ಎರಡು ಸೆಲ್ಫ್ ಲೋಡಿಂಗ್ ರೈಫಲ್‌ಗಳು ಮತ್ತು. 303 ರೈಫಲ್‌ಗಳನ್ನು ಪೊಲೀಸರಿಗೆ ಒಪ್ಪಿಸಿರುವುದಾಗಿ ಪೊಲೀಸ್ ಅಧೀಕ್ಷಕ ನಿಖಿಲ್ ರಖೇಚ ತಿಳಿಸಿದ್ದಾರೆ. ಶರಣಾಗತ ನಕ್ಸಲರು ನೀಡಿದ ಮಾಹಿತಿ ಮೇರೆಗೆ, ವಲಯದಲ್ಲಿ ಸಕ್ರಿಯರಿರುವ ಇತರ ನಕ್ಸಲರನ್ನು ಸಂಪರ್ಕಿಸಿ, ಹಿಂಸೆ ತೊರೆದು ಸಮಾಜದ ಹಾದಿಗೆ ಸೇರುವಂತೆ ಮನವೊಲಿಸುವ ನಿಟ್ಟಿನಲ್ಲಿ, ಅವರ ಪತ್ತೆಗಾಗಿ ಶೋಧ ನಡೆದಿದೆ. ಮಾ. 25,26ರಂದು ಆರು ಮಂದಿ ನಕ್ಸಲೀಯರು ಛತ್ತೀಸ್‌ಗಢ ಜಿಲ್ಲೆಯಲ್ಲಿ ಪೊಲೀಸರಿಗೆ ಶರಣಾಗಿದ್ದರು. ವಲಯದಲ್ಲಿರುವ ಮಿಕ್ಕ ಮಾವೋವಾದಿಗಳು ಕೂಡ ಹಿಂಸೆ ತೊರೆದು ಶರಣಾಗುವಂತೆ ಬಸ್ತಾರ್ ವಲಯದ ಐಜಿಪಿ ಸುಂದರ್‌ರಾಜ್ ಪಟ್ಟಿಲಿಂಗಂ ನಕ್ಸಲರಿಗೆ ಮರು ಮನವಿ ಮಾಡಿದ್ದಾರೆ.

ರಾಮನವಮಿ ಮೆರವಣಿಗೆ ಮೇಲೆ ಕಿಡಿಗೇಡಿಗಳ ಕಲ್ಲು

• **ಕೋಲ್ಕತ್ತಾ:** ಶ್ರೀ ರಾಮನವಮಿ ಮೆರವಣಿಗೆಗೆ ದುಷ್ಕರ್ಮಿಗಳ ಕಲ್ಲು ತೂರಾಟದಿಂದ ಹಿಂಸೆ ಭುಗಿಲೆದ್ದು, ಎರಡು ಗುಂಪುಗಳು ಘರ್ಷಣೆಗಿಳಿದ ಹಿನ್ನೆಲೆಯಲ್ಲಿ ಮುರ್ಷಿದಾಬಾದ್ ಜಿಲೆಯ ರಘುನಾಥಗಂಜ್ ಮತ್ತು ಜಂಗಿಪುರ ಪ್ರದೇಶಗಳಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಹಿಂಸಾಚಾರಗಳಿಗೆ ಸಂಬಂಧಿಸಿ ಇದುವರೆಗೆ 30 ಮಂದಿಯನ್ನು ಬಂಧಿಸಲಾಗಿದೆ. ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ಹಿರಿಯ ಪೊಲೀಸ್‌ಅಧಿಕಾರಿ ತಿಳಿಸಿದ್ದಾರೆ . ಬಂಧಿತರ ವಿವರಗಳನ್ನು ಪೊಲೀಸರು ಬಹಿರಂಗಪಡಿಸಿಲ್ಲ, ಜಂಗಿಪುರ ಆಸ್ಪತ್ರೆ ಮತ್ತು ಸಮೀಪದ ಪ್ರದೇಶಗಳಲ್ಲಿ ಪ.ಬಂಗಾಳ ಪೊಲೀಸ್ ಸಿಬ್ಬಂದಿ, ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳು ಗಸ್ತು ತಿರುಗುತ್ತಿದ್ದು, ಜನರಲ್ಲಿ ಧೈರ್ಯ ಮೂಡಿಸಲು ಆರ್‌ಎಎಫ್ ರೂಟ್ ಮಾರ್ಚ್ ನಡೆಸಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಪ್ರದೇಶದಲ್ಲಿನ ಹಲವು ಅಂಗಡಿಗಳು, ಮಾರುಕಟ್ಟೆಗಳು ಮುಚ್ಚಿವೆ. ರಸ್ತೆಗಳಲ್ಲಿ ಬೆರಳೆಣಿಕೆಯ ಜನರು ಓಡಾಡುತ್ತಿದ್ದಾರೆ. ವಾಹನ ಸಂಚಾರ ಮಾತ್ರ ಎಂದಿನಂತಿದೆ. ಪ್ರದೇಶದಲ್ಲಿ ಸಬ್ ಡಿವಿಜನಲ್ ಆಸ್ಪತ್ರೆಯಿದ್ದು, ಜನರಿಗೆ ಯಾವುದೇ ತೆರ ಅನಾನುಕೂಲವಾಗದಂತೆ ನೋಡಿಕೊಳ್ಳುತ್ತಿದ್ದೇವೆ. ನಮ್ಮ ಅಧಿಕಾರಿಗಳು, ಅರೆಸೇನಾ ಪಡೆ ಸಿಬ್ಬಂದಿ ಗರಿಷ್ಠ ಸಂಖ್ಯೆಯಲ್ಲಿ ಸ್ಥಳದಲ್ಲಿ ಪಹರೆಯಲ್ಲಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ. ಶ್ರೀರಾಮನವಮಿ ಶೋಭಾಯಾತ್ರೆಯಂಗ ಭಕ್ತಿ ಸಂಗೀತದ ವ್ಯವಸ್ಥೆ ಮಾಡಲಾಗಿತ್ತು. ಸಂಗೀತದ ಸದ್ದು ಜೋರಾಯಿತೆಂದು ದುಷ್ಕರ್ಮಿಗಳ ಗುಂಪೊಂದು ರಘುನಾಥಗಂಜ್‌ನ ಮಕೆಂಝಿ ಪಾರ್ಕ್ ಬಳಿ ರಾಮಭಕ್ತರಲ್ಲಿ ಕ್ಯಾತೆ ತೆಗೆದು ಜಗಳಕ್ಕಿಳಿದಿದ್ದಾರು.

ಸೇನೆಗೆ 2,000 ಪ್ರಹಾರ್ ಮಶೀನ್ ಗನ್ ಹಸ್ತಾಂತರ

• **ಗ್ವಾಲಿಯರ್:** ಮೇಕ್ ಇನ್ ಇಂಡಿಯಾ ಉಪಕ್ರಮದನ್ವಯ ದೇಶದಲ್ಲಿಯೇ ಉತ್ಪಾದಿಸಲ್ಪಟ್ಟ 2,000 ಪ್ರಹಾರ್ ಲಘು ಮಶೀನ್ ಗನ್‌ಗಳನ್ನು(ಎಲ್‌ಎಂಜಿ) ಅದಾನಿ ಡಿಫೆನ್ಸ್ ಭಾರತೀಯ ಸೇನೆಗೆ ಶನಿವಾರ ಹಸ್ತಾಂತರಿಸಿದೆ. ಗ್ವಾಲಿಯರ್ ನಗರದ ಹೊರವಲಯದಲ್ಲಿನ ಸಣ್ಣ ಶಸ್ತ್ರಾಸ್ತ್ರಗಳ ಉತ್ಪಾದನಾ ಘಟಕದಲ್ಲಿ 7.62 ಎಂ.ಎಂ ಬಂದೂಕುಗಳನ್ನು ಅದಾನಿ ಡಿಫೆನ್ಸ್ ಮತ್ತು ಏರೋಸ್ಪೇಸ್ ಉತ್ಪಾದನೆ ಮಾಡಿದೆ.

ಗಡಿ ಪ್ರದೇಶಗಳಲ್ಲಿ, ಅದರಲ್ಲೂ ಮುಖ್ಯವಾಗಿ ಲೈನ್ ಆಫ್ ಆಕ್ಚುವಲ್ ಕಂಟ್ರೋಲ್ (ಎಲ್‌ಎಸಿ) ಮತ್ತು ಲೈನ್ ಆಫ್ ಕಂಟ್ರೋಲ್(ಎಲ್‌ಒಸಿ)ನಲ್ಲಿ ರಕ್ಷಣಾ ನಿಯೋಜನೆಗಾಗಿ ಭಾರತ ಸಾಕಷ್ಟು ರಕ್ಷಣಾ ಹೂಡಿಕೆ ನಡೆಸುತ್ತಿದೆ. ಈ ಸಂದರ್ಭ ಹೊಸ ಶಸ್ತ್ರಾಸ್ತ್ರಗಳು ಸೇನೆಯ ಬಲ ಹೆಚ್ಚಿಸಲಿದ್ದು, ಒಟ್ಟಾರೆ ಯುದ್ಧ ಕಾರ್ಯಾಚರಣಾ ಸಾಮರ್ಥ್ಯವನ್ನು ಹಾಗೂ ಯುದ್ಧ ಸನ್ನದ್ಧತೆಯನ್ನು ಹೆಚ್ಚಿಸಲಿದೆ. 508 ಎಂ.ಎಂ. (20 ಇಂಚಿನ) ಬ್ಯಾರೆಲ್ ಉದ್ದವನ್ನು ಪ್ರಹರ್ ಹೊಂದಿರಲಿದೆ. ಲಘು ಮಶೀನ್ ಗನ್‌ನ 8 ಕೆ.ಜಿ. ತೂಕವಿರಲಿದ್ದು, 1,100 ಎಂ.ಎಂ. ಉದ್ದವಿರಲಿದೆ. ಇದಲ್ಲದೆ ಪ್ರಹರ್ ಬಂದೂಕು 1,000 ಮೀ. ದೂರದವರೆಗೂ ದಾಳಿ ನಡೆಸಬಲ್ಲ ಸಾಮರ್ಥ್ಯವನ್ನು ಹೊಂದಿರಲಿದೆ. ಗ್ವಾಲಿಯರ್ ಘಟಕದಲ್ಲಿ ನಡೆದ ಔಪಚಾರಿಕ ಸಮಾರಂಭದಲ್ಲಿ ಶನಿವಾರ ಲಘು ಮಶೀನ್ ಗನ್‌ಗಳನ್ನು ಸೇನೆಗೆ ಹಸ್ತಾಂತರಿಸಲಾಯಿತು. ರಕ್ಷಣಾ ಸಚಿವಾಲಯದ ರಕ್ಷಣಾ ಸ್ವಾಮ್ಯ ಅಧಿಕಾರಿ ಎ.ಅನ್ಬರಸು, ಅದಾನಿ ಡಿಫೆನ್ಸ್ ಮತ್ತು ಏರೋಸ್ಪೇಸ್ ಸಿಇಒ ಆಶಿಶ್ ರಾಜ್‌ವಂಶಿ ಮತ್ತು ಹಿರಿಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಇದ್ದರು.

ತ.ನಾಡು: ಡಿಎಂಕೆ 164 ಅಭ್ಯರ್ಥಿಗಳ ಪಟ್ಟಿ ಪ್ರಕಟ

• **ಚೆನ್ನೈ:** ತಮಿಳುನಾಡಿನ ಆಡಳಿತಾರೂಢ ಡಿಎಂಕೆ ಪಕ್ಷವು ಏ.23ರಂದು ನಡೆಯಲಿರುವ ವಿಧಾನಸಭೆ ಚುನಾವಣೆಗಾಗಿ 164 ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳನ್ನು ಶನಿವಾರ ಘೋಷಿಸಿದೆ. ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹಾಗೂ ಅವರ ಪುತ್ರ ಮತ್ತು ಉಪ ಮುಖ್ಯಮಂತ್ರಿಯಾದ ಉದಯನಿಧಿ ಅವರನ್ನು ಅವರ ಪ್ರಸ್ತುತ ನಗರ ಕ್ಷೇತ್ರಗಳಿಂದ ಮತ್ತೆ ಅಭ್ಯರ್ಥಿಗಳನ್ನಾಗಿ ಘೋಷಿಸಲಾಗಿದೆ.



ಇದರಿಂದ ಹಲವಾರು ಕ್ಷೇತ್ರಗಳಲ್ಲಿ ಪ್ರತಿಸ್ಪರ್ಧಿ ಎಐಎಡಿಎಂಕೆಯೊಂದಿಗೆ ನೇರ ಸ್ಪರ್ಧೆ ಏರ್ಪಡಲಿದೆ.

ಕಾಂಗ್ರೆಸ್ ಹಾಗೂ ಎಡಪಂಥೀಯ ಪಕ್ಷಗಳನ್ನು ಒಳಗೊಂಡ ಮೈತ್ರಿ ಪಕ್ಷಗಳೊಂದಿಗೆ ನಡೆದ ಹಲವು ದಿನಗಳ ಸೀಟ್ ಹಂಚಿಕೆ ಮಾತುಕತೆಗಳನ್ನು ಪೂರ್ಣಗೊಳಿಸಿದ ಡಿಎಂಕೆ, ಅವರಿಗೆ ಮೀಸಲಾದ ಕ್ಷೇತ್ರಗಳನ್ನು ಗುರುತಿಸಿದೆ. ಇದಾದ ಕೆಲವೇ ನಿಮಿಷಗಳಲ್ಲಿ, ಡಿಎಂಕೆ ಮುಖ್ಯ ಕಚೇರಿ ಅಣ್ಣಾ ಅರಿವಾಲಯಂದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಸ್ಟಾಲಿನ್ ತಮ್ಮ ಪಕ್ಷದ 164 ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದರು. ಸೀಟ್ ಹಂಚಿಕೆ ಮಾತುಕತೆಯಲ್ಲಿ ಯಾವುದೇ ವಿಳಂಬವಾಗಿಲ್ಲ ಎಂದು ಸ್ಟಾಲಿನ್ ಹೇಳಿದ್ದಾರೆ. ಸಹನೆಯುತ ಚರ್ಚೆಗಳು ಎಲ್ಲರೂ ತೃಪ್ತರಾಗುವಂತೆ ಮಾಡಿವೆ ಎಂದು ಅವರು ಹೇಳಿದರು. ಜೊತೆಗೆ ಮೈತ್ರಿ ಪಕ್ಷಗಳೊಂದಿಗೆ ಏಕತೆ ಕಾಪಾಡಲು ಪ್ರಯತ್ನಿಸುತ್ತಿದ್ದೇನೆ ಎಂದೂ ತಿಳಿಸಿದ್ದಾರೆ.

ನಕ್ಸಲ್ ಪಿಡುಗು ನಿರ್ನಾಮದ ಬಗ್ಗೆ ನಾಳೆ ಲೋಕ ಚರ್ಚೆ

• **ಹೊಸದಿಲ್ಲಿ:** ದೇಶವನ್ನು ನಕ್ಸಲ್ ಪಿಡುಗಿನಿಂದ ಮುಕ್ತಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರದ ಪ್ರಯತ್ನಗಳ ಬಗ್ಗೆ ಲೋಕಸಭೆಯಲ್ಲಿ ಸೋಮವಾರ ಚರ್ಚೆ ನಡೆಯಲಿದೆ. ಮಾರ್ಚ್ 30ರ ಲೋಕಸಭಾ ಕಲಾಪ ಯಾದಿಯನ್ವಯ, ಸದನದ ನಿಯಮ 193ರಡಿ, ವಾಮಪಂಥೀಯ ತೀವ್ರವಾದದಿಂದ ದೇಶವನ್ನು ಮುಕ್ತಗೊಳಿಸುವ ಪ್ರಯತ್ನಗಳು ಎಂಬ ವಿಷಯವನ್ನು ಸರಕಾರ ಚರ್ಚೆಗೆ ಪಟ್ಟಿ ಮಾಡಿದೆ.

2026ರ ಮಾ.31ರೊಳಗೆ ನಕ್ಸಲ್ ಪಿಡುಗನ್ನು ದೇಶದಿಂದ ಸಂಪೂರ್ಣ ನಿರ್ಮೂಲನೆ ಮಾಡಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಈ ಹಿಂದೆ ಹೇಳಿದ್ದರು. ಲೋಕಸಭೆಯ ಕಲಾಪಗಳ ನೀತಿ ನಿಯಮಾವಳಿಗಳ 193ನೇ ನಿಯಮದಡಿ ನೀಡಲಾಗಿರುವ ನೋಟೀಸ್ ಮೇರೆಗೆ ,ನಕ್ಸಲ್ ವಿಷಯವನ್ನು ಚರ್ಚೆಗೆ ನಿಗದಿಪಡಿಸಲಾಗಿದೆ. ಟಿಡಿಪಿ ಸಂಸದ ಬೈರೆಡ್ಡಿ ಶಬರಿ ಮತ್ತು ಶಿವಸೇನಾ ಸದಸ್ಯ ಶ್ರೀಕಾಂತ ಶಿಂಧೆ ನೋಟೀಸ್ ನೀಡಿದ್ದರು.

ಮೋದಿ ಸರ್ಕಾರದಲ್ಲಿ ದೇಶದ ಜನತೆಗೆ ಸಂಪೂರ್ಣ ಭರವಸೆ: ಕೇಂದ್ರ ಗೃಹ ಸಚಿವ ಶಾ

ತೈಲ ಬೆಲೆ ಏರಿಕೆ ಇಲ್ಲದ ಏಕೈಕ ದೇಶ ಭಾರತ

• **ಹೊಸದಿಲ್ಲಿ:** ಜಗತ್ತಿನಾದ್ಯಂತ ಇಂಧನ ದರ ಮಿತಿಮೀರಿ ಹೆಚ್ಚುತ್ತಿದ್ದರೂ ಭಾರತದಲ್ಲಿ ಮಾತ್ರ ಪೆಟ್ರೋಲ್, ಡೀಸೆಲ್ ದರಗಳಲ್ಲಿ ಯಾವುದೇ ಹೆಚ್ಚಳವಾಗಿಲ್ಲ, ಇದಕ್ಕೆ ಕಾರಣೀಭೂತ ನರೇಂದ್ರ ಮೋದಿ ಸರ್ಕಾರದಲ್ಲಿ ಸಂಪೂರ್ಣ ಭರವಸೆ ಕಾಯ್ದುಕೊಳ್ಳಿ ಎಂದು ದೇಶವಾಸಿಗಳಿಗೆ ಗೃಹ ಸಚಿವ ಶಾ ಕರೆ ನೀಡಿದ್ದಾರೆ. ದೇಶದಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳ ಅಥವಾ ಇಂಧನ ಕೊರತೆ ಇಲ್ಲ, ಜಾಗತಿಕ ಬಿಕ್ಕಟ್ಟಿನ ಹೊರತೂ ಪೂರೈಕೆ ಮತ್ತು ದರಗಳನ್ನು ಸೂಕ್ತವಾಗಿ ನಿರ್ವಹಿಸುವಲ್ಲಿ ಭಾರತ ಸರಕಾರ ಯಶಸ್ವಿಯಾಗಿದೆ ಎಂದು ಹೇಳಿದ್ದಾರೆ.

ದೇಶದಲ್ಲಿ ಯಾವುದೇ ಲಾಕ್‌ಡೌನ್ ಇಲ್ಲ, ಇಂಧನ, ಅನಿಲ ವಹಿವಾಟುಗಳು ದೇಶದಲ್ಲಿ ಮಾಮೂಲಾಗಿರುವುದು ಮತ್ತು ಜನರಿಗೆ ಅಬಾಧಿತವಾಗಿ ಇವನ್ನು ನಾವು ಪೂರೈಸುತ್ತೇವೆ ಎಂದವರು ಟೈಮ್ಸ್ ನೌ ಸಮ್ಮಿಟ್‌ಗೆ ಸಂದರ್ಶನದಲ್ಲಿ ತಿಳಿಸಿದ್ದಾರೆ. ಜನರಿಗೆ ಯಾವ ಕಾರಣಕ್ಕೂ ಕಷ್ಟವಾಗಬಾರದು ಎಂಬುದು ಸರಕಾರ ಕಾಳಜಿ. ಹಾಗಾಗೇ ಸರಕಾರ ತೈಲ ಉತ್ಪನ್ನಗಳ ಮೇಲಿನ ಅಬ್ಕಾರಿ ಸುಂಕ ಕಡಿತಗೊಳಿಸಿ, ಹಣಕಾಸು ಹೊರೆಯನ್ನು ಸ್ವಯಂ ಹೊತ್ತುಕೊಂಡಿದೆ ಎಂದು, ಸರಕಾರ ಬಿಕ್ಕಟ್ಟನ್ನು ಸರಿಯಾಗಿ ನಿಭಾಯಿಸುತ್ತಿಲ್ಲ ಎಂಬ ಟೀಕೆಗಳಿಗೆ ಸಚಿವರು ಪ್ರತ್ಯುತ್ತರಿಸಿದರು.

ಜಗತ್ತಿನ ಇತರ ದೇಶಗಳಲ್ಲಿ ಪರಿಸ್ಥಿತಿ ತೀರಾ ಗಂಭೀರವಾಗಿದೆ. ಫಿಲಿಪೈನ್ಸ್‌ನಲ್ಲಿ ರಾಷ್ಟ್ರೀಯ ತುರ್ತುಸ್ಥಿತಿ ಘೋಷಿಸಲಾಗಿದೆ. ಶ್ರೀಲಂಕಾದಲ್ಲಿ 8ಲೀಟರ್ ಮೀರಿ ಇಂಧನ ಪೂರೈಕೆ ಇಲ್ಲ, ಥೈಲ್ಯಾಂಡ್‌ನಲ್ಲಿ ವರ್ಕ್ ಫ್ರಂ ಹೋಮ್ ಜಾರಿಯಾಗಿದೆ. ವಿಯೆಟ್ನಾಂ ಮತ್ತು ಪಾಕಿಸ್ತಾನಗಳಲ್ಲಿ ವಿಮಾನಗಳ ಹಾರಾಟ ಸಂಖ್ಯೆಯನ್ನು ಕಡಿತಗೊಳಿಸಲಾಗಿದೆ ಮತ್ತು ವಾರದ ದುಡಿಮೆ ದಿನಗಳನ್ನು ನಾಲ್ಕಕ್ಕೆ ಇಳಿಸಲಾಗಿದೆ.

ವಿಯೆಟ್ನಾಂನಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ದರಗಳಲ್ಲಿ ಶೇ.50ರಷ್ಟು ಹೆಚ್ಚಳವಾಗಿದೆ. ಪಾಕಿಸ್ತಾನದಲ್ಲಿ 17ರಿಂದ 20ಶೇಕಡಾ ಏರಿಕೆಯಾಗಿದೆ. ಯುರೋಪ್‌ನಲ್ಲಿ 20ರಿಂದ 30ಶೇಕಡಾ ಹೆಚ್ಚಳವಾದರೆ ಇಂಗ್ಲೆಂಡ್‌ನಲ್ಲಿ 7ರಿಂದ 13ಶೇ.ಹೆಚ್ಚಳವಾಗಿದೆ. ಆಸ್ಟ್ರೇಲಿಯಾದಲ್ಲಿ ಶೇ.18ರಷ್ಟು , ಅಮೆರಿಕದಲ್ಲಿ ಶೇ.17ರಿಂದ 34ರಷ್ಟು , ಕಾಂಬೋಡಿ ಶೇ. 19 ಮತ್ತು ನೈಜೀರಿಯಾದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ದರದಲ್ಲಿ 40ರಿಂದ 48ಶೇಕಡಾ ಏರಿಕೆಯಾಗಿದೆ ಎಂದು ಸಚಿವ ಶಾ ಮಾಹಿತಿ ನೀಡಿದರು. ಪೆಟ್ರೋಲ್ , ಡೀಸೆಲ್ ದರಗಳಲ್ಲಿ ಶೂನ್ಯ ಏರಿಕೆ ಮತ್ತು ಇಂಧನ ಪೂರೈಕೆ ಅಬಾಧಿತವಾಗಿರುವ ರಾಷ್ಟ್ರವೊಂದಿದ್ದರೆ ಅದು ಭಾರತ ಮಾತ್ರ ಎಂದು ಸಚಿವರು ಗಮನ ಸೆಳೆದರು.

ಸಂಪೂರ್ಣ ಹೊರೆಹೊತ್ತ ರಾಷ್ಟ್ರ ಕೂಡ ಭಾರತ

ಬಿಕ್ಕಟ್ಟಿನ ಸಂಪೂರ್ಣ ಹೊರೆಯನ್ನು ಸ್ವಯಂ ಭರಿಸಿಕೊಂಡ ರಾಷ್ಟ್ರ ಕೂಡ ಭಾರತ ಮಾತ್ರ. ಇನ್ಯಾವ ದೇಶಗಳೂ ಈ ರೀತಿ ಪೂರ್ಣ ಹೊರೆಯನ್ನು ವಹಿಸಿಕೊಂಡಿಲ್ಲ, ಕೇಂದ್ರ ಸರಕಾರ ಕಳೆದ 11 ವರ್ಷಗಳಲ್ಲಿ ಕೈಗೊಂಡ ಕ್ರಮಗಳಿಂದಾಗಿ ಭಾರತೀಯ ಆರ್ಥಿಕತೆಯಿಂದು ಅದೆಷ್ಟು ಚೈತನ್ಯಶೀಲವಾಗಿದೆಯೆಂದರೆ, ಸರ್ಕಾರ ತನ್ನ ಅಬಕಾರಿ ಸುಂಕವನ್ನೂ ಕಡಿತಗೊಳಿಸಲು ಶಕ್ತವಾಗಿದೆ. 2014ರಲ್ಲಿ ಅಸ್ತಿತ್ವದಲ್ಲೇ ಇದ್ದಿರದ ತೈಲ ಮೀಸಲನ್ನು ಕೇಂದ್ರ ಸರ್ಕಾರ ಹೆಚ್ಚಿಸಿದೆ ಮಾತ್ರವಲ್ಲ, ತೈಲ ಖರೀದಿಯನ್ನೂ ವೈವಿಧ್ಯಗೊಳಿಸಿದೆ. ಹಿಂದೆ ಭಾರತ 27ರಾಷ್ಟ್ರಗಳಿಗೆ ಸೀಮಿತವಾಗಿ ತೈಲ ಆಮದು ಮಾಡುತ್ತಿತ್ತು . ಇಂದು ಈ ಸಂಖ್ಯೆ 42ಕ್ಕೆ ಏರಿದೆ ಎಂದು ಸಚಿವ ಶಾ ಹೆಮ್ಮೆ ವ್ಯಕ್ತಪಡಿಸಿದರು. ವಿಪಕ್ಷ ನಾಯಕ ರಾಹುಲ್ ಗಾಂಧಿಯನ್ನು ನಂಬಬೇಡಿ ಎಂದು ಜನರಿಗೆ ಸಚಿವರು ಸಲಹೆಯಿತ್ತರು.

ಸಚಿವ ರಾಜನಾಥ್ ನೇತೃತ್ವದ ರಕ್ಷಣಾ ಸ್ವಾಧೀನ ಮಂಡಳಿ ಒಪ್ಪಿಗೆ

ಕ್ಷಿಪಣಿ ರಕ್ಷಣಾ ವ್ಯವಸ್ಥೆ ವಿಸ್ತರಣೆ

• **ಹೊಸದಿಲ್ಲಿ:** ಭಾರತದ ದೂರಗಾಮಿ ವಾಯು ರಕ್ಷಣಾ ಸಾಮರ್ಥ್ಯಗಳನ್ನು ಹೆಚ್ಚಿಸಲು ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದ ರಕ್ಷಣಾ ಸ್ವಾಧೀನ ಮಂಡಳಿ 2.38 ಲಕ್ಷ ಕೋಟಿ ರೂ.ಗಳ ಖರೀದಿ ಯೋಜನೆಗೆ ಅನುಮೋದನೆ ನೀಡಿದೆ.

ಈ ರಕ್ಷಣಾ ಉತ್ತೇಜನದ ಪ್ರಮುಖ ಭಾಗವಾಗಿ, ರಷ್ಯಾದಿಂದ ಹೆಚ್ಚುವರಿ ಐದು ಎಸ್-400 ಟ್ರಯಂಫ್ ದೂರಗಾಮಿ ಭೂಮಿಯಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿ ವ್ಯವಸ್ಥೆಗಳನ್ನು ಖರೀದಿಸಲಾಗುತ್ತಿದೆ. ಈ ವ್ಯವಸ್ಥೆಗಳು 400 ಕಿಲೋಮೀಟರ್ ವ್ಯಾಪ್ತಿಯಲ್ಲಿ ಬರುವ ಶತ್ರು ವಿಮಾನಗಳು, ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಪತ್ತೆಹಚ್ಚಿ ನಾಶಪಡಿಸುವ ಸಾಮರ್ಥ್ಯ ಹೊಂದಿವೆ. 2018ರಲ್ಲಿ ನಡೆದ ಐದು ಘಟಕಗಳ ಮೊದಲ ಒಪ್ಪಂದದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದ್ದು, ಇದರೊಂದಿಗೆ ಒಟ್ಟು ಎಸ್-400 ವ್ಯವಸ್ಥೆಗಳ ಸಂಖ್ಯೆ ಹತ್ತಕ್ಕೆ ಏರಲಿದೆ.

ಗಡಿಗಳಲ್ಲಿ ಕಣ್ಗಾವಲು: ಕ್ಷಿಪಣಿ ವ್ಯವಸ್ಥೆಗಳ ಜತೆಗೆ 100 ಮಾನವರಹಿತ ಕಾಂಬ್ಯಾಟ್ ಏರಿಯಲ್ ವೆಹಿಕಲ್ (ಯುಸಿಎವಿ) ಮತ್ತು 120 ಲೋಯಿಟರಿಂಗ್ ಮ್ಯೂನಿಷನ್‌ಗಳ ಖರೀದಿಗೆ ಮಂಡಳಿ ಅನುಮತಿ ನೀಡಿದೆ. ಚೀನಾ ಮತ್ತು ಪಾಕಿಸ್ತಾನದ ಗಡಿಗಳಲ್ಲಿ, ಕಣ್ಗಾವಲು ಮತ್ತು ಆಕ್ರಮಣಕಾರಿ ಕಾರ್ಯಾಚರಣೆಗಳನ್ನು ಬಲಪಡಿಸಲು ಈ ಯುಸಿಎವಿಗಳನ್ನು ಬಳಸಿಕೊಳ್ಳುವ ಯೋಜನೆಯಿದೆ. ಅಲ್ಲದೆ, 200 ಬ್ರಹ್ಮೋಸ್ ಎಕ್ಸ್‌ಟೆಂಡೆಡ್ ರೇಂಜ್ ಕ್ರೂಸ್ ಕ್ಷಿಪಣಿಗಳು ಮತ್ತು 400 ಸುಧಾರಿತ ಟೋಡ್ ಆರ್ಟಿಲರಿ ಗನ್ ಸಿಸ್ಟಮ್‌ಗಳ ಸ್ಥಳೀಯ ಉತ್ಪಾದನೆಗೂ ಅನುಮೋದನೆ ನೀಡಲಾಗಿದೆ.

ಮಿಲಿಟರಿ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಉತ್ತೇಜಿಸಲು ಈ ಹೆಚ್ಚಿನ ಯೋಜನೆಗಳು ಬೈ ಇಂಡಿಯನ್-ಐಡಿಡಿಎಂ ವರ್ಗದಲ್ಲಿ ಬರುತ್ತವೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಈ ಯೋಜನೆ, ಭಾರತೀಯ ನೌಕಾಪಡೆ ಮತ್ತು ವಾಯುಪಡೆಗಾಗಿ ದೇಶೀಯ ಎಲೆಕ್ಟ್ರಾನಿಕ್ ಯುದ್ಧ ಸಾಮಗ್ರಿಗಳು ಮತ್ತು ಹೆಚ್ಚಿನ ಎತ್ತರದಲ್ಲಿ ಹಾರುವ ಕಣ್ಗಾವಲು ಡ್ರೋನ್‌ಗಳ ಅಭಿವೃದ್ಧಿಯನ್ನು ಒಳಗೊಂಡಿದೆ.

ಪ್ರಾದೇಶಿಕ ಭದ್ರತಾ ಸವಾಲುಗಳ ಹಿನ್ನೆಲೆಯಲ್ಲಿ ಈ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದ್ದು, ಇದು ಇತ್ತೀಚಿನ ವರ್ಷಗಳಲ್ಲಿ ಒಂದೇ ದಿನದಲ್ಲಿ ನೀಡಲಾದ ಅತಿದೊಡ್ಡ ರಕ್ಷಣಾ ಅನುಮೋದನೆಗಳಲ್ಲಿ ಒಂದಾಗಿದೆ. ಈ ಖರೀದಿ ಪ್ರಕ್ರಿಯೆ, ಸಶಸ್ತ್ರ ಪಡೆಗಳ ಯಂತ್ರಾಂಶಗಳನ್ನು ಆಧುನೀಕರಿಸುವ ಗುರಿ ಹೊಂದಿರುವ ಬಹು-ವರ್ಷದ ಒಪ್ಪಂದಗಳನ್ನು ಒಳಗೊಂಡಿರುತ್ತದೆ.

ವಿರಾಟ್ ಆಟಕ್ಕೆ ಹೈದರಾಬಾದ್ ತತ್ತರ | ಬಿಟ್ಟಲ್ಲೇ ಶುರುಮಾಡಿದ ಆರ್‌ಸಿಬಿ | ಕಿಶನ್ ಹೋರಾಟ ವ್ಯರ್ಥ

ಹಾಲಿ ಚಾಂಪಿಯನ್ಸ್‌ಗೆ ಗೆಲುವಿನ ಆರಂಭ

ಚಿತ್ರ: ಮೋಹನ್ ಕುಮಾರ್ ಬಿ.ಎನ್

▸ ಪೃಥ್ವಿರಾಜ್ ಕುಲಕರ್ಣಿ

• **ಬೆಂಗಳೂರು:** ಹಾಲಿ ಚಾಂಪಿಯನ್ ಆರ್‌ಸಿಬಿ ಐಪಿಎಲ್ 2026ರ ಉದ್ಘಾಟನಾ ಪಂದ್ಯದಲ್ಲಿ ಸನ್ ರೈಸರ್ಸ್ ವಿರುದ್ಧ 26 ಎಸೆತಗಳು ಉಳಿದಿರುವಂತೆ 6 ವಿಕೆಟ್ ಜಯ ಸಾಧಿಸಿದ್ದು, ಗೆಲುವಿನ ಶುಭಾರಂಭ ಮಾಡಿದೆ.

ಆರ್‌ಸಿಬಿ ಅಭಿಮಾನಿಗಳಿಗೆ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಕ್ರಿಕೆಟ್ ಮರಳಿದ ಖುಷಿ. ತಮ್ಮ ನೆಚ್ಚಿನ ಆಟಗಾರ ವಿರಾಟ್ ಕೊಹ್ಲಿ ಸ್ಫೋಟಕ ಬ್ಯಾಟಿಂಗ್ ಆ ಖುಷಿಗೆ ಬೂಸ್ಟರ್! ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್‌ನ 19ನೇ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲಿ ಹೈದರಾಬಾದ್ ತಂಡವನ್ನು 6 ವಿಕೆಟ್‌ನಿಂದ ಸೋಲಿಸಿದ ನಂತರ ಚಿನ್ನಸ್ವಾಮಿ ಕ್ರೀಡಾಂಗಣದ ತುಂಬಾ ಕೆಂಪು ಜೆರ್ಸಿ, ಕೈಯಲ್ಲಿ ಧ್ವಜ ಹಿಡಿದುಕೊಂಡು ಎಂದಿನಂತೆ ಮೈದಾನಕ್ಕೆ ಬಂದಿದ್ದ ಸಮಸ್ತ ಆರ್‌ಸಿಬಿ ಅಭಿಮಾನಿಗಳ ದಿನ ಸಂಭ್ರಮವಾಗಿ ಮುಕ್ತಾಯಗೊಂಡಿತು.

ನಿರೀಕ್ಷೆಗಳೊಂದಿಗೆ ಮೈದಾನಕ್ಕಿಳಿದ ಹೈದರಾಬಾದ್ ಇಶಾನ್ ಕಿಶನ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ 201 ರನ್ ಗಳಿಸಿತು. ಗುರಿ ಬೆನ್ನತ್ತಿದ ಆರ್‌ಸಿಬಿ 15.4 ಓವರ್‌ಗಳಲ್ಲೇ 203 ರನ್ ಗಳಿಸಿ ಪಂದ್ಯ ಮುಗಿಸಿತು.

ದೇವದತ್ತ ಪಡಿಕ್ಕಲ್ ಹಾಗೂ ವಿರಾಟ್ ಕೊಹ್ಲಿ ಪಂದ್ಯದ ಹೀರೋ ಎನಿಸಿದರು. ಜೇಕಬ್ ಡಫಿ ಪಂದ್ಯಶ್ರೇಷ್ಠ ಗೆದ್ದುಕೊಂಡರು. ಎದುರಾಳಿ ಪರ ಇಶಾನ್ ಕಿಶನ್ ಸ್ಫೋಟಕ ಬ್ಯಾಟಿಂಗ್ ಮಾಡಿ ಮಿಂಚಿದರು.

ಆರ್‌ಸಿಬಿ ಅಬ್ಬರದ ಆಟ: ಗುರಿ ಬೆನ್ನತ್ತುವಾಗ ಯಾವ ಕ್ಷಣಕ್ಕೂ ಆರ್‌ಸಿಬಿ ಅಭಿಮಾನಿಗಳು ಕೆಳಗೆ ಕೂರಲಿಲ್ಲ. ಸ್ಥಳೀಯ ಪ್ರತಿಭೆ ಪಡಿಕ್ಕಲ್ ಹೈದರಾಬಾದ್ ಪಡೆಯ ವಿಶ್ವಾಸ ಮುರಿದು ಹಾಕಿದರು. ಅದೆಲ್ಲಾ ಆರಂಭದಲ್ಲಿ ಸಾಲ್ಟ್ ವಿಕೆಟ್ ಬಿದ್ದರೂ ವಿರಾಟ್ ಕೊಹ್ಲಿ ಹಾಗೂ ಪಡಿಕ್ಕಲ್ ಅವರ ಆಟಕ್ಕೆ ಕಿಂಚಿತ್ತು ಪರಿಣಾಮ ಬೀಳಲಿಲ್ಲ. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಪಡಿಕ್ಕಲ್ ಸಿಂಗಲ್, ಬೌಂಡರಿಗಳೊಂದಿಗೆ ಸೆಟ್ ಆಗುವ ಮುಲಾಜಿಗೆ ಬೀಳಲೇ ಇಲ್ಲ. ಮೊದಲ ಎಸೆತದಿಂದಲೂ ದಂಡಿಸಿ ಪಂದ್ಯವನ್ನು ಬೇಗನೇ ಮುಗಿಸಿಕೊಂಡು ಹೋಗುವ ಅವರ ನಿರ್ಧಾರ ಸ್ಫೋಟಕ ಬೌಂಡರಿ, ಗಗನಚುಂಬಿ ಸಿಕ್ಸರ್‌ಗಳ ಮೂಲಕ ಗೋಚರಿಸಿತು. ಆರ್‌ಸಿಬಿ 8.1 ಓವರ್‌ಗಳಲ್ಲೇ 100 ರನ್ ಮುಟ್ಟಿತು. ಹೈದರಾಬಾದ್ ಸೋಲಿನ ಮುಖನಿಧಾನವಾಗಿ ಸವಿಯಲಾರಂಭಿಸಿತು. ಅನುಭವಿ ಬೌಲರ್‌ಗಳಿಲ್ಲ, ಹೆಚ್ಚಿನ ವೇಗಿಗಳಿಲ್ಲ, ಮುಖ್ಯವಾಗಿ ಪ್ಯಾಟ್ ಕಮಿನ್ಸ್ ಅವರ ಅಲಭ್ಯತೆ ತಂಡಕ್ಕೆ ಕಾಡಿದ್ದು ಸ್ಪಷ್ಟವಾಗಿ ಗೋಚರಿಸಿತು.



ಸಂಕ್ಷಿಪ್ತ ಸ್ಕೋರ್
ಹೈದರಾಬಾದ್: 20 ಓವರ್‌ಗಳಲ್ಲಿ 201/9; ಕಿಶನ್ 80, ಅನಿಕೇತ್ 43; ಡಫಿ 22/3
ಬೆಂಗಳೂರು: 15.4 ಓವರ್‌ಗಳಲ್ಲಿ 203/4: ಕೊಹ್ಲಿ 69★, ಪಡಿಕ್ಕಲ್ 61, ಜೇಮ್ಸ್ 35/2

ಕೊಹ್ಲಿ ಆರ್ಭಟ, ಆರ್‌ಸಿಬಿ ಶುಭಾರಂಭ

ಪಡಿಕ್ಕಲ್‌ಗೆ ಸಾಥ್ ನೀಡುತ್ತಾ ಬೌಂಡರಿ ಸಿಕ್ಸರ್‌ಗಳ ಮೂಲಕ ಅಭಿಮಾನಿಗಳನ್ನು ರಂಜಿಸಿದ ವಿರಾಟ್ ಕೊಹ್ಲಿ ಎದುರಾಳಿಗಳನ್ನು ಕ್ರಮೇಣವಾಗಿ ಸೋಲಿಸುತ್ತಾ ಬಂದರು. ಪಡಿಕ್ಕಲ್ ವಿಕೆಟ್ ಒಪ್ಪಿಸಿದ ನಂತರ ತೀರಾ ಸ್ಫೋಟಕ ಬ್ಯಾಟಿಂಗ್ ಆರಂಭಿಸಿದರು. 12.3 ಓವರ್ ಆಗುವಷ್ಟರಲ್ಲಿ ಆರ್‌ಸಿಬಿ 163 ರನ್ ಮುಟ್ಟಿತು. 13ನೇ ಓವರ್‌ನಲ್ಲಿ ವೇಗಿ ಡೇವಿಡ್ ಪಾಯ್ನೆ ಸರಸರನೇ 2 ವಿಕೆಟ್ ಕಿತ್ತರು. ಸಮಯ ಮೀರಿ ಹೋಗಿತ್ತು ಪಂದ್ಯ ಗೆದ್ದಾಗಿತ್ತು. ಕೇವಲ ಔಪಚಾರಿಕ ಆಟವಷ್ಟೇ ಆಗ ಬಾಕಿಯುಳಿತ್ತು. ಆರ್‌ಸಿಬಿ ನಾಗಾಲೋಟಕ್ಕೆ ಜಯ ಸಿಕ್ಕಂತಾಯಿತು. ಕೊನೆಯಲ್ಲಿ ಕೊಹ್ಲಿ ಅಜೇಯ 69 ರನ್ ಗಳಿಸಿದರೆ ಡೇವಿಡ್ 16 ರನ್ ಗಳಿಸಿದರು.

ಕ್ರೀಡಾಂಗಣ ಭದ್ರತೆಗೆ ಮಾಸ್ಟರ್‌ಪ್ಲಾನ್

ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯ ಅಚ್ಚುಕಟ್ಟಾದ ಪೊಲೀಸ್ ಭದ್ರತೆಯೊಂದಿಗೆ ಆರಾಮಾಗೇ ನಡೆಯಿತು. ಪಂದ್ಯ ಸಂಜೆ 7:30ಕ್ಕೆ ಶುರುವಾದರೂ ಅಭಿಮಾನಿಗಳು ಕೆಂಪು ಜೆರ್ಸಿಯೊಂದಿಗೆ ಮಧ್ಯಾಹ್ನದಿಂದಲೇ ಕಾಣಿಸಿಕೊಂಡರು. ಅಚ್ಚುಕಟ್ಟಾಗಿ ನಿಭಾಯಿಸಿದ ಪೊಲೀಸರು, ಎಂದಿನಂತೆ ಸೇರಿದ್ದ ಅಭಿಮಾನಿಗಳನ್ನು ವಿಭಿನ್ನ ಯೋಜನೆಗಳೊಂದಿಗೆ ನಿಯಂತ್ರಿಸಿದರು.

ಪೊಲೀಸ್ ಕಣ್ಗಾವಲು

ಮೈದಾನದ ಸುತ್ತಲೂ ಪೊಲೀಸ್ ಕಣ್ಗಾವಲಿತ್ತು. ಎಲ್ಲೆಲ್ಲೂ ಪೊಲೀಸ್ ಅಧಿಕಾರಿಗಳು, ಪೇದೆಗಳು ಜನರನ್ನು ಕಳುಹಿಸುತ್ತಾ ದಟ್ಟಣೆ ತಡೆದರು. ಖಾಕಿ ಕಣ್ಗಾವಲು ಕೇವಲ ಮೈದಾನಕ್ಕೆ ಸೀಮಿತವಾಗಿರಲಿಲ್ಲ, ಜನದಟ್ಟಣೆ ಮತ್ತು ಟ್ರಾಫಿಕ್ ತಡೆಯುವ ನಿಟ್ಟಿನಲ್ಲಿ ದೂರದ ಕಬ್ಬನ್ ಪಾರ್ಕ್, ಕ್ವೀನ್ಸ್ ರೋಡ್ ಮತ್ತು ಕ್ರೀಡಾಂಗಣದ ಸುತ್ತಲೂ ಬಂದೋಬಸ್ತ್ ವ್ಯವಸ್ಥೆಯನ್ನಿಟ್ಟಿತ್ತು.

ಟ್ರಾಫಿಕ್ ನಿರ್ವಹಣೆ

ಮೈದಾನದ ಸುತ್ತಲೂ ಅಚ್ಚುಕಟ್ಟಾದ ಟ್ರಾಫಿಕ್ ನಿಯಂತ್ರಣ ಮಾಡಿದ್ದು, ಭದ್ರತಾ ವಿಚಾರದಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಮುಖ್ಯವಾಗಿ ಪಾರ್ಕಿಂಗ್‌ಗೆ ನಾಲ್ಕು ಸ್ಥಳಗಳನ್ನು ಆರಿಸಲಾಗಿತ್ತು. ಹೀಗಿರುವಾಗ ಪಂದ್ಯಕ್ಕೆ ಬಂದ ಅಭಿಮಾನಿಗಳೆಲ್ಲಾ ಮೈದಾನದ ಸುತ್ತಲೂ ಪಾರ್ಕಿಂಗ್ ಮಾಡಲೇ ಇಲ್ಲ. ಬೈಕು, ಕಾರುಗಳೊಂದಿಗೆ ಮೈದಾನಕ್ಕೆ ಬರಲೇ ಇಲ್ಲ. ರಸ್ತೆ ಬದಿಯಲ್ಲಿ ಯಾವುದೇ ಅಭಿಮಾನಿಗಳನ್ನು ನಿಲ್ಲಲು ಬಿಡಲಿಲ್ಲ. ರಸ್ತೆ ದಾಟುವಾಗಿ ಕೈಹಿಡಿದು ನಡೆಸಿದಂತೆ ಪೊಲೀಸರು ಜನರನ್ನು ಬಿಟ್ಟು ಬರುತ್ತಿದ್ದರು. ಮತ್ತೆ ತಮ್ಮ ಸ್ಥಳಗಳಲ್ಲಿ ಹೋಗಿ ನಿಲ್ಲುತ್ತಿದ್ದರು.



ಸದಾ ನಮ್ಮ ಹೃದಯದಲ್ಲಿ

ಯಾವಾಗಲೂ ಕೂಗಾಟ, ಕ್ರೇಜ್ ಮತ್ತು ಸೌಂಡ್‌ಗಾಗಿ ಹೆಸರುವಾಸಿಯಾಗಿರುವ ಎಂ.ಚಿನ್ನಸ್ವಾಮಿ ಕ್ರೀಡಾಂಗಣ ಒಂದು ಕ್ಷಣದ ಕಾಲ ಸ್ತಬ್ಧವಾಗಿ ನಿಂತಿತ್ತು. ಎಲ್ಲಾ ಜನರೂ ಎದ್ದು ನಿಂತು ಸಂತಾಪ ಸಲ್ಲಿಸುತ್ತಿದ್ದರೆ, ಇತ್ತ ಉಭಯ ತಂಡದ ಆಟಗಾರರು ಮೌನ ಆಚರಣೆ ಮಾಡಿದರು. ಕಾಲ್ತುಳಿತದಲ್ಲಿ ಮೃತಪಟ್ಟ 11 ಜನರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪಂದ್ಯಕ್ಕೂ ಮುನ್ನ ಸಮಸ್ತ ಜನರು ಮೌನ ಆಚರಣೆ ಮಾಡಿದರು.

- 11 ಖಾಲಿ ಆಸನಗಳು
- ಕಪ್ಪು ಪಟ್ಟಿ ಕಟ್ಟಿಕೊಂಡು ಕಣಕ್ಕೆ ಆರ್‌ಸಿಬಿ
- ಅಭ್ಯಾಸದ ವೇಳೆ ಎಲ್ಲ ಆರ್‌ಸಿಬಿ ಆಟಗಾರರಿಂದ 11 ನಂಬರ್ ಜೆರ್ಸಿ ಬಳಕೆ
- 11 ಆಸನಗಳಿಗೆ ಪುಷ್ಪ ಸಮರ್ಪಣೆ

ಪ್ರಮುಖ ಅಂಶಗಳು

- ಜನ ಸಂದಣಿ ನಿಯಂತ್ರಣ
- ಮೈದಾನ ಸುತ್ತಲೂ ಕಣ್ಗಾವಲು
- ಸಿಸಿ ಕ್ಯಾಮರಾಗಳೊಂದಿಗೆ ನಿಯಂತ್ರಣ
- ಎಐ ಕ್ಯಾಮರಾಗಳ ಕಣ್ಗಾವಲು
- ಟಿಕೆಟ್ ಇಲ್ಲದವರಿಗಿಲ್ಲ ನಿಲ್ಲುವುದಕ್ಕೂ ಅವಕಾಶ
- ಮೈದಾನ ಸುತ್ತಲೂ ಜನರು ಓಡಾಡುತ್ತಲೇ ಇದ್ದರು.
- ಒಂದೇ ಕಡೆ ನಿಲ್ಲಲು ಬಿಡದ ಪೊಲೀಸರು
- ಅಚ್ಚುಕಟ್ಟಾದ ಪಾರ್ಕಿಂಗ್ ವ್ಯವಸ್ಥೆ
- ಗೇಟಿನ ಹೊರಗಡೆ ಜನರಿಗೆ ನಿಲ್ಲಲು ಅವಕಾಶ ನೀಡಲಿಲ್ಲ

ಕಿರುಸುದ್ದಿ

ಸ್ಯಾನ್ ಫ್ರಾನ್ಸಿಸ್ಕೊ ತಂಡಕ್ಕೆ ಅಶ್ವಿನ್



• **ಹೊಸದಿಲ್ಲಿ:** ಭಾರತದ ಮಾಜಿ ಅಂತಾರಾಷ್ಟ್ರೀಯ ಆಟಗಾರ ಆರ್. ಅಶ್ವಿನ್ ಅಮೆರಿಕದ ಟಿ20 ಲೀಗ್‌ನಲ್ಲಿ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಸ್ಯಾನ್ ಫ್ರಾನ್ಸಿಸ್ಕೊ ಯುನಿಕಾರ್ನ್ಸ್ ತಂಡದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿರುವ ಅಶ್ವಿನ್, ಮೇಜರ್ ಲೀಗ್ ಕ್ರಿಕೆಟ್‌ನಲ್ಲಿ ಆಡಲಿರುವ ಮೊದಲ ಭಾರತೀಯ ಕ್ಯಾಪ್ಡ್ ಆಟಗಾರರಾಗಿದ್ದಾರೆ ಎಂದು ತಂಡ ಶನಿವಾರ ಘೋಷಿಸಿದೆ. ''ಮೇಜರ್ ಲೀಗ್ ಕ್ರಿಕೆಟ್ ಇತ್ತೀಚಿನ ಸೀಸನ್‌ಗಳಲ್ಲಿ ವಿಶ್ವಮಟ್ಟದ ಆಟಗಾರರನ್ನು ಆಕರ್ಷಿಸುತ್ತಿದ್ದು, ಅಮೆರಿಕದ ದೇಶೀಯ ಕ್ರಿಕೆಟ್ ಪ್ರತಿಭೆಗಳಿಗೆ ಉತ್ತಮ ವೇದಿಕೆಯಾಗುತ್ತಿದೆ. ಇಂತಹ ಲೀಗ್‌ನ ಭಾಗವಾಗುವುದು ನನಗೆ ವಿಶೇಷ ಅವಕಾಶ,'' ಎಂದು ಅಶ್ವಿನ್ ತಿಳಿಸಿದ್ದಾರೆ. ''ಮೇಜರ್ ಲೀಗ್ ಕ್ರಿಕೆಟ್‌ನಲ್ಲಿ ಆಡುತ್ತಿರುವ ಮೊದಲ ಭಾರತೀಯ ಆಟಗಾರ ಎಂಬ ಜವಾಬ್ದಾರಿಯನ್ನು ನಾನು ಸಂಪೂರ್ಣವಾಗಿ ಸ್ವೀಕರಿಸುತ್ತೇನೆ. ನನ್ನ ಗಮನ ತಂಡವನ್ನು ಗೆಲುವಿನತ್ತ ಕೊಂಡೊಯ್ಯುವುದು ಹಾಗೂ ಅಭಿಮಾನಿಗಳಿಗೆ ಉತ್ತಮ ಕ್ರಿಕೆಟ್ ನೀಡುವುದಾಗಿದೆ,'' ಎಂದು ಅವರು ಹೇಳಿದ್ದಾರೆ.

ಎರಡು ವಾರದವರೆಗೆ ಧೋನಿ ಅಲಭ್ಯ

• **ಚೆನ್ನೈ:** ಮಹೇಂದ್ರ ಸಿಂಗ್ ಧೋನಿ ಅವರನ್ನು ನೋಡಲು ಕಾತರದಿಂದ ಕಾಯುತ್ತಿದ್ದ ಸಮಸ್ತ ಚೆನ್ನೈ ಸೂಪರ್ ಕಿಂಗ್ಸ್ ಅಭಿಮಾನಿಗಳಿಗೆ ಭಾರೀ ನಿರಾಸೆಯಾಗಿದ್ದು, ಮೊದಲಿನ 2 ವಾರದ ಚೆನ್ನೈ ಪಂದ್ಯಗಳಿಗೆ ಧೋನಿ ಲಭ್ಯರಿಲ್ಲ ಎಂದು ಫ್ರಾಂಚೈಸಿ ಖಚಿತಪಡಿಸಿತು. ಕೇವಲ ಐಪಿಎಲ್ ಸಮಯದಲ್ಲಿ ಮಾತ್ರ ಕಾಣಿಸಿಕೊಳ್ಳುವ ಧೋನಿ ಈ ಬಾರಿ ಮತ್ತಷ್ಟು ಕಣ್ಮರೆಯಾಗಿದ್ದಾರೆ. ಗಾಯದಿಂದ ಚೇತರಿಸಿಕೊಳ್ಳುತ್ತಿದ್ದಾರೆ. ರಿಹ್ಯಾಬ್‌ನಲ್ಲಿರುವ ಅವರು ಸಮಗೆ ಅಲಭ್ಯರಾಗಿದ್ದಾರೆಂದು ಫ್ರಾಂಚೈಸಿ ಪ್ರಕಟಣೆಯಲ್ಲಿ ತಿಳಿಸಿದೆ. ಚೆನ್ನೈ ತಂಡದಲ್ಲಿ ಮೂವರು ವಿಕೆಟ್ ಕೀಪರ್‌ಗಳಿದ್ದಾರೆ. ಧೋನಿ ಹೊರತುಪಡಿಸಿ ಸಂಜು ಸ್ಯಾಮ್ಸನ್, ಉರ್ವಿಲ್ ಪಟೇಲ್ ಮತ್ತು ನೂತನ ಆಟಗಾರ ಕಾರ್ತಿಕ್ ಶರ್ಮಾ ವಿಕೆಟ್ ಕೀಪಿಂಗ್ ಮಾಡಬಲ್ಲರು. 16 ವರ್ಷದಲ್ಲಿ ಮೊದಲ ಬಾರಿಗೆ ಧೋನಿ ಅವರಿಲ್ಲದೆ ಚೆನ್ನೈ ತಂಡ ಕಣಕ್ಕಿಳಿಯುವುದು ಖಚಿತವಾಗಿದೆ. ಎರಡು ವಾರಗಳಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ನಾಲ್ಕು ಪಂದ್ಯಗಳನ್ನು ಹೊಂದಿದೆ.

ಶಾಟ್ಗನ್ ವಿಶ್ವಕಪ್ ಸ್ಕೀಟ್: ಫೈನಲ್ಗೇರದ ಭಾರತೀಯರು

• **ಹೊಸದಿಲ್ಲಿ:** ಟ್ಯಾಂಜಿಯರ್‌ನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶಾಟ್‌ಗನ್ ವಿಶ್ವಕಪ್‌ನ ಸ್ಕೀಟ್ ವಿಭಾಗದಲ್ಲಿ ಭಾರತೀಯ ಶೂಟರ್‌ಗಳು ಫೈನಲ್‌ಗೆ ಪ್ರವೇಶಿಸಲು ವಿಫಲರಾದರು. ಒಲಿಂಪಿಯನ್ ಮಹೇಶ್ವರಿ ಚೌಹಾಣ್ ಉತ್ತಮ ಹೋರಾಟ ನೀಡಿದರೂ, ಟಾಪ್ 8 ಸ್ಥಾನ ತಪ್ಪಿಸಿಕೊಂಡರು. ಮೊದಲ ದಿನ 75ರಲ್ಲಿ 69 ಅಂಕ ಗಳಿಸಿದ್ದ ಅವರು, ಕೊನೆಯ ಸುತ್ತುಗಳಲ್ಲಿ 23 ಮತ್ತು 21 ಹೊಡೆದು ಒಟ್ಟು 113 ಅಂಕಗಳಿಗೆ ತಲುಪಿದರು. ಫೈನಲ್ ಪ್ರವೇಶಕ್ಕೆ ಅಗತ್ಯವಾಗಿದ್ದ 115 ಅಂಕಗಳಿಗೆ ಅವರು ಎರಡು ಅಂಕಗಳಿಂದ ಹಿಂದುಳಿದರು. ದರ್ಶನಾ ರಾಥೋಡ್ ಕೊನೆಯ ಸುತ್ತಿನಲ್ಲಿ ಪರಿಪೂರ್ಣ 25 ಅಂಕ ಗಳಿಸಿದರೂ, ಒಟ್ಟು 112 ಅಂಕಗಳೊಂದಿಗೆ 19ನೇ ಸ್ಥಾನ ಪಡೆದರು. ಅವರ ಸಹೋದರಿ ಯಶಸ್ವಿ ರಾಥೋಡ್ 110 ಅಂಕಗಳೊಂದಿಗೆ 23ನೇ ಸ್ಥಾನ ಪಡೆದರು. ರ್‍ಯಾಂಕಿಂಗ್ ಅಂಕಗಳಿಗಾಗಿ ಸ್ಪರ್ಧಿಸಿದ್ದ ಅರೀಬಾ ಖಾನ್ ಮತ್ತು ಮಾನ್ಸಿ ರಘುವಂಶಿ ತಲಾ 112 ಅಂಕಗಳನ್ನು ಗಳಿಸಿದರು. ಪುರುಷರ ವಿಭಾಗದಲ್ಲಿ ಪರಂಪಾಲ್ ಸಿಂಗ್ ಗುರೋನ್ 117 ಅಂಕಗಳೊಂದಿಗೆ 26ನೇ ಸ್ಥಾನ ಪಡೆದರು. ಜ್ಯೋತಿರಾದಿತ್ಯ ಸಿಂಗ್ ಸಿಸೋಡಿಯಾ 108 ಅಂಕಗಳೊಂದಿಗೆ 62ನೇ ಸ್ಥಾನ ಹಾಗೂ ಮಾನ್ ಸಿಂಗ್ 105 ಅಂಕಗಳೊಂದಿಗೆ 65ನೇ ಸ್ಥಾನ ಪಡೆದರು. ರ್‍ಯಾಂಕಿಂಗ್ ಅಂಕಗಳಿಗಾಗಿ ಸ್ಪರ್ಧಿಸಿದ್ದ ಸುಖಬೀರ್ ಸಿಂಗ್ ಹರಿಕಾ 113 ಹಾಗೂ ಹರ್ಮೆಹರ್ ಸಿಂಗ್ ಲಾಲಿ 102 ಅಂಕ ಗಳಿಸಿದರು.

ತೇಜಸ್ವಿನ್‌ಗೆ ಡೆಕಾಥ್ಲಾನ್ ಸ್ವರ್ಣ

• **ಟೆಕ್ಸಾಸ್:** ಅಮೆರಿಕದಲ್ಲಿ ನಡೆದ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಭಾರತೀಯ ಅಥ್ಲೀಟ್ ತೇಜಸ್ವಿನ್ ಶಂಕರ್ ಡೆಕಾಥ್ಲಾನ್ ವಿಭಾಗದಲ್ಲಿ ಸ್ವರ್ಣ ಪದಕವನ್ನು ಗೆದ್ದಿದ್ದಾರೆ. ಇಲ್ಲಿ ನಡೆದ 2026ರ ಡೇವಿಡ್ ನೋಬಲ್ ರಿಲೇ ಕೂಟದಲ್ಲಿ 7,947 ಅಂಕಗಳ ಸಂಪಾದಿಸಿ ತೇಜಸ್ವಿನ್ ಅಗ್ರಸ್ಥಾನ ಪಡೆದಿದ್ದು, 8,000 ಅಂಕಗಳ ಮೈಲಿಗಲ್ಲನ್ನು ದಾಟಲು 53 ಅಂಕಗಳ ಕೊರತೆ ಅನುಭವಿಸಿದರು. ಏಷ್ಯನ್ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಗೇಮ್ಸ್ ಅರ್ಹತಾ ಮಾನದಂಡಗಳನ್ನು ದಾಟುವ ಮೂಲಕ ಶಂಕರ್ ಈ ಋತುವಿನಲ್ಲಿ ಅದ್ಭುತ ಆರಂಭವನ್ನು ಕಂಡಿದ್ದಾರೆ. ತೇಜಸ್ವಿನ್ ತಮ್ಮ ವೈಯಕ್ತಿಕ ಅತ್ಯುತ್ತಮ ಪ್ರದರ್ಶನವನ್ನು ಉತ್ತಮಪಡಿಸಿದ್ದು, ಶ್ರೇಷ್ಠ ಪ್ರದರ್ಶನ ನೀಡುವ ಮೂಲಕ ಭಾರತೀಯ ಡೆಕಾಥ್ಲಾನ್‌ಪಟು ದಾಖಲಿಸಿದ ಅತ್ಯುತ್ತಮ ಪ್ರದರ್ಶನವನ್ನು ದಾಖಲಿಸಿದ್ದಾರೆ.

ಭಾರತದ ನಾಲ್ಕು ತಂಡಗಳಿಗೆ ವಿಶ್ವ ಅಥ್ಲೆಟಿಕ್ಸ್ ರಿಲೇ ಅರ್ಹತೆ

ಚಂಡೀಗಢ: ಭಾರತೀಯ ಓಪನ್ ರಿಲೇ ಕಾರ್ನಿವಲ್‌ನಲ್ಲಿ ಶನಿವಾರ ಉತ್ತಮ ಪ್ರದರ್ಶನ ನೀಡಿದ ಭಾರತದ ನಾಲ್ಕು ರಿಲೇ ತಂಡಗಳು ವಿಶ್ವ ಅಥ್ಲೆಟಿಕ್ಸ್ ರಿಲೇ 2026 ಕೂಟಕ್ಕೆ ಅರ್ಹತೆಯನ್ನು ಸಂಪಾದಿಸಿವೆ. ಇವುಗಳಲ್ಲಿ ಪ್ರಮುಖವಾಗಿ ಭಾರತೀಯ ಪುರುಷರ 4 400 ಮೀ. ರಿಲೇ ತಂಡ ವಿಶ್ವ ಅಥ್ಲೆಟಿಕ್ಸ್ ರಿಲೇ ಅರ್ಹತೆ ಸಂಪಾದಿಸಿದ್ದು, ಪುರುಷರ 4 100 ಮೀ. ರಿಲೇ ತಂಡ ಅರ್ಹತೆಯನ್ನು ಸಂಪಾದಿಸುವಲ್ಲಿ ವಿಫಲವಾಗಿದೆ. ಉಳಿದಂತೆ ಭಾರತದ 4 100 ಮೀ. ಮಿಶ್ರ ರಿಲೇ, ಮಹಿಳೆಯರ 4 100 ಮೀ. ಮತ್ತು 4 400 ಮೀ. ಮಿಶ್ರ ರಿಲೇ ತಂಡಗಳು ಅರ್ಹತೆ ಸಂಪಾದಿಸಿವೆ.

ಬಾಂಗ್ಲಾದಲ್ಲಿ ಐಪಿಎಲ್ ಪ್ರಸಾರಕ್ಕೆ ಅಸ್ತು



• **ಢಾಕಾ:** ಇಲ್ಲದ ಸಾಹಸಕ್ಕೆ ಕೈಹಾಕಿ ವಿಶ್ವಕಪ್ ಪಂದ್ಯಾವಳಿಯಿಂದಲೇ ಹೊರಬಿದ್ದು ಪಿನ್ನಡೆ ಅನುಭವಿಸಿರುವ ಬಾಂಗ್ಲಾದೇಶ ಕ್ರಿಕೆಟ್ ಸಂಸ್ಥೆ ಮತ್ತು ಅಲ್ಲಿನ ಸರ್ಕಾರ ಮತ್ತೊಮ್ಮೆ ಮಂಡಿಯೂರಿದೆ. ಬಾಂಗ್ಲಾದೇಶದಲ್ಲಿ ರದ್ದುಗೊಳಿಸಲಾಗಿದ್ದ ಐಪಿಎಲ್ ಪ್ರಸಾರಕ್ಕೆ ಬೇಡಿಕೆ ಹೆಚ್ಚಾಗುತ್ತಿದ್ದು, ಅವಕಾಶ ನೀಡುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ. ಹೊಸ ಮಾಹಿತಿ ಮತ್ತು ಪ್ರಸಾರ ಸಚಿವ ಜಹಿರುದ್ದೀನ್ ಸ್ವಪನ್ ಅವರು, ಐಪಿಎಲ್ ಪ್ರಸಾರಕ್ಕೆ ಯಾವುದೇ ಚಾನೆಲ್ ಅರ್ಜಿ ಸಲ್ಲಿಸಿದರೆ ಸರ್ಕಾರ ಸಕಾರಾತ್ಮಕವಾಗಿ ಪರಿಗಣಿಸುತ್ತದೆ ಎಂದು ತಿಳಿಸಿದ್ದಾರೆ.

ಈ ವರ್ಷದ ಜನವರಿಯಲ್ಲಿ ಮುಸ್ತಫಿಜುರ್ ರೆಹಮಾನ್ ಅವರನ್ನು ಐಪಿಎಲ್‌ನಿಂದ ಹೊರಗಿಟ್ಟ ಹಿನ್ನೆಲೆ, ಬಾಂಗ್ಲಾದೇಶ ಸರ್ಕಾರ ಐಪಿಎಲ್ ಪ್ರಸಾರವನ್ನು ನಿಷೇಧಿಸಿತ್ತು. ಈ ನಿಷೇಧವನ್ನು ಅಧಿಕೃತ ಸೂಚನೆಯ ಮೂಲಕ ಜಾರಿಗೊಳಿಸಲಾಗಿತ್ತು. ಆದರೆ ಈಗಿನ ಬೆಳವಣಿಗೆಗಳಲ್ಲಿ, ಹಿಂದಿನ ಸರ್ಕಾರ ಹೊರಡಿಸಿದ್ದ ಆ ಆದೇಶವನ್ನು ರದ್ದುಗೊಳಿಸಲಾಗಿದೆ. ಯಾವುದೇ ಚಾನೆಲ್ ಐಪಿಎಲ್ ಪ್ರಸಾರಕ್ಕೆ ಅರ್ಜಿ ಸಲ್ಲಿಸಿರಲಿಲ್ಲ, ಕ್ರೀಡೆ ಮತ್ತು ರಾಜಕೀಯವನ್ನು ನಾವು ಮಿಶ್ರಗೊಳಿಸಲು ಬಯಸುವುದಿಲ್ಲ, ವ್ಯಾವಹಾರಿಕ ದೃಷ್ಟಿಯಿಂದ ನೋಡುತ್ತೇವೆ. ಅರ್ಜಿ ಬಂದರೆ ನಾವು ಅದನ್ನು ಸಕಾರಾತ್ಮಕವಾಗಿ ಪರಿಗಣಿಸುತ್ತೇವೆ, ಎಂದು ಸಚಿವ ತಿಳಿಸಿದ್ದಾರೆ. ಇದಲ್ಲದೆ, ಐಪಿಎಲ್ ಅಧಿಕೃತ ಪ್ರಸಾರಕರಾದ ಸ್ಟಾರ್ ಸ್ಪೋರ್ಟ್ಸ್ ಕೂಡ ಟೂರ್ನಿಯನ್ನು ಪ್ರಸಾರ ಮಾಡಬಹುದು. ಕೇಬಲ್ ಆಪರೇಟರ್‌ಗಳ ಮೇಲೂ ಯಾವುದೇ ನಿರ್ಬಂಧ ಇಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಯಾರನ್ನೂ ನಾವು ಪ್ರಸಾರದಿಂದ ತಡೆಯುವುದಿಲ್ಲ, ಸ್ಟಾರ್ ಸ್ಪೋರ್ಟ್ಸ್ ಅಥವಾ ಸ್ಥಳೀಯ ಚಾನೆಲ್‌ಗಳು ಪ್ರಸಾರ ಮಾಡಲು ಬಯಸಿದರೆ, ನಾವು ಅವಕಾಶ ನೀಡುತ್ತೇವೆ, ಎಂದು ಸ್ವಪನ್ ಹೇಳಿದ್ದಾರೆ.

ಶುಭಾರಂಭದ ವಿಶ್ವಾಸದಲ್ಲಿ ಮುಂಬೈ

ಮುಂಬೈಗೆ ಆತ್ಮವಿಶ್ವಾಸ

ಇನ್ನು ಎದುರಾಳಿ ಮುಂಬೈ ತಂಡದಲ್ಲಿ ಚಾಂಪಿಯನ್‌ಗಳ ಪಡೆ. ವಿಶ್ವಕಪ್ ಗೆದ್ದ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್, ರನ್ನರ್-ಅಪ್ ತಂಡದ ನಾಯಕ ಸ್ಯಾಂಟ್ನರ್, ಆಲ್-ರೌಂಡರ್ ಹಾರ್ದಿಕ್ ಪಾಂಡ್ಯ, ಅನುಭವಿ ರೋಹಿತ್ ಶರ್ಮಾ, ತಿಲಕ್ ವರ್ಮಾ ಸೇರಿದಂತೆ ಪ್ರಮುಖ ಬ್ಯಾಟರ್‌ಗಳಿದ್ದಾರೆ. ಬೌಲಿಂಗ್‌ನಲ್ಲೂ ಜಸ್ಪ್ರೀತ್ ಬೂಮ್ರಾ, ದೀಪಕ್ ಚಾಹರ್, ಟ್ರೆಂಟ್ ಬೋಲ್ಟ್ ಸೇರಿದಂತೆ ಅತ್ಯುತ್ತಮ ಬೌಲರ್‌ಗಳಿದ್ದು ಮುಂಬೈ ಭರವಸೆಯಲ್ಲಿದೆ.



• **ಮುಂಬೈ:** ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಎರಡನೇ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಹಾಗೂ ಕೋಲ್ಕತಾ ನೈಟ್ ರೈಡರ್ಸ್ ತಂಡಗಳು ಭಾನುವಾರದ ಸೂಪರ್ ಫೈಟ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಹೈದರಾಬಾದ್ ಹಾಗೂ ಆರ್‌ಸಿಬಿ ನಡುವಿನ ಪಂದ್ಯದೊಂದಿಗೆ ಐಪಿಎಲ್‌ಗೆ ಕಿಕ್‌ಸ್ಟಾರ್ಟ್ ಸಿಕ್ಕಿದೆ. ಪ್ರತಿಬಾರಿಯಂತೆ ಈ ಬಾರಿಯೂ ಹೌಸ್‌ಫುಲ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯುತ್ತಿದೆ. ಮುಂಬೈನ ವಾಂಖೆಡೆ ಕ್ರೀಡಾಂಗಣ ತಮ್ಮ ನೆಚ್ಚಿನ ಆಟಗಾರ, ಮುಂಬೈ ಕಾ ರಾಜಾ ಖ್ಯಾತಿಯ ರೋಹಿತ್ ಶರ್ಮಾ ಅವರ ಆಟವನ್ನು ನೋಡುವುದಕ್ಕೆ ಸಿದ್ಧರಾಗಿದ್ದಾರೆ.

ಕಳೆದ ಬಾರಿ ಸೆಮಿಫೈನಲ್ ಅಥವಾ ಕ್ವಾಲಿಫೈಯರ್ ಪಂದ್ಯದಲ್ಲಿ ಮುಂಬೈ ಹೊರಬಿದ್ದಿತ್ತು. ಆರನೇ ಟ್ರೋಫಿ ಗೆಲ್ಲುವ ಹಠದೊಂದಿಗೆ ಕಣಕ್ಕಿಳಿಯುತ್ತಿರುವ ತಂಡದಲ್ಲಿ ಹಲವಾರು ಬದಲಾವಣೆಗಳುಂಟು. ಕೆಕೆಆರ್ ತಂಡ ಕಳೆದ ಬಾರಿ ನೀರಸ ಪ್ರದರ್ಶನ ನೀಡಿದ್ದುಂಟು. ಅದರ ಬೆನ್ನಲ್ಲೇ ಕೂಟದ ನಂತರ ತಂಡದಲ್ಲಿ ಸರ್ಜರಿ ಮಾಡಿಕೊಂಡು ಅತಿ ದೊಡ್ಡ ಪರ್ಸ್‌ನೊಂದಿಗೆ ಮಿನಿ ಹರಾಜಿಗಿಳಿದಿತ್ತು. ತಂಡದ ಬದಲಾವಣೆಯೊಂದಿಗೆ ಹೊಸದಾಗಿ ಶುರು ಮಾಡುವ ತವಕದಲ್ಲಿ ಅಜಿಂಕ್ಯ ರಹಾನೆ ಪಡೆ ಕಾಣಿಸಿಕೊಂಡಿದೆ.

ಕೆಕೆಆರ್‌ಗೆ ಅಗ್ನಿಪರೀಕ್ಷೆ: ಹಲವು ಹಿನ್ನಡೆಯೊಂದಿಗೆ ಕಳೆದ ಆವೃತ್ತಿ ಮುಗಿಸಿದೆ. ಸಾಲದಿದ್ದಕ್ಕೆ ತಂಡಕ್ಕೆ ಇಷ್ಟು ವರ್ಷ ಶಕ್ತಿಯಾಗಿ ನಿಂತಿದ್ದ ಆಂಡ್ರೆ ರಸೆಲ್ ನಿವೃತ್ತಿಯಾದರು. ತಂಡದಿಂದ ವೆಂಕಟೇಶ್ ಅಯ್ಯರ್ ಅವರನ್ನು ಆಯ್ಕೆ ಮಾಡಲಾಗಿರಲಿಲ್ಲ. ಈ ನಡುವೆ ಇದ್ದವರನ್ನು ಆಯ್ಕೆ ಮಾಡುವತ್ತ ಮುಂದಾದರೂ ಮುಸ್ತಾಫಿಜುರ್ ರೆಹಮಾನ್, ಹರ್ಷಿತ್ ರಾಣಾ ತಂಡದಿಂದ ಹೊರಬಿದ್ದಿದ್ದಾರೆ. ಇದಲ್ಲದೆ ಪಥಿರಣ ಬಗ್ಗೆ ಇನ್ನೂ ಮಾಹಿತಿ ಹೊರಬೀಳದ ಕಾರಣದಿಂದಾಗಿ ಬೌಲಿಂಗ್ ವಿಭಾಗದಲ್ಲಿ ಭಾರೀ ಹಿನ್ನಡೆಯಾಗಿದೆ. ಬ್ಯಾಟಿಂಗ್‌ನಲ್ಲಿ ಅಲೆನ್ ಲಯದಲ್ಲಿರುವುದು ಖುಷಿ ವಿಚಾರ. ರಹಾನೆ, ರಚಿನ್ ರವೀಂದ್ರ, ರೋವ್‌ಮನ್ ಪೊವೆಲ್, ಅಂಗ್‌ಕ್ರಿಶ್ ರಘುವಂಶಿ ಸೇರಿದಂತೆ ಪ್ರಮುಖ ಬ್ಯಾಟಿಂಗ್ ಪಡೆಯನ್ನು ಹೊಂದಿದೆ. ಸುನೀಲ್ ನರೈನ್ ತಂಡಕ್ಕೆ ಬಲ ತಂದಿದ್ದಾರೆ. ಇಷ್ಟಾದರೂ ಬೌಲಿಂಗ್‌ನಲ್ಲಿ ಅಲ್ಪ ಹಿನ್ನಡೆ ಅನುಭವಿಸಿದೆ.

ಪಿಚ್ ರಿಪೋರ್ಟ್: ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟರ್‌ಗಳಿಗೆ ಹೆಚ್ಚಿನ ಲಾಭ ಸಿಗಲಿದೆ. ನೇರ ಪಿಚ್, ಫ್ಲಾಟ್ ಇರುವುದರಿಂದ ಹೆಚ್ಚಿನ ಲಾಭ. ಸ್ಪಿನ್ ಬೌಲರ್‌ಗಳಾದ ಸ್ಯಾಂಟ್ನರ್, ಸುನೀಲ್ ನರೈನ್ ಅಂಥವರು ವಿಶ್ವಾಸದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಪಂದ್ಯದ ಮಾಹಿತಿ:
ಯಾವಾಗ: ಭಾನುವಾರ, ಎಲ್ಲಿ: ಮುಂಬೈ
ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಮೊಂಟೆ ಕಾರ್ಲೋ ಮಾಸ್ಟರ್ಸ್‌ಗಿಲ್ಲ ಜೋಕೋವಿಚ್



• **ದುಬೈ:** ಎರಡು ಬಾರಿ ಚಾಂಪಿಯನ್ ಆಗಿರುವ ನೊವಾಕ್ ಜೋಕೋವಿಚ್ ಮೊಂಟೆ-ಕಾರ್ಲೊ ಮಾಸ್ಟರ್ಸ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ ಎಂದು ಆಯೋಜಕರು ತಿಳಿಸಿದ್ದಾರೆ.

38 ವರ್ಷದ ಸರ್ಬಿಯಾ ಆಟಗಾರರು ಬಲ ಭುಜದ ಗಾಯದ ಕಾರಣದಿಂದ ಈಗಾಗಲೇ ಮಿಯಾಮಿ ಓಪನ್‌ನಿಂದ ಹೊರಬಂದಿದ್ದರು. ಅದೇ ಗಾಯದ ಹಿನ್ನೆಲೆ ಅವರು ಕ್ಲೇ ಕೋರ್ಟ್ ಟೂರ್ನಿಯಾದ ಮೊಂಟೆ-ಕಾರ್ಲೊ ಮಾಸ್ಟರ್ಸ್‌ನಿಂದಲೂ ಹಿಂದೆ ಸರಿದಿದ್ದಾರೆ. ಈ ತಿಂಗಳ ಆರಂಭದಲ್ಲಿ ಇಂಡಿಯನ್ ವೆಲ್ಸ್ ಟೂರ್ನಿಯಲ್ಲಿ ಭಾಗವಹಿಸಿದ್ದ ಜೋಕೋವಿಚ್, ರೌಂಡ್ ಆಫ್ 16ನಲ್ಲಿ ಹಾಲಿ ಚಾಂಪಿಯನ್ ಜಾಕ್ ಡ್ರೇಪರ್ ವಿರುದ್ಧ ಸೋತಿದ್ದರು. 24 ಗ್ರ್ಯಾಂಡ್ ಸ್ಲ್ಯಾಮ್ ಪ್ರಶಸ್ತಿ ವಿಜೇತರಾದ ಜೋಕೋವಿಚ್, 2013 ಮತ್ತು 2015ರಲ್ಲಿ ಮೊಂಟೆ-ಕಾರ್ಲೊ ಮಾಸ್ಟರ್ಸ್ ಕಿರೀಟ ಗೆದ್ದಿದ್ದರು. ಅಮೆರಿಕದ ವಿಶ್ವ ಐದನೇ ರ್‍ಯಾಂಕ್‌ನ ಆಟಗಾರ ಟೇಲರ್ ಫ್ರಿಟ್ಜ್ ಕೂಡ ಗಾಯದ ಕಾರಣದಿಂದ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

2026ರ ಮೊಂಟೆ-ಕಾರ್ಲೊ ಮಾಸ್ಟರ್ಸ್ ಏಪ್ರಿಲ್ 5ರಿಂದ 12ರವರೆಗೆ ನಡೆಯಲಿದ್ದು, ವಿಶ್ವ ನಂ.1 ಕಾರ್ಲೋಸ್ ಅಲ್ಕರಾಜ್ ತಮ್ಮ ಪ್ರಶಸ್ತಿಯನ್ನು ರಕ್ಷಿಸಲು ಕಣಕ್ಕಿಳಿಯಲಿದ್ದಾರೆ.

ಡಬ್ಲ್ಯು35 ಲೋಗೋ ಅನಾವರಣ

• **ತುಮಕೂರು:** ಕರ್ನಾಟಕವನ್ನು ಅಂತಾರಾಷ್ಟ್ರೀಯ ಟೆನಿಸ್ ನಕ್ಷೆಯಲ್ಲಿ ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿ, ತುಮಕೂರಿನಲ್ಲಿ ನಡೆಯಲಿರುವ ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್ ಡಬ್ಲ್ಯು35 ಟೂರ್ನಿಯ ಅಧಿಕೃತ ಲೋಗೋವನ್ನು ಗೃಹ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ. ಪರಮೇಶ್ವರ ಅನಾವರಣಗೊಳಿಸಿದರು.

ಮೇ 4ರಿಂದ 10ರವರೆಗೆ ನಡೆಯಲಿರುವ ಈ ಟೂರ್ನಿ ತುಮಕೂರು ವಿಶ್ವವಿದ್ಯಾಲಯ ಆವರಣದ ಜಿಲ್ಲಾ ಟೆನಿಸ್ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಎರಡು ದಶಕಗಳ ಬಳಿಕ ತುಮಕೂರಿನಲ್ಲಿ ಅಂತಾರಾಷ್ಟ್ರೀಯ ಟೆನಿಸ್ ಮರಳುತ್ತಿದೆ. ಅಂತಾರಾಷ್ಟ್ರೀಯ ಟೆನಿಸ್ ಫೆಡರೇಷನ್ ನಡೆಸುವ ಈ ಟೂರ್ನಿ, ಆಟಗಾರ್ತಿಯರಿಗೆ ವೃತ್ತಿಪರ ರ್‍ಯಾಂಕಿಂಗ್ ಅಂಕಗಳನ್ನು ಗಳಿಸಲು ಹಾಗೂ ಉನ್ನತ ಮಟ್ಟದ ಸ್ಪರ್ಧೆಗಳತ್ತ ಮುನ್ನಡೆಯಲು ಮಹತ್ವದ ವೇದಿಕೆಯಾಗಲಿದೆ. ಡಬ್ಲ್ಯು35 ವರ್ಗದ ಈ ಸ್ಪರ್ಧೆಯಲ್ಲಿ ಸುಮಾರು 30,000 ಅಮೆರಿಕನ್ ಡಾಲರ್ ಬಹುಮಾನ ಮೊತ್ತದ ಜೊತೆಗೆ 35 ಡಬ್ಲ್ಯುಟಿಎ ರ್‍ಯಾಂಕಿಂಗ್ ಅಂಕಗಳು ಲಭ್ಯವಿರುತ್ತವೆ. ಸಾಮಾನ್ಯವಾಗಿ 32 ಆಟಗಾರ್ತಿಯರ ಮುಖ್ಯ ಡ್ರಾ, ಅರ್ಹತಾ ಸುತ್ತುಗಳು ಹಾಗೂ ಡಬಲ್ಸ್ ಪಂದ್ಯಗಳನ್ನು ಒಳಗೊಂಡಿರುತ್ತದೆ. ಈ ಸಂದರ್ಭದಲ್ಲಿ ಮಾತನಾಡಿದ ಡಾ. ಪರಮೇಶ್ವರ ಅವರು, ಇದು ಕೇವಲ ಟೂರ್ನಿಯಲ್ಲ, ತುಮಕೂರಿನ ಯುವ ಪ್ರತಿಭೆಗಳಿಗೆ ದೊಡ್ಡ ಅವಕಾಶ. ವಿಶೇಷವಾಗಿ ಬಾಲಕಿಯರಿಗೆ ಕ್ರೀಡೆಯಲ್ಲಿ ಮುಂದುವರಿಯಲು ಇದು ಪ್ರೇರಣೆ ನೀಡುತ್ತದೆ ಎಂದರು. ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ಅವರು, ತುಮಕೂರನ್ನು ಜಾಗತಿಕ ಕ್ರೀಡಾ ಕೇಂದ್ರವಾಗಿ ತೋರಿಸಲು ಇದು ಉತ್ತಮ ಅವಕಾಶ. ಎಲ್ಲಾ ಸೌಲಭ್ಯಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಒದಗಿಸಲು ನಾವು ಸಿದ್ಧರಾಗಿದ್ದೇವೆ ಎಂದು ತಿಳಿಸಿದರು. ಒಟ್ಟಿನಲ್ಲಿ, ಈ ಟೂರ್ನಿ ತುಮಕೂರಿನ ಕ್ರೀಡಾ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸುವುದರೊಂದಿಗೆ, ಒಂದು ವಾರದ ಕಾಲ ಉನ್ನತ ಮಟ್ಟದ ಮಹಿಳಾ ಟೆನಿಸ್‌ಗೆ ವೇದಿಕೆಯಾಗಲಿದೆ

ಪದಬಂಧ 5937

▸ ರಾಜು ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
3.ಹೀಗೆ ಮಾಡಿದಾಗ ಮಾತ್ರ ಪಕ್ಷಿ ಹಾರುತ್ತದೆ (4)
5.ಪರಿಮಾಣವನ್ನು ಹೀಗೂ ಹೇಳುತ್ತೇವೆ (4)
6.ಬಳಲಿಕೆಯಲ್ಲಿ ತಿರುಗಿ ಮೂಡಿದೆ (3)
7.ನಾಗುತ್ತಲೇ ಮೇಲಕ್ಕೆ ಹಾರುವಿಕೆ (3)
9.ಜನಕರಾಜನ ಮಿತ್ರಿ -ಸೀತೆ (3)
10.ಗರುಡನಿಂದ ಹೊರಟ ಗಂಡುಕುರಿ (3)
12.ಇಪ್ಪತ್ತೆಂಟನೆಯ ಪಾರ್ಟಿಕೋತ್ಸವದ ಹೆಸರು (3)
14.ಋಷಿ-ಮುನಿಗಳ ಪರ್ಣಶಾಲೆ (3)
16.ದೇವರಿಗೆ ನಿಗದಿಯಾದ ಹಮ್ಮಿನ ಭಾಗ (4)
17.ಮುದ್ದುಗುಂಡುಗಳನ್ನಾಡುವ ಸಂಗ್ರಹಾಲಯ (4)

ಮೇಲಿನಿಂದ ಕೆಳಕ್ಕೆ
1.ವೈಭವಯುತವಾದ ನಿವಾಸ (4)
2.ದುಃಕಸನದಿಂದ ಕೂಡಿದ್ದು (3)
3.ಆಧಾರ-ಬೆಂಬಲದಲ್ಲಿ ತಲೆಕೆಳಗಾಗಿದೆ (3)
4.ಬಯಕೆಗೆ ಹಾಸ್ಯ ಸಂಪನ್ಮೂಲ ಇಲ್ಲದಿರುವುದು (4)
8.ಇದು ತಂದೆ-ತಾಯಿಯ ಮನೆ (3)
9.ಸ್ವರ ಮೊದಲಿರುವ ನವಿಲಿನ ಕೂಗು (3)
11.ಆನೆಯ ಶತ್ರು ಈ ಸಿಂಹ (4)
13.ಶಾಲಾ ಕಾಲೇಜುಗಳ ವರ್ಗಕೋಣೆ (4)
14.ಒಳ್ಳೆಯ ಮನೆತನಕ್ಕೆ ಸೇರಿದವಳು (3)
15.ಎಲ್ಲರಿಗೂ ತಿಳಿಯದ ಸಂಗತಿ (3)

5936 ಉತ್ತರ

ಎಡದಿಂದ ಬಲಕ್ಕೆ:
2.ಆತ್ಮಪ್ರಶಂಸೆ
5.ಗಾನಲೋಲ
6.ಪಠಣಾಮ 7.ಕಾಕ
8.ನೆಗೆ 10.ಆಲ 13.ಗಳ
15.ವಕ್ರಗತಿ 17.ಆಜಗರ
18.ಪರಿಚಾರಕ

ಮೇಲಿನಿಂದ ಕೆಳಕ್ಕೆ:
1.ಮಾಲೀಗಾರ
2.ಆಪ್ತಾಲೋಚನೆ 3.ಸೇತ
4.ಅಲೆಮನೆ 6.ಪಕಲ
9.ಗೆಳತಿ 11.ಆವ್ಯುಚಾಕ
12.ನವರಾತ್ರಿ
14.ನರಳಾಟ 16.ಗೂಢ



ಏಪ್ರಿಲ್ 2ಕ್ಕೆ ರಾಮಾಯಣ ಚಲನಚಿತ್ರದ ಫಸ್ಟ್ ಲುಕ್

ರಾಮಾಯಣ ಚಿತ್ರವು ಎರಡು ಭಾಗಗಳಲ್ಲಿ ತೆರೆಗೆ ಬರುತ್ತಿದ್ದು ಮೊದಲಭಾಗ ಈ ವರ್ಷದ ದೀಪಾವಳಿಗೆ ಮತ್ತು ಎರಡನೇ ಭಾಗ ಮುಂದಿನ ವರ್ಷದ ದೀಪಾವಳಿಗೆ ತೆರೆಗೆ ಬರಲಿದೆ, ಬಾಲಿವುಡ್ ನಟ ರಣಬೀರ್ ಕಪೂರ್ ಅವರು ಶ್ರೀರಾಮನಾಗಿ, ಸಾಯಿ ಪಲ್ಲವಿ ಅವರು ಸೀತೆಯಾಗಿ ಹಾಗೂ ಕನ್ನಡಿಗರ ಹೆಮ್ಮೆಯ ನಟ ರಾಕಿಂಗ್ ಸ್ಟಾರ್ ಯಶ್ ಅವರು ದಶಕಂಠ ರಾವಣನ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಇವರ ಜೊತೆಗೆ ನಟ ಸನ್ನಿ ಡಿಯೋಲ್ ಅವರು ಹನುಮಂತನಾಗಿ ಮತ್ತು ರವಿ ದುಬೆ ಅವರು ಲಕ್ಷ್ಮಣನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ರಾಕಿಂಗ್ ಸ್ಟಾರ್ ಯಶ್ ರಾವಣನಾಗಿ ಅಭಿನಯಿಸುತ್ತಿರುವ ಬಹು ನಿರೀಕ್ಷಿತ ಚಿತ್ರ ರಾಮಾಯಣ. ಈ ಚಿತ್ರದ ಬಗ್ಗೆ ನಿರ್ಮಾಪಕ ನಮಿತ್ ಮಲ್ಹೋತ್ರಾ ಅವರು ರಾಮನವಮಿಯ ಸಂದರ್ಭದಲ್ಲಿ ದೊಡ್ಡ ಅಪ್‌ಡೇಟ್ ಒಂದನ್ನು ಹಂಚಿಕೊಂಡಿದ್ದಾರೆ. ಏಪ್ರಿಲ್ 2ರಂದು 'ರಾಮ'ನ ವಿಶೇಷ ತುಣುಕನ್ನು ವಿಶ್ವಾದ್ಯಂತ ಅಭಿಮಾನಿಗಳ ಸಮ್ಮುಖದಲ್ಲಿ ಬಿಡುಗಡೆ ಮಾಡುವುದಾಗಿಯೂ ಅವರು ಘೋಷಿಸಿದ್ದಾರೆ. ಈ ಮೂಲಕ ಕಳೆದ ಹಲವು ವರ್ಷಗಳ ಕಾಲ ನಡೆದ ಸತತ ಪರಿಶ್ರಮದ ಮೊದಲ ನೋಟವನ್ನು ಜಗತ್ತಿಗೆ ಪರಿಚಯಿಸಲು ಚಿತ್ರತಂಡ ಸಜ್ಜಾಗಿದೆ.

ಈ ಕುರಿತು ಬರೆದುಕೊಂಡಿರುವ ನಮಿತ್, ರಾಮಾಯಣವು ನಮ್ಮೆಲ್ಲರ ಪರಂಪರೆಯಾಗಿದೆ. ಅತ್ಯಂತ ಜವಾಬ್ದಾರಿ ಮತ್ತು ಭಕ್ತಿಯಿಂದ ಈ ಮಹಾಕಾವ್ಯಕ್ಕೆ ನಾವೆಲ್ಲ ಸೇರಿ ಜೀವ ತುಂಬುತ್ತಿದ್ದೇವೆ. ಹನುಮ ಜಯಂತಿಯಂದು ನಡೆಯಲಿರುವ ಈ 'ಗ್ರ್ಯಾಂಡ್ ವರ್ಲ್ಡ್ ರಿವೀಲ್' ಕೇವಲ ಸಿನಿಮಾದ ಅಪ್‌ಡೇಟ್ ಮಾತ್ರವಲ್ಲ, ಇದು ವಿಶ್ವಾದ್ಯಂತ ಇರುವ ರಾಮಭಕ್ತರು ಮತ್ತು ಅಭಿಮಾನಿಗಳ ಸಂಭ್ರಮದ ಆಚರಣೆಯಾಗಲಿದೆ ಎಂದು ತಿಳಿಸಿದ್ದಾರೆ. ರಾಮಾಯಣ ಚಿತ್ರದ ತಾರಾಬಳಗವು ಅತ್ಯಂತ ಪ್ರಭಾವಶಾಲಿಯಾಗಿದ್ದು, ರಣಬೀರ್ ಕಪೂರ್ ಅವರು ಶ್ರೀರಾಮನಾಗಿ, ಸಾಯಿ ಪಲ್ಲವಿ ಅವರು ಸೀತೆಯಾಗಿ ಹಾಗೂ ಕನ್ನಡಿಗರ ಹೆಮ್ಮೆಯ ನಟ ಯಶ್ ಅವರು ದಶಕಂಠ ರಾವಣನ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಇವರ ಜೊತೆಗೆ ನಟ ಸನ್ನಿ ಡಿಯೋಲ್ ಅವರು ಹನುಮಂತನಾಗಿ ಮತ್ತು ರವಿ ದುಬೆ ಅವರು ಲಕ್ಷ್ಮಣನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಪ್ರೈಮ್ ಫೋಕಸ್ ಸ್ಟುಡಿಯೋಸ್, ಆಸ್ಕರ್ ವಿಜೇತ ಡಿ.ಎನ್.ಇ.ಜಿ. ಮತ್ತು ಯಶ್ ಅವರ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ಸಹಯೋಗದಲ್ಲಿ ತಯಾರಾಗುತ್ತಿರುವ ಈ ಚಿತ್ರವು ಐಮ್ಯಾಕ್ಸ್ ಆವೃತ್ತಿಯಲ್ಲಿ ತೆರೆಗೆ ಬರಲಿದೆ. ರಾಮಾಯಣ ಚಿತ್ರದ ಮೊದಲ ಭಾಗವು 2026ರ ದೀಪಾವಳಿ ವೇಳೆಗೆ ಮತ್ತು ಎರಡನೇ ಭಾಗವು 2027ರ ದೀಪಾವಳಿ ವೇಳೆಗೆ ಜಗತ್ತಿನಾದ್ಯಂತ ಬಿಡುಗಡೆಯಾಗಲಿದೆ.

ಏಪ್ರಿಲ್ 17ಕ್ಕೆ ಮಾಲಾಶ್ರೀ ಅಭಿನಯದ ಕೆಂಡದ ಸೆರಗು

ಇತಿಹಾಸ ಪ್ರಸಿದ್ಧ ದೇಶೀ ಕಲೆ ಕುಸ್ತಿ ಪಂದ್ಯವನ್ನು ಆಧರಿಸಿ ಅದರ ಸುತ್ತ ಹೆಣೆಯಲಾದ ಮಹಿಳಾ ಪ್ರಧಾನ ಕಥಾಹಂದರ ಒಳಗೊಂಡ ಕೆಂಡದ ಸೆರಗು ಚಿತ್ರದಲ್ಲಿ ಕನಸಿನ ರಾಣಿ ಮಾಲಾಶ್ರೀ ಅವರು ಪೊಲೀಸ್ ಕಮಿಷನರ್ ಪಾತ್ರದಲ್ಲಿ ನಟಿಸಿದ್ದು, ಭೂಮಿ ಶೆಟ್ಟಿ ಕುಸ್ತಿ ಪಟುವಾಗಿ ಬಣ್ಣ ಹಚ್ಚಿದ್ದಾರೆ. ನಿರ್ದೇಶಕ ರಾಕಿ ಸೋಮ್ಲಿ ಅವರೇ ಬರೆದ 'ಕೆಂಡದ ಸೆರಗು' ಕಾದಂಬರಿ ಆಧಾರಿತ ಚಲನಚಿತ್ರ ಇದಾಗಿದ್ದು ಮಹಿಳಾ ಪ್ರಧಾನ ಕಥಾನಕ ಹೊಂದಿರುವ ಈ ಚಿತ್ರದಲ್ಲಿ ಮಹಿಳೆಯ ಮೇಲೆ ಪ್ರತಿನಿತ್ಯ ಆಗುತ್ತಿರುವ ಶೋಷಣೆಯನ್ನು, ಮಹಿಳೆಯರು ಸಮಾಜವನ್ನು ಎದುರಿಸಬೇಕಾದ ರೀತಿ ಹಾಗೂ ಮಹಿಳಾ ಹಕ್ಕುಗಳ ಮೇಲೆ ಸುತ್ತುವ ಕತೆಯನ್ನು ನಿರೂಪಿಸಲಾಗಿದೆ,





ಬಹಳ ದಿನಗಳ ನಂತರ ನಟಿ ಮಾಲಾಶ್ರೀ ಮತ್ತೊಮ್ಮೆ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಂಡಿರುವ ಚಿತ್ರ ಕೆಂಡದ ಸೆರಗು. ಕಾದಂಬರಿಯೊಂದನ್ನು ಆಧರಿಸಿ ನಿರ್ಮಾಣವಾಗುತ್ತಿರುವ ಈ ಚಿತ್ರಕ್ಕೆ ರಾಕಿ ಸೋಮ್ಲಿ ಅವರು ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಕೆಂಡದ ಸೆರಗು ಚಿತ್ರವು ಸಾಮಾಜಿಕ ಸಂದೇಶದೊಂದಿಗೆ ಕ್ರೈಂ ತನಿಖೆಯ ಅಂಶವನ್ನೂ ಒಳಗೊಂಡ ವಿಭಿನ್ನ ಕಥೆಯಾಗಿದೆ. ಶ್ರೀಮುತ್ತು ಟಾಕೀಸ್ ಬ್ಯಾನರ್ ಅಡಿಯಲ್ಲಿ ಕೋಟ್ರೇಶ್‌ಗೌಡ ಅವರು ನಿರ್ಮಿಸಿರುವ ಈ ಚಿತ್ರದಲ್ಲಿ ಸ್ಯಾಂಡಲ್‌ವುಡ್ ಆ್ಯಕ್ಷನ್ ಕ್ವೀನ್ ಮಾಲಾಶ್ರೀ ಮತ್ತು ನಟಿ ಭೂಮಿ ಶೆಟ್ಟಿ ಅವರುಗಳು ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಶೋಭರಾಜ್, ಪ್ರತಿಮಾ ಠಾಕೂರ್, ಮೋಹನ್ ಕುಮಾರ್, ವರ್ಧನ್, ಯಶ್ ಶೆಟ್ಟಿ, ಸಿಂಧೂ ಲೋಕನಾಥ್, ಹರೀಶ್ ಅರಸು ಮುಂತಾದವರು ತಾರಾಬಳಗದಲ್ಲಿದ್ದಾರೆ. ಈ ಚಿತ್ರವು ಏಪ್ರಿಲ್ 17ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ.

ಈ ಚಿತ್ರದಲ್ಲಿ ಮಹಿಳೆಯ ಆತ್ಮಗೌರವ ಮತ್ತು ಹೋರಾಟದ ಕಥೆಯ ಜೊತೆಗೆ ಇಂದಿನ ಸಮಾಜದಲ್ಲಿ ಕೆಲವು ಯುವತಿಯರು ಎದುರಿಸುತ್ತಿರುವ ಮೋಸ ಮತ್ತು ಅಪಾಯಗಳನ್ನೂ ತೋರಿಸಲಾಗಿದೆ. ಕಥೆಯ ಒಂದು ಭಾಗದಲ್ಲಿ ಯುವತಿಯೊಬ್ಬಳು ಪ್ರೀತಿಯ ಹೆಸರಿನಲ್ಲಿ ಮೋಸಕ್ಕೆ ಒಳಗಾಗುತ್ತಾಳೆ (ಲವ್ ಜಿಹಾದ್). ತಪ್ಪಾದ ವ್ಯಕ್ತಿಯ ಮೇಲೆ ನಂಬಿಕೆ ಇಡುವುದರಿಂದ ಅವಳ ಜೀವನದ ದಿಕ್ಕೇ ಬದಲಾಗುತ್ತದೆ ಮತ್ತು ಅವಳು ಅನೈತಿಕ ವಲಯದ ಜಾಲದಲ್ಲಿ ಸಿಲುಕಿಕೊಳ್ಳುವ ಪರಿಸ್ಥಿತಿ ಎದುರಾಗುತ್ತದೆ. ಅಂತಹ ಸಂದರ್ಭದಲ್ಲಿ, ಮಾಲಾಶ್ರೀ ಅವರು ಶಕ್ತಿಶಾಲಿ ಪೊಲೀಸ್ ಅಧಿಕಾರಿಯಾಗಿ ಎಂಟ್ರಿಕೊಟ್ಟು ಆ ರಾಕೆಟ್‌ಅನ್ನು ಬಯಲಿಗೆಳೆಯುವ ಕಾರ್ಯಕ್ಕೆ ಮುಂದಾಗುತ್ತಾರೆ. ಅವರ ಪಾತ್ರವು ಅಪರಾಧ ಜಾಲವನ್ನು ಭೇದಿಸಿ ಸತ್ಯವನ್ನು ಹೊರತರುವ ಹೋರಾಟವನ್ನು ತೋರಿಸುತ್ತದೆ. ಸಮಾಜಕ್ಕೆ ಒಂದು ಉತ್ತಮ ಸಂದೇಶವನ್ನು ನೀಡುವ ಪ್ರಯತ್ನವೂ ಇದಾಗಿದೆ,

ಈ ಚಿತ್ರವು ಆಕ್ಷನ್ ಕ್ವೀನ್ ಮಾಲಾಶ್ರೀ ಅವರ ಮತ್ತೊಂದು ಪ್ರಭಾವಿ ಕಮ್‌ಬ್ಯಾಕ್ ಚಿತ್ರವಾಗಿದ್ದು, ಸ್ಯಾಂಡಲ್‌ವುಡ್‌ನ ಆ್ಯಕ್ಷನ್ ಕ್ವೀನ್ ಎಂಬ ಹೆಸರನ್ನು ಮತ್ತೆ ನೆನಪಿಸುವಂತಿದೆ. ಸಾಮಾಜಿಕ ಸಂದೇಶ, ಭಾವನಾತ್ಮಕ ಕಥೆ ಮತ್ತು ರೋಚಕ ಘಟನೆಗಳ ಸಂಯೋಜನೆಯೊಂದಿಗೆ ಕೆಂಡದ ಸೆರಗು ಪ್ರೇಕ್ಷಕರಲ್ಲಿ ಚಿಂತನೆ ಹುಟ್ಟಿಸುವ ಚಿತ್ರವಾಗಲಿದೆ. ವಿಪಿನ್ ಅವರ ಛಾಯಾಗ್ರಹಣ, ವೀರೇಶ್ ಕಂಬಳಿ ಅವರ ಸಂಗೀತ ನಿರ್ದೇಶನ, ಶ್ರೀಕಾಂತ್ ಅವರ ಸಂಕಲನ ಈ ಚಿತ್ರಕ್ಕಿದೆ.

ಹಾರರ್ ಥ್ರಿಲ್ಲರ್ ಗೊಗ್ಗಯ್ಯ ಟ್ರೈಲರ್



ಸಾಮಾನ್ಯವಾಗಿ ಚಿಕ್ಕಮಕ್ಕಳು ಊಟ ಮಾಡದಿದ್ದಾಗ ತಾಯಿ ಹೇಳುತ್ತಾಳೆ ಊಟ ಮಾಡು ಕಂದಾ, ಇಲ್ಲದಿದ್ದರೆ ಆ ಗೊಗ್ಗಯ್ಯ ಬರ್ತಾನೆ ಎಂದಾಗ ಆ ಮಗು ಗೊಗ್ಗಯ್ಯನಿಗೆ ಹೆದರಿ ತಕ್ಷಣ ತಾಯಿ ಹೇಳಿದ ಹಾಗೆ ಕೇಳುತ್ತದೆ, ಚಿಕ್ಕ ಮಕ್ಕಳಲ್ಲಿ ಗೊಗ್ಗಯ್ಯ ಎಂದರೆ ಭೂತ ಎಂಬ ಭಾವನೆಯನ್ನು ಹುಟ್ಟು ಹಾಕಲಾಗಿದೆ, ಇದೀಗ ಗೊಗ್ಗಯ್ಯ ಎಂಬ ಶೀರ್ಷಿಕೆಯಲ್ಲೇ ಕನ್ನಡ ಚಲನಚಿತ್ರವೊಂದು ನಿರ್ಮಾಣವಾಗಿದ್ದು, ತೆರೆಗೆ ಬರಲು ಸಿದ್ಧವಾಗಿದೆ. ಇತ್ತೀಚೆಗೆ ಈ ಚಿತ್ರದ ಟ್ರೈಲರ್ ಹಾಗೂ ಹಾಡು ಬಿಡುಗಡೆ ಸಮಾರಂಭ ಅದ್ದೂರಿಯಾಗಿ ನೆರವೇರಿತು. ವಂದನಾ ಎಂಟರ್‌ಪ್ರೈಸಸ್ ಮೂಲಕ ಶ್ರೀಮತಿ ಸುಧಾ ಜೆ. ಅವರ ನಿರ್ಮಾಣದ ಈ ಚಿತ್ರಕ್ಕೆ ವಸಂತ್ ಕಥೆ ಬರೆದು ನಿರ್ದೇಶನದ ಜತೆಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ತನ್ಮಯ್ ಎಸ್.ಆನಂದ್‌ಕುಮಾರ್ ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ರಚನೆಯ ಜತೆಗೆ ಸಹಕಾರ ನಿರ್ದೇಶನ ಮಾಡಿದ್ದಾರೆ. ರಾಜ್ ಭಾಸ್ಕರ್ ಅವರ ಹಿನ್ನೆಲೆ ಸಂಗೀತ, ರವಿ ಬೆಳಗುಂದಿ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ಈ ಸಂದರ್ಭದಲ್ಲಿ ನಿರ್ದೇಶಕ ವಸಂತ್ ಮಾತನಾಡುತ್ತ ಚಿತ್ರರಂಗದಲ್ಲಿ ಅಸೋಸಿಯೇಟ್ ಆಗಿ ತುಂಬಾ ವರ್ಷಗಳವರೆಗೆ ಕೆಲಸ ಮಾಡಿದ ನಂತರ ಜಗ್ಗೇಶ್ ಅಭಿನಯದ ಮಿಸ್ಟರ್ ಬಕ್ರ, ಕೂಲ್ ಗಣೇಶ ಅಲ್ಲದೆ ಹೊಟ್ಟೆ ಪಾಡು ಚಿತ್ರಗಳನ್ನು ನಿರ್ದೇಶಿಸಿದ್ದೆ. ಅಲ್ಲದೆ ಪ್ರಸ್ತುತ ಗೊಗ್ಗಯ್ಯ ಎಂಬ ಚಿತ್ರಕ್ಕೆ ಕಥೆ ಬರೆದು ನಿರ್ದೇಶಿಸಿದ್ದೇನೆ. ಅಲ್ಲದೆ ಸಂಗೀತ ನಿರ್ದೇಶನದ ಜೊತೆಗೆ ಚಿತ್ರದ ನಾಯಕನಾಗಿಯೂ ಅಭಿನಯಿಸಿದ್ದೇನೆ. ರಾಮನವಮಿಯ ಸಂದರ್ಭದಲ್ಲಿ ಈ ಚಿತ್ರದ ಟ್ರೈಲರ್ ರಿಲೀಸಾಗಿದೆ, ನಿಜವಾದ ಗೊಗ್ಗಯ್ಯ ಅಂದರೇನು ಅಂತ ಸಿನಿಮಾದಲ್ಲಿ ಹೇಳಿದ್ದೇನೆ, ಹಾರರ್, ಕಾಮಿಡಿ ಜಾನರ್‌ನಲ್ಲಿ ಮೂಡಿಬಂದಿರುವ ನಮ್ಮ ಚಿತ್ರ ಏಪ್ರಿಲ್ 10ರಂದು ರಿಲೀಸಾಗುತ್ತಿದೆ, ಈ ಚಿತ್ರದಲ್ಲಿ ಮೂರು ಹಾಡುಗಳು ಹಾಗೂ 4 ಆಕ್ಷನ್ ಇದ್ದು, ರಾಮನವಮಿಯ ಪ್ರಯುಕ್ತ ನೀ ಹೆದರದಿರು ಕಂದ ಎಂಬ ಹನುಮಂತನ ಕುರಿತಾದ ಹಾಡನ್ನು ರಿಲೀಸ್ ಮಾಡಿದ್ದೇವೆ. ಕೈಲಾಶ್‌ಖೇರ್ ಅವರ ಕಂಠದಲ್ಲಿ ಮೂಡಿಬಂದಿರುವ ಈ ಹಾಡಿಗೆ ತನ್ಮಯ್ ಸಾಹಿತ್ಯ ಬರೆದಿದ್ದಾರೆ. ಸಿರಿ ಮ್ಯೂಸಿಕ್ ಯೂಟ್ಯೂಬ್ ಚಾನಲ್‌ನಲ್ಲಿ ಈ ಹಾಡು ಬಿಡುಗಡೆಯಾಗಿದೆ. ಕಾಮಿಡಿ, ಹಾರರ್ ಹಾಗೂ ಸೆಂಟಿಮೆಂಟ್ ಕಥಾಹಂದರ ಹೊಂದಿರುವ ಈ ಚಿತ್ರ ಏಪ್ರಿಲ್ 10 ರಂದು ಬಿಡುಗಡೆಯಾಗುತ್ತಿದೆ ಎಂದರು.

ನಿರ್ಮಾಪಕಿ ರಾಧಾ ಜೆ. ಮಾತನಾಡುತ್ತ ಸಾಮಾನ್ಯವಾಗಿ ಮಕ್ಕಳನ್ನು ಹೆದರಿಸಲು ಈ ಪದ ಬಳಸುತ್ತಿದ್ದೆವು, ಕಥೆ ಪೂರಕವಾಗಿದೆ ಎಂದು ನಾನೇ ಈ ಶೀರ್ಷಿಕೆ ಕೊಟ್ಟೆ ಎಂದು ತಿಳಿಸಿದರು. ನಾಯಕಿ ಸ್ನೇಹ ಮಾತನಾಡುತ್ತ ತುಂಬಾ ಸಿನಿಮಾ ಮಾಡಿದ್ದರೂ ಲೀಡ್ ರೋಲ್ ಇದೇ ಮೊದಲು, ಸಸ್ಪೆನ್ಸ್, ಥ್ರಿಲ್ಲರ್, ಹಾರರ್ ಇರೋ ಚಿತ್ರವಿದು. ಸಾಹಸ ಸಂಯೋಜಕ ಕೌರವ ವೆಂಕಟೇಶ್ ಚಿತ್ರದಲ್ಲಿ ಅಭಿನಯ ಕೂಡ ಮಾಡಿದ್ದಾರೆ. ಖಳನಾಯಕನಾಗಿ ವೈಭವ ನಾಗರಾಜ್ ನಟಿಸಿದ್ದಾರೆ. ಸಿರಿ ಮ್ಯೂಸಿಕ್‌ನ ಸುರೇಶ್ ಚಿಕ್ಕಣ್ಣ ಹಾಗೂ ಚಿತ್ರಕಥೆ, ಸಂಭಾಷಣೆ, ಗೀತರಚನೆಯ ಜತೆಗೆ ಸಹಕಾರ ನಿರ್ದೇಶನ ಮಾಡಿರುವ ತನ್ಮಯ್ ಎಸ್. ಆನಂದ್ ಕುಮಾರ್ ಸೇರಿದಂತೆ ಚಿತ್ರತಂಡದ ಅನೇಕ ಸದಸ್ಯರು ಗೊಗ್ಗಯ್ಯ ಚಿತ್ರದ ಕುರಿತಂತೆ ಮಾತನಾಡಿದರು.

ಫಿನಿಕ್ಸ್ ಪ್ರೇಮ್ಸ್ ಸ್ಟುಡಿಯೋಸ್ ಪ್ರೇಮ್ ಹೊಸ ನಿರ್ಮಾಣ ಸಂಸ್ಥೆ



ಇತ್ತೀಚೆಗೆ ಕೆಡಿ ಚಿತ್ರದ ಸರ್ನೇ ವಿವಾದಾತ್ಮಕ ಹಾಡಿನ ಮೂಲಕ ಸುದ್ದಿಯಾಗಿದ್ದ ನಿರ್ದೇಶಕ ಪ್ರೇಮ್ ಈಗ ಹೊಸದೊಂದು ಸಾಹಸಕ್ಕೆ ಮುಂದಾಗಿದ್ದಾರೆ, ಶ್ರೀರಾಮ ನವಮಿಯ ಸಂಭ್ರಮದಲ್ಲಿ ಖುಷಿ ಸುದ್ದಿಯನ್ನು ಅವರು ಹಂಚಿಕೊಂಡಿದ್ದಾರೆ. ಹೊಸ ಪ್ರತಿಭೆಗಳಿಗೆ ವೇದಿಕೆ ನೀಡುವ ಉದ್ದೇಶದಿಂದ 'ಫಿನಿಕ್ಸ್ ಪ್ರೇಮ್ಸ್ ಸ್ಟುಡಿಯೋಸ್' ಎಂಬ ಚಿತ್ರ ನಿರ್ಮಾಣ ಸಂಸ್ಥೆಯನ್ನು ಹುಟ್ಟು ಹಾಕಿದ್ದಾರೆ. ಅದರ ಭಾಗವಾಗಿ ಮೊದಲ ಚಿತ್ರವನ್ನು ಕೂಡ ಘೋಷಣೆ ಮಾಡಿದ್ದಾರೆ. ತಮ್ಮ ಶಿಷ್ಯ ಬಳಗದಲ್ಲೇ ಇದ್ದ ಮಂಜುನಾಥ್ ಬಿ.ಎಸ್. ಎಂಬುವವರಿಗೆ 'ಫಿನಿಕ್ಸ್ ಪ್ರೇಮ್ಸ್ ಸ್ಟುಡಿಯೋಸ್' ಅಡಿ ನಿರ್ಮಾಣವಾಗುತ್ತಿರುವ ಮೊದಲ ಚಿತ್ರದ ನಿರ್ದೇಶನದ ಜವಾಬ್ದಾರಿಯನ್ನು ವಹಿಸಿದ್ದಾರೆ.

ಮಂಜುನಾಥ್ ಬಿ.ಎಸ್. ನಿರ್ದೇಶನದ ಹೊಸ ಚಿತ್ರದಲ್ಲಿ ರಾಣಾ ನಾಯಕ

ಶ್ರೀರಾಮನವಮಿಯ ಸಂಭ್ರಮದಲ್ಲಿ ಸ್ಪೆಷಲ್ ವಿಡಿಯೋ ರಿಲೀಸ್ ಮಾಡಿರುವ ಪ್ರೇಮ್ ಈ ಹೊಸ ಸಾಹಸದ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. ಈ ಹೊಸ ಚಿತ್ರದ ಟೈಟಲ್ ಹಾಗೂ ಇನ್ನುಳಿದ ತಾಂತ್ರಿಕ ವರ್ಗದ ವಿವರಗಳನ್ನು ಚಿತ್ರತಂಡ ಶೀಘ್ರದಲ್ಲೇ ಹಂಚಿಕೊಳ್ಳಲಿದೆ. ಅಂದಹಾಗೆ ರಕ್ಷಿತಾ ಪ್ರೇಮ್ ಅವರ ಸಹೋದರ ರಾಣಾ ಈ ಚಿತ್ರದಲ್ಲಿ ನಾಯಕನಾಗಿ ನಟಿಸಲಿದ್ದಾರೆ. ಒಂದುಕಡೆ ದೊಡ್ಡ ದೊಡ್ಡ ಸಿನಿಮಾಗಳನ್ನು ನಿರ್ದೇಶನ ಮಾಡುವ ಜೊತೆಗೆ ತಮ್ಮ ಬ್ಯಾನರ್‌ನಲ್ಲಿ ಹೊಸ ಹೊಸ ಪ್ರತಿಭೆಗಳಿಗೆ ಅವಕಾಶ ಕೊಡಲು ನಿರ್ದೇಶಕ ಪ್ರೇಮ್ ಹಾಗೂ ರಕ್ಷಿತಾ ಪ್ರೇಮ್ ಅವರು ಮನಸ್ಸು ಮಾಡಿದ್ದಾರೆ. ಕಳೆದ ಹಲವು ವರ್ಷಗಳಿಂದ ಪ್ರೇಮ್ ಅವರ ಜೊತೆ ಸಹ-ನಿರ್ದೇಶಕರಾಗಿ ಹಾಗೂ ಚಿತ್ರಸಾಹಿತಿಯಾಗಿಯೂ ಗುರುತಿಸಿಕೊಂಡಿರುವ ಬಿ.ಎಸ್. ಮಂಜುನಾಥ್ ಅವರು ಈ ಚಿತ್ರದ ಮೂಲಕ ನಿರ್ದೇಶನಕ್ಕೆ ಕ್ಯಾಪ್ ತೊಟ್ಟಿದ್ದಾರೆ. ಫಿನಿಕ್ಸ್ ಪ್ರೇಮ್ಸ್ ಸ್ಟುಡಿಯೋಸ್ ಮೂಲಕ ಮುಂದಿನ ದಿನಗಳಲ್ಲಿ ಮತ್ತಷ್ಟು ಯುವ ಪ್ರತಿಭೆಗಳಿಗೆ ಅವಕಾಶ ನೀಡುವ ಮೂಲಕ ಹೊಸ ಚಿತ್ರಗಳ ನಿರ್ಮಾಣದ ಪ್ರಯತ್ನ ನಡೆಯಲಿದೆ. 'ಫಿನಿಕ್ಸ್ ಪ್ರೇಮ್ಸ್ ಸ್ಟುಡಿಯೋಸ್' ಸಂಸ್ಥೆಯ ನಿರ್ಮಾಣದ ಮೊದಲ ಚಿತ್ರಕ್ಕೆ ಛಾಯಾಗ್ರಾಹಕರಾಗಿ ವಿಲಿಯಂ ಡೇವಿಡ್ ಕೆಲಸ ಮಾಡಲಿದ್ದು, ರೋಮಿಯೋ ಎಂಬುವವರು ಈ ಚಿತ್ರಕ್ಕೆ ಸಂಗೀತ ಸಂಯೋಜಿಸುತ್ತಿದ್ದಾರೆ. ಸದ್ಯ ನಿರ್ದೇಶಕ ಪ್ರೇಮ್ ಅವರು "ಕೆಡಿ" ಸಿನಿಮಾದ ಕೆಲಸಗಳಲ್ಲಿ ಬ್ಯುಸಿಯಾಗಿದ್ದಾರೆ. ಚಿತ್ರದ ಅಂತಿಮ ಹಂತದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಭರದಿಂದ ಸಾಗುತ್ತಿದ್ದು ಶೀಘ್ರದಲ್ಲೇ ಚಿತ್ರದ ಟ್ರೈಲರ್ ಕೂಡ ರಿಲೀಸ್ ಆಗಲಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26